ಸಂಪುಟ: 05 ಸಂಚಿಕೆ: 48 ಪುಟಗಳು: 08 ಶುಕ್ರವಾರ 02 ಮೇ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಜನರು ತಮಗೆ ಬೇಕಾದುದನ್ನು ಸ್ಪಷ್ಟವಾಗಿ ಹೇಳುವಲ್ಲಿ ಹೇಗೆ ಕಳಪೆಯಾಗಿದ್ದಾರೆ ಎಂಬುದನ್ನು ನಾನು ಪದೇ ಪದೇ ನೋಡಿದ್ದೇನೆ - ಕೆಲಸದ ಕೇಂದ್ರವು ತಮಗೆ ಬೇಡವಾದದ್ದನ್ನು ಮಾಡುವುದನ್ನು ನೋಡುವವರೆಗೆ...

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

# ಬೆಂಗಳೂರು 2ನೇ ಏರ್‌ಪೋರ್ಟ್: ಮಾಗಡಿ ರೈತರಿಂದ ಭಾರಿ ವಿರೋಧ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ 2 ನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ವಿರೋಧಿಸಿ ಮಾಗಡಿ ಚಿಕ್ಕಸೋಲೂರು ಗ್ರಾಮದ ಮಾರಮ್ಮ ದೇವಾಲಯ ಮುಂಭಾಗ ಸಾವಿರಾರು ರೈತರು ಪ್ರತಿಭಟಿಸಿದರು.

ಸೋಲೂರು ಗ್ರಾಪಂ ಅಧ್ಯಕ್ಷ ಮುಜಾಯಿದ್ ಪಾಷ ಮಾತನಾಡಿ, ವಿಮಾನ ನಿಲ್ದಾಣ ನಿರ್ಮಾಣ ಬೇಡ ಎಂದು ಗ್ರಾ.ಪಂ.ನಿಂದ ರೆಜೆಲೇಷನ್ ಮಾಡಿ ಸರಕಾರಕ್ಕೆ ಪತ್ರ ಬರೆಯಲಾಗುವುದು. ರೈತರು ಫಲವತ್ತಾದ ಭೂಮಿಯನ್ನು ಪೂರ್ವಜರ ಕಾಲದಿಂದ ಕಾಪಾಡಿ ಕೊಂಡು ಬಂದಿದ್ದಾರೆ. ಜಮೀನು ಕಳೆದುಕೊಂಡರೆ ಎಲ್ಲಿಗೆ ಗೂಳೆ ಹೋಗಲು ಸಾಧ್ಯ, ಈ ಭಾಗದಲ್ಲಿ ಅಲ್ಪ, ಸಲ್ಪ ಜಮೀನನ್ನು ಇಟ್ಟುಕೊಂಡಿದ್ದಾರೆ. ರೈತರ ಜಮೀನಿನ ಪ್ರತಿ ಎಕರೆಗೆ 15 ಲಕ್ಷರೂ ನೀಡಿದರೆ ಆ ಹಣದಿಂದ ಬೇರೆಡೆ ಒಂದು ನಿವೇಶನ ಖರೀದಿಸಲು ಸಾಧ್ಯವಿಲ್ಲ. ಹೋಬಳಿಯಲ್ಲಿ ವಿಮಾನ ನಿಲ್ದಾಣ ಮಾಡಲು ಯಾವುದೇ ಕಾರಣಕ್ಕೂ ಬೇಡ ಎಂದು ಶಾಸಕರು, ಸಂಸದರಿಗೆ ಮನವಿ ಮಾಡಲಾಗುವುದು ಎಂದರು.

**ಎಕರೆಗೆ 15 ಲಕ್ಷ ರೂ. ಪರಿಹಾರ ಕೊಟ್ರೆ ಹೇಗೆ**

**ಬರಡು ಭೂಮಿ ವಿಮಾನ ನಿಲ್ದಾಣಕ್ಕೆ ಸೂಕ್ತ:** ಗ್ರಾಪಂ ಸದಸ್ಯ ಬಿ.ಸಿ.ಮುನಿಕೃಷ್ಣ ಮಾತನಾಡಿ, ರೈತರು ಎಲ್ಲಿಗೆ ಹೋಗಿ ಜೀವನ ಮಾಡುವುದು ಅವರ ಮಕ್ಕಳ ಮುಂದಿನ ಭವಿಷ್ಯವೇನು, ಕೇಂದ್ರ, ರಾಜ್ಯ ಸರಕಾರಗಳು ಮಾತು ಎತ್ತಿದರೆ ರೈತರ ಪರವಾಗಿದ್ದೇವೆ ಎನ್ನುತ್ತಾರೆ. ಆದರೆ ರೈತರನ್ನು ಒಕ್ಕಲೆಬ್ಬಿಸುವ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಇಂತಹ ಭೂಮಿಯೇ ಬೇಕಾ, ಈ ಭಾಗದಲ್ಲೇ ಬರಡು ಭೂಮಿ ವಿಮಾನ ನಿಲ್ದಾಣಕ್ಕೆ ಸೂಕ್ತವಾದ ಜಾಗವನ್ನೇ ತೋರಿಸುತ್ತೇವೆ ಬರಲಿ, ಯಾವುದೇ ಕಾರಣಕ್ಕೂ ಒಂದಿಚ್ಚು ಭೂಮಿ ನೀಡುವುದಿಲ್ಲ. ಅದನ್ನು ಮೀರಿ ನಿಲ್ದಾಣಕ್ಕೆ ಭೂಮಿ ಸ್ವಾಧೀನಪಡಿಸಿಕೊಳ್ಳಲು ಮುಂದಾದರೆ, ಮುಂದೆ ಏನಾಗುತ್ತದೆ ಎಂದು ಅವರೇ ಊಹಿಸಿಕೊಳ್ಳಬೇಕು. ನಾವು



ಸತ್ತರು ಭೂಮಿ ಕೊಡುವುದಿಲ್ಲ, ನಮ್ಮ ಸಮಾಧಿ ಮೇಲೆ ವಿಮಾನ ನಿಲ್ದಾಣ ಮಾಡಬೇಕು. ಹೋರಾಟ ಮಾಡಿ ನಮ್ಮ ಭೂಮಿ ನಾವು ಉಳಿಸಿಕೊಳ್ಳುತ್ತೇವೆ. ಇದನ್ನು ಮುಂದಿನ ಪೀಳಿಗೆಗೆ ಉಳಿಸುತ್ತೇವೆ ಎಂದರು.

**ಜೀವ ಹೋದ್ರೂ ವಿಮಾನ ನಿಲ್ದಾಣಕ್ಕೆ ಜಮೀನು ಕೊಡಲ್ಲ**

ದಲಿತ ಮುಖಂಡ ರಂಗಪ್ಪ ಮಾತನಾಡಿ, ವಿಮಾನ ನಿಲ್ದಾಣಕ್ಕೆ ಈ ಭಾಗದ 16 ಗ್ರಾಮಗಳನ್ನು ಗುರುತಿಸಿದ್ದಾರೆ. ಅಜ್ಜಪ್ಪ ದೇವಾಲಯ ಸೇರಿದಂತೆ ಪ್ರಮುಖವಾದ ಹಲವಾರು ಪುಣ್ಯಕ್ಷೇತ್ರಗಳಿವೆ. ದಲಿತರ ಪರವಾದ ಸರಕಾರ ಎನ್ನುತ್ತಾರೆ ಆದರೆ ವಿಮಾನ ನಿಲ್ದಾಣ ನಿರ್ಮಿಸಲು ದಲಿತರನ್ನು ಒಕ್ಕಲೆಬ್ಬಿಸುವ ಷಡ್ಯಂತ್ರ ನಡೆಸುವುದು ಸರಿಯೇ, ನಮ್ಮ ಜೀವ ಕಳೆದುಕೊಂಡರೂ ವಿಮಾನ ನಿಲ್ದಾಣಕ್ಕೆ ಜಮೀನು ನೀಡುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ನ್ಯಾಯಬೆಲೆ ಅಂಗಡಿ ಮಾಲೀಕ ವೇಣುಗೋಪಾಲ್ ಮಾತನಾಡಿದರು.

ಸೋಲೂರು ಗ್ರಾಪಂ ಮಾಜಿ ಅಧ್ಯಕ್ಷ ರಾಜೇಶ್, ಸಾಕಮ್ಮ, ಜಯಮ್ಮ, ಚಂದ್ರಕಲಾ, ಸರೋಜ, ರಂಗಮ್ಮ, ಮರಿಯಮ್ಮ, ನಾಗಮ್ಮ, ಗಂಗಲಕ್ಷ್ಮಮ್ಮ, ಸವಿತಾ, ಮಹೇಶ್, ಕೆಂಪಯ್ಯ, ಕೆಂಪ ರಾಜು, ಕರಿಗೌಡ, ಚಿಕ್ಕೇಗೌಡ, ಗಂಗಾಧರ್, ರಂಗನಾಥ್, ಸುರೇಶ್, ಹರ್ಷ, ಗಂಗಮ್ಮ, ಉಮಾದೇವಿ, ರತ್ನಮ್ಮ ಸೇರಿದಂತೆ 500ಕ್ಕೂ ಹೆಚ್ಚು ಮಂದಿ ರೈತರು ಪ್ರತಿಭಟನೆ ನಡೆಸಿ ಸರಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

**ನೀರು ಸಿಗದಂತಹ ಭೂಮಿ ಆಯ್ಕೆ ಮಾಡಿಕೊಳ್ಳಿ**

ಸಾಫ್ಟ್‌ವೇರ್ ಉದ್ಯೋಗಿ ದರ್ಶಿತ್ ಮಾತನಾಡಿ, ವ್ಯವಸಾಯವನ್ನೇ ನಂಬಿಕೊಂಡು ಇಲ್ಲಿನ ಜನ ಜೀವನ ಮಾಡುತ್ತಿದ್ದಾರೆ. ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸೂಚಿಸಿರುವ 5 ಸಾವಿರ ಎಕರೆ ಪ್ರದೇಶದಲ್ಲಿ ರಾಗಿ ಬೆಳೆ ಬೆಳೆಯಲಾಗುತ್ತಿದೆ. ಇಂಥಹ ಸಿರಿಧಾನ್ಯ ಬೆಳೆಯುವ ಭೂಮಿಯಲ್ಲಿ ನಿಲ್ದಾಣ ಮಾಡಿದರೆ ಹೇಗೇ ಸಾಧ್ಯ. ಶಿರಾ ಭಾಗದಲ್ಲಿ ನೀರು ಸಿಗದಂತಹ ಭೂಮಿ ಇದೆ. ಅಲ್ಲಿ ನಿರ್ಮಿಸಿ ಆ ಭಾಗ ಅಭಿವೃದ್ಧಿಯಾಗಲಿದೆ ಅಥವಾ ಎಚ್ಎಎಲ್ ಖಾಲಿ ಇದ್ದು ಅದನ್ನು ಉಪಯೋಗಿಸಿಕೊಳ್ಳಲಿ ಎಂದರು.

## ಡಿಕೆ ಸುರೇಶ್ ಪತ್ನಿ ಎಂದು ವಿಡಿಯೋ ಮಾಡಿದ ಶಿಕ್ಷಕಿ

• ಉದಯವಾಹಿನಿ, ರಾಮನಗರ

ಮಾಜಿ ಸಂಸದ ಡಿ ಕೆ ಸುರೇಶ್ ಪತ್ನಿ ಎಂದು ಹೇಳಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿದ್ದ ಪವಿತ್ರಾ ಎಂಬ ಮಹಿಳೆ ಈಗ ಪೊಲೀಸರ ಅತಿಥಿಯಾಗಿದ್ದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಮೈಸೂರಿನ ಇಲವಾಲದಲ್ಲಿ ಸರಕಾರಿ ಶಾಲಾ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಪವಿತ್ರಾರನ್ನು ವಕೀಲ ಪ್ರದೀಪ್ ಎಂಬುವವರು ನೀಡಿದ್ದ ದೂರಿನನ್ವಯ ರಾಮನಗರ ಸಿಇಎನ್ ಪೊಲೀಸರು ವಶಕ್ಕೆ ಪಡೆದು ಕೋರ್ಟ್ ಮುಂದೆ ಹಾಜರುಪಡಿಸಿದ್ದರು. ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಮ್‌ನಲ್ಲಿ ಶಿಕ್ಷಕಿ ಪವಿತ್ರಾ ಏ. 8ರಂದು ವಿಡಿಯೋ ಹರಿಬಿಟ್ಟಿದ್ದರು. ಇನ್‌ಸ್ಟಾಗ್ರಾಮ್‌ನಲ್ಲಿ ಪವಿತ್ರ 256 ಎಂಬ ಹೆಸರಿನಲ್ಲಿ ಹಾಗೂ ಫೇಸ್‌ಬುಕ್‌ನಲ್ಲಿ ಪವಿತ್ರ ಡಿಕೆ ಸುರೇಶ್ ಎಂಬ ಹೆಸರಿನಲ್ಲಿ ಖಾತೆ ಹೊಂದಿರುವ ಪವಿತ್ರಾ, ಸುರೇಶ್ ಅವರ ಚಿತ್ರದೊಂದಿಗೆ ತನ್ನ ಚಿತ್ರವನ್ನು ಎಡಿಟ್ ಮಾಡಿ ಜೋಡಿಸಿ ವಿಡಿಯೋ ಮಾಡಿದ್ದರು. ವಿಡಿಯೋದಲ್ಲಿ ಪವಿತ್ರಾ, ಡಿ ಕೆ ಸುರೇಶ್ ಎಂದಿರುವ ನಕಲಿ ಮತದಾರರ ಗುರುತಿನ ಚೀಟಿಯನ್ನು ಸಹ ಪೋಸ್ಟ್ ಮಾಡಿದ್ದರು.

**ಪವಿತ್ರಾ ಈ ರೀತಿ ಹೇಳಿದ್ಯಾಕೆ:** ಪವಿತ್ರಾ, ಪತಿಯಿಂದ ವಿಚ್ಛೇದನ ಪಡೆದಿದ್ದು, ಅಕ್ಕಪಕ್ಕದ ಮನೆಯವರಿಂದ ಪವಿತ್ರಾ ಅವರಿಗೆ ಕಿರಿಕಿರಿ ಹೆಚ್ಚಾಗಿತ್ತು ಎನ್ನಲಾಗುತ್ತಿದೆ. ಇದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಹಾಗೂ ಡಿಕೆ ಸುರೇಶ್ ಪತ್ನಿ ಎಂದರೆ ಜನ ಹೆದರುತ್ತಾರೆ ಎಂಬ ಕಾರಣಕ್ಕಾಗಿ ಈ ರೀತಿ ವಿಡಿಯೋ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

## ಪ್ರಜ್ವಲ್ ಪರ ಹೈಕೋರ್ಟ್ ಮೊರೆ ಹೋದ ಭವಾನಿ ರೇವಣ್ಣ

• ಉದಯವಾಹಿನಿ, ಬೆಂಗಳೂರು

ಹಾಸನ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯದಲ್ಲಿ ಶುಕ್ರವಾರ ಆರಂಭ ವಾಗಲಿರುವ ಸಾಕ್ಷಿಗಳ ವಿಚಾರಣೆಗೆ ತಡೆ ನೀಡುವಂತೆ ಪುತ್ರನ ಪರವಾಗಿ ಭವಾನಿ ರೇವಣ್ಣ ಕರ್ನಾಟಕ ಹೈಕೋರ್ಟ್ ಮೊರೆ ಹೋಗಿದ್ದಾರೆ. ಸಾಕ್ಷ್ಯ ವಿಚಾರಣೆ ನಿಗದಿಯಾಗಿರುವ ಹಿನ್ನೆಲೆಯಲ್ಲಿ ರಜೆ ದಿನದಂದೇ ತುರ್ತು ವಿಚಾರಣೆ ಕೋರಿ ಭವಾನಿ ರೇವಣ್ಣ ಸಲ್ಲಿಸಿರುವ ಅರ್ಜಿ ಶುಕ್ರವಾರ ವಿಚಾರಣೆಗೆ ಬರಲಿದೆ.

ವಿಚಾರಣಾ ನ್ಯಾಯಾಲಯದಲ್ಲಿ ವಕೀಲರ ನೇಮಕಕ್ಕೆ ಕಾಲಾವಕಾಶ ನೀಡಬೇಕೆಂದು ಕೋರಲಾಗಿತ್ತು. ಜತೆಗೆ, ಕಾನೂನು ಸೇವೆಗಳ ಪ್ರಾಧಿಕಾರದ ವಕೀಲರ ನೇಮಕಕ್ಕೆ ತಡೆ ನೀಡಬೇಕು ಮತ್ತು ಕೋರ್ಟ್ ಆದೇಶಗಳ ದೃಢೀಕೃತ ಪ್ರತಿ ಒದಗಿಸಲು ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶನ ನೀಡಬೇಕು. ಅಲ್ಲಿಯವರೆಗೆ ವಿಚಾರಣಾ ನ್ಯಾಯಾಲಯದ ಸಾಕ್ಷ್ಯ ವಿಚಾರಣೆಗೆ ತಡೆ ನೀಡಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ. ವಿಶೇಷ ಕೋರ್ಟ್ ಮೇ 2ರಿಂದ ಸಾಕ್ಷಿಗಳ ವಿಚಾರಣೆ ಕೈಗೆತ್ತಿಕೊಳ್ಳುವುದಾಗಿ ಆದೇಶಿಸಿದೆ. ಹಾಗಾಗಿ, ಭವಾನಿ ರೇವಣ್ಣ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

## ನಾನು ಮೋದಿ, ಅಮಿತ್ ಶಾ ಸೇರಿ ಯಾರಿಗೂ ಹೆದರಲ್ಲ!

• ಉದಯವಾಹಿನಿ, ಹುಬ್ಬಳ್ಳಿ

ನಾನು ಮೋದಿ, ಅಮಿತ್ ಶಾ ಸೇರಿದಂತೆ ಯಾರಿಗೂ ಹೆದರಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬೆಲೆ ಏರಿಕೆ ಖಂಡಿಸಿ ನಡೆದ ಪ್ರತಿಭಟನಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ಕೊಡುವ ಕೆಲಸ ಇಲ್ಲಿಂದ ನಡೆಯುತ್ತಿದೆ ಎಂದು ಹೇಳಿದರು.

ಹುಬ್ಬಳ್ಳಿಯಲ್ಲಿ ನಡೆದ ಬೃಹತ್ ಪ್ರತಿಭಟನಾ ಸಮಾವೇಶದಲ್ಲಿ ಮಾತನಾಡಿದ ಮಲ್ಲಿಕಾರ್ಜುನ ಖರ್ಗೆ, ಈ ರ‍್ಯಾಲಿ ಕೇವಲ ಕರ್ನಾಟಕಕ್ಕೆ ಸೀಮಿತವಲ್ಲ, ಎಚ್ಚರಿಕೆ ಗಂಟೆ ಕೊಡುವ ಕೆಲಸ ಇಲ್ಲಿಂದ ನಡೀತಿದೆ. ಕಾಂಗ್ರೆಸ್ ಪ್ರತಿಭಟನಾ ಸಮಾವೇಶದಲ್ಲಿ ಸಂವಿಧಾನ ಇದೆ ಅದಕ್ಕಾಗಿ ನಾವೆಲ್ಲರೂ ಸ್ವತಂತ್ರವಾಗಿ ಮಾತನಾಡೋ ಶಕ್ತಿ ಇದೆ. ಕಾಂಗ್ರೆಸ್ ಅನ್ನು ಬೆಂಬಲಿಸುವವರ ಮೇಲೆ ಇಡಿ, ಸಿಬಿಐ ತೋರಿಸಿ ಧಮ್ಕಿ ಹಾಕ್ತಿದೆ, ಇದರ ವಿರುದ್ಧ ಹೋರಾಟ ಮಾಡಬೇಕಿದೆ ಎಂದರು.

## ತನ್ನ ಪ್ರಜೆಗಳನ್ನೇ ದೇಶಕ್ಕೆ ಸೇರಿಸದ ಪಾಕ್

ಭಾರತದಿಂದ ತೆರಳಿದ ತನ್ನ ಪ್ರಜೆಗಳನ್ನು ತಾನು ಸ್ವೀಕರಿಸುವುದಿಲ್ಲ ಎಂದು ಪಾಕಿಸ್ತಾನ ಹೇಳಿದೆ. ಹೌದು. ಪಹಲ್ಗಾಮ್ ದಾಳಿಯ ಬಳಿಕ ಭಾರತದ




ಗೃಹ ಸಚಿವಾಲಯ ಭಾರತದಲ್ಲಿರುವ ಪಾಕ್ ಪ್ರಜೆಗಳು ಭಾರತ ತೊರೆಯಬೇಕು. ಪಾಕ್‌ನಲ್ಲಿರುವ ಭಾರತೀಯರು ಕೂಡಲೇ ದೇಶಕ್ಕೆ ಮರಳಬೇಕು ಎಂದು ಸೂಚಿಸಿತ್ತು. ಈ ಸೂಚನೆಯ ಬೆನ್ನಲ್ಲೇ ಭಾರತದಲ್ಲಿರುವ ಪಾಕ್ ಪ್ರಜೆಗಳು ದೇಶಕ್ಕೆ ಮರಳುತ್ತಿದ್ದರು. ಆದರೆ ಈಗ ಗಡಿಯಲ್ಲೇ ಪಾಕ್ ತನ್ನ ದೇಶದ ಪ್ರಜೆಗಳನ್ನು ತಡೆ ಹಿಡಿದಿದೆ. ವಾಘಾದಲ್ಲಿ ತನ್ನ ಗಡಿಯನ್ನು ಸಂಪೂರ್ಣವಾಗಿ ಮುಚ್ಚಿರುವುದರಿಂದ ಪಾಕ್ ಪ್ರಜೆಗಳು ಅಟ್ಟಾರಿ-ವಾಘಾ ಕ್ರಾಸಿಂಗ್‌ನಲ್ಲಿ ಸಿಲುಕಿದ್ದಾರೆ. ಗಡಿ ಮುಚ್ಚಲ್ಪಟ್ಟ ನಂತರ, ಎರಡೂ ದೇಶಗಳಿಂದ ಯಾರೂ ಇನ್ನೊಂದು ಬದಿಗೆ ದಾಟಲಿಲ್ಲ ಎಂದು ಮೂಲಗಳು ತಿಳಿಸಿವೆ. ನಾನು ಬೆಳಿಗ್ಗೆ 6 ಗಂಟೆಗೆ ನನ್ನ ಸಹೋದರಿಯರೊಂದಿಗೆ ಇಲ್ಲಿಗೆ ಬಂದೆ. ಬೆಳಿಗ್ಗೆ 10 ಗಂಟೆಗೆ ಗಡಿ ತೆರೆಯುತ್ತದೆ ಎಂದು ಅಧಿಕಾರಿಗಳು ಹೇಳಿದರು. ಆದರೆ 11 ಗಂಟೆಯಾದರೂ ಗಡಿಯನ್ನು ತೆರೆಯಲಿಲ್ಲ. ಯಾಕೆ ಗೇಟ್ ತೆಗೆಯುತ್ತಿಲ್ಲ ಎಂದು ಕೇಳಿದ್ದಕ್ಕೆ ಪಾಕ್ ಅಧಿಕಾರಿ, ಭಾರತದಿಂದ ಪಾಕಿಸ್ತಾನಕ್ಕೆ ಮರಳದಂತೆ ಸರ್ಕಾರ ಆದೇಶ ನೀಡಿದೆ ಎಂದು ಹೇಳಿದರು ಎಂಬುದಾಗಿ ವ್ಯಕ್ತಿಯೊಬ್ಬರು ತಿಳಿಸಿದರು.



**ಪಾಕಿಸ್ತಾನ ಮುಖವಾಡ ಕಳಚಿ ಬಿದ್ದಿದೆ**

## ಮುಂಬಯಿ ದಾಳಿ ಸಂಚುಕೋರ ಹಫೀಜ್ ಸಯೀದ್ ರಕ್ಷಣೆಗೆ ಪಾಕ್ ಸೈನಿಕರ ನಿಯೋಜನೆ! 4 ಪಟ್ಟು ಭದ್ರತೆ ಹೆಚ್ಚಳ

**ಲಷ್ಕರೆ ತಯ್ಬಾ ಉಗ್ರ ಸಂಘಟನೆ ಮುಖ್ಯಸ್ಥ ಹಫೀಜ್ ಸಯೀದ್ ಪಾಕಿಸ್ತಾನದ ಲಾಹೋರ್‌ನಲ್ಲಿ ಠಿಕಾಣಿ**

**ಸಯೀದ್ ಜೈಲಿನಲ್ಲಿದ್ದಾನೆ ಎಂದು ಹೇಳಿಕೊಂಡು ಬರುತ್ತಿದ್ದ ಪಾಕಿಸ್ತಾನದ ನೈಜ ಬಣ್ಣ ಬಯಲು**

# ಉಗ್ರ ಹಫೀಜ್‌ಗೆ ರಕ್ಷಣೆ ಪಾಕಿಸ್ತಾನ ಐಷಾರಾಮಿ ಮಣೆ

• ಉದಯವಾಹಿನಿ, ಹೊಸದಿಲ್ಲಿ

ಭಾರತದ ವಿರುದ್ಧ 'ಜಿಹಾದಿ' ಸಮರ ಸಾರಿರುವ 2008ರ ಮುಂಬಯಿ ದಾಳಿ ಸಂಚುಕೋರ ಲಷ್ಕರೆ ತಯ್ಬಾ ಉಗ್ರ ಸಂಘಟನೆ ಮುಖ್ಯಸ್ಥ ಹಫೀಜ್ ಸಯೀದ್ ಪಾಕಿಸ್ತಾನದ ಲಾಹೋರ್‌ನಲ್ಲಿ ಅಡಗಿದ್ದಾನೆ ಎಂಬ ಸಂಗತಿ ಬೆಳಕಿಗೆ ಬಂದಿದೆ. ಸಯೀದ್ ಜೈಲಿನಲ್ಲಿದ್ದಾನೆ ಎಂದು ಹೇಳಿಕೊಂಡು ಬರುತ್ತಿದ್ದ ಪಾಕಿಸ್ತಾನದ ನೈಜ ಬಣ್ಣ ಬಯಲಾಗಿದೆ.

ಉಗ್ರ ಹಫೀಜ್ ಸಯೀದ್‌ನ ಭದ್ರತೆಯನ್ನು ಪಾಕಿಸ್ತಾನವು ಸುಮಾರು ನಾಲ್ಕು ಪಟ್ಟು ಹೆಚ್ಚಿಸಿದೆ. ಭದ್ರತೆಗೆ ಪಾಕಿಸ್ತಾನ ಸಶಸ್ತ್ರ ಪಡೆಗಳ ಸಿಬ್ಬಂದಿಯನ್ನು 24 ಗಂಟೆಯೂ ನಿಯೋಜಿಸಲಾಗಿದೆ. ಲಾಹೋರ್‌ನಲ್ಲಿರುವ ಸಯೀದ್‌ನ ನಿವಾಸದ ಸುತ್ತಲೂ ಹೆಚ್ಚಿನ ಕಣ್ಗಾವಲು ಇರಿಸಲಾಗಿದೆ. ಏಪ್ರಿಲ್ 22 ರಂದು ನಡೆದ ಪಹಲ್ಗಾಮ್ ದಾಳಿಯ ನಂತರ ಈ ಕ್ರಮ ಕೈಗೊಳ್ಳಲಾಗಿದೆ ಎಂದು ರಾಷ್ಟ್ರೀಯ ಮಾಧ್ಯಮಗಳು ವರದಿ ಮಾಡಿವೆ. ಏಪ್ರಿಲ್ 22 ರಂದು ನಡೆದ ಪಹಲ್ಗಾಮ್ ದಾಳಿಯ ನಂತರ ಈ ಕ್ರಮ ಕೈಗೊಳ್ಳಲಾಗಿದೆ.

ಖಾಸಗಿ ಸುದ್ದಿ ಸಂಸ್ಥೆ ಪ್ರಸಾರ ಮಾಡಿದ ಸ್ಯಾಟಲೈಟ್ ಇಮೇಜ್‌ಗಳು ಐಷಾರಾಮಿ ಜೀವನಕ್ಕೆ ಹೆಸರಾದ ಪಾಕಿಸ್ತಾನದ ಎರಡನೇ ಅತಿದೊಡ್ಡ ನಗರವಾದ ಲಾಹೋರ್‌ನ ಗೌಪ್ಯ ಪ್ರದೇಶದಲ್ಲಿ ಅಡಗಿರುವ ಮಾಹಿತಿ ಹೊರಬಿದ್ದಿದೆ. ಲಾಹೋರ್‌ನ ಜನನಿಬಿಡ ಪ್ರದೇಶದ ಮಧ್ಯೆ ಇರುವ ಮನೆಯಲ್ಲಿ ಹಫೀಜ್ ಸಯೀದ್ ಅಡಗಿ ಕೂತಿದ್ದಾನೆ. ಬೃಹತ್ ಮನೆಯಲ್ಲಿ ಮಸೀದಿ, ಮದರಸಾ ಸಹ ರೂಪಿಸಲಾಗಿದೆ. ಬೃಹತ್ ಕಟ್ಟಡಕ್ಕೆ ಕೋಟೆಯಂತಹ ಕಾಂಪೌಂಡ್ ನಿರ್ಮಿಸಲಾಗಿದೆ. ಬೆಂಬಲಿಗರ ಜತೆಗೆ ಪಾಕಿಸ್ತಾನ ಭದ್ರತಾ ಪಡೆಗಳು ಸಯೀದ್ ರಕ್ಷಣೆಗೆ ನಿಂತಿರುವುದು ಸ್ಯಾಟಲೈಟ್ ಇಮೇಜ್‌ಗಳಲ್ಲಿ ಕಂಡು ಬಂದಿದೆ. ಲಾಹೋರ್‌ನ ಮೊಹಲ್ಲಾ ಜೋಹರ್ ಟೌನ್‌ನಲ್ಲಿ ಹಫೀಜ್ ಸಯೀದ್‌ನ ಮನೆ ಇದ್ದು, ಈ ಪ್ರದೇಶದಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿದೆ. ಪಾಕಿಸ್ತಾನ ಸೇನೆ, ಇಂಟರ್-ಸರ್ವೀಸಸ್ ಇಂಟೆಲಿಜೆನ್ಸ್, ಮತ್ತು ಲಷ್ಕರ್ ಕಾರ್ಯಕರ್ತರು ಜಂಟಿಯಾಗಿ ಸಯೀದ್‌ನ ರಕ್ಷಣೆಯನ್ನು ನೋಡಿಕೊಳ್ಳುತ್ತಿದ್ದಾರೆ.

'ಹಫೀಜ್ ಸಯೀದ್ ಬಂಧನದಲ್ಲಿದ್ದಾನೆ. ಉಗ್ರ ಚಟುವಟಿಕೆಗೆ ಹಣಕಾಸು ಸಹಾಯ ಮಾಡಿದ ಆರೋಪದ ಮೇಲೆ ಬಂಧಿಸಿ, ಜೈಲಿನಲ್ಲಿಡಲಾಗಿದೆ,' ಎಂದು ಹೇಳಿಕೊಂಡು ಬರುತ್ತಿದ್ದ ಪಾಕಿಸ್ತಾನ ಮುಖವಾಡ ಕಳಚಿ ಬಿದ್ದಿದೆ. ಸ್ಥಳಾಂತರಿಸಿದ್ದ ಪಾಕ್ ಬಾಲಾಕೋಟ್ ಏರ್‌ಸ್ಟ್ರೈಕ್‌ಗೂ ಮುನ್ನ ಹಫೀಜ್‌ಗೆ ಅಲ್ ಕೈದಾಗೆ ಸೇರಿದ ಲಾಹೋರ್‌ನ ಮಸೀದಿಯೊಂದರಲ್ಲಿ ಆಶ್ರಯ ನೀಡಲಾಗಿತ್ತು. 2019ರಲ್ಲಿ ಭಾರತ ವಾಯು ದಾಳಿ ನಡೆಸಿದಾಗ ವಾಸ್ತವ್ಯ ಬದಲಿಸಿತು. ಏಳು ಸುತ್ತಿನ ಕೋಟೆಯಂತಹ ಬಂಗಲೆಗೆ ಸ್ಥಳಾಂತರ ಮಾಡಲಾಯಿತು. ಹಫೀಜ್ ವಾಸವಿರುವ ಮನೆಯ ಸುತ್ತ ಜನ ಸಂಚಾರ ನಿರ್ಬಂಧಿಸಲಾಗಿದೆ. ಮಸೀದಿಗೆ ಆಗಮಿಸುವ ಜನರನ್ನು ಪರೀಕ್ಷಿಸಲಾಗುತ್ತಿದೆ. ಬಂಗಲೆ ಅಸುಪಾಸು ಡ್ರೋನ್ ಹಾರಾಟ ನಿಷೇಧಿಸಲಾಗಿದೆ.

**ತಲೆಗೆ 10 ಮಿಲಿಯನ್ ಡಾಲರ್ ಬಹುಮಾನ**

ಪಹಲ್ಗಾಮ್ ದಾಳಿಯ ಹೊಣೆಯನ್ನು ಲಷ್ಕರ್-ಎ-ತೈಬಾದ ಅಂಗ ಸಂಸ್ಥೆಯಾದ ದಿ ರೆಸಿಸ್ಟೆನ್ಸ್ ಫ್ರಂಟ್ ಹೊತ್ತುಕೊಂಡಿದೆ. ಟಿಆರ್‌ಎಫ್ ಹೊಣೆ ಹೊತ್ತರೂ, ಹಫೀಜ್ ಸಯೀದ್ ಈ ದಾಳಿಯ ಪ್ರಮುಖ ಸೂತ್ರಧಾರ ಎಂದು ಭಾರತೀಯ ತನಿಖಾ ಸಂಸ್ಥೆಗಳು ನಂಬಿವೆ. ಹಫೀಜ್ ಸಯೀದ್‌ನನ್ನು ವಿಶ್ವಸಂಸ್ಥೆ ಮತ್ತು ಅಮೆರಿಕ ಜಾಗತಿಕ ಭಯೋತ್ಪಾದಕ ಎಂದು ಘೋಷಿಸಿವೆ. ಆತನ ತಲೆಗೆ 10 ಮಿಲಿಯನ್ ಡಾಲರ್ ಬಹುಮಾನವನ್ನು ಸಹ ಘೋಷಿಸಲಾಗಿದೆ. ಹೀಗಿದ್ದರೂ ಸಯೀದ್ ಮಾತ್ರ ಪಾಕಿಸ್ತಾನ ಸೇನೆಯ ಬೆಂಬಲದೊಂದಿಗೆ ಬಹಿರಂಗವಾಗಿ ತಿರುಗಾಡುತ್ತಿದ್ದಾನೆ.

**ಬುಡ ಸಮೇತ ಕಿತ್ತುಹಾಕ್ತೀವಿ**

ನಮ್ಮ ಹೋರಾಟ ಮುಗಿಯುವುದಿಲ್ಲ, ಒಬ್ಬ ಭಯೋತ್ಪಾದಕನನ್ನೂ ಬಿಡುವುದಿಲ್ಲ ಎಂದು ಗೃಹ ಸಚಿವ ಅಮಿತ್ ಶಾ ಗುಡುಗಿದ್ದಾರೆ. ಪಹಲ್ಗಾಮ್ ದಾಳಿಯ ನಂತರ ಮೊದಲ ಬಾರಿಗೆ ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾರ್ವಜನಿಕವಾಗಿ ಮಾತನಾಡಿ ಉಗ್ರರನ್ನು ಸಂಹಾರ ಮಾಡುತ್ತೇವೆ ಎಂದು ತಿಳಿಸಿದರು. ಯಾರಾದರೂ ಹೇಡಿತನದ ದಾಳಿ ಮಾಡಿ ಅದು ತಮಗೆ ಸಿಕ್ಕಿದ ದೊಡ್ಡ ಗೆಲುವು ಎಂದು ಭಾವಿಸಿದರೆ ಒಂದು ವಿಷಯವನ್ನು ಅರ್ಥಮಾಡಿಕೊಳ್ಳಿ. ಕೇಂದ್ರದಲ್ಲಿ ಇರುವುದು ನರೇಂದ್ರ ಮೋದಿ ಸರ್ಕಾರ. ಯಾರನ್ನೂ ಬಿಡುವುದಿಲ್ಲ. ಈ ದೇಶದ ಪ್ರತಿಯೊಂದು ಇಂಚಿನಿಂದಲೂ ಭಯೋತ್ಪಾದನೆಯನ್ನು ಬೇರುಸಹಿತ ಕಿತ್ತುಹಾಕುವುದು ನಮ್ಮ ಸಂಕಲ್ಪ ಮತ್ತು ಆ ಸಂಕಲ್ಪ ಈಡೇರುತ್ತದೆ ಎಂದು ಹೇಳಿದರು. ಭಯೋತ್ಪಾದನೆಯನ್ನು ಹರಡುವ ಎಲ್ಲಾರಿಗೂ ಇದು ಯುದ್ಧದ ಅಂತ್ಯವಲ್ಲ. ಪ್ರತಿಯೊಬ್ಬ ಉಗ್ರನಿಗೂ ಶಿಕ್ಷೆ ನೀಡಲಾಗುವುದು ಎಂದು ತಿಳಿಸಿದರು.



**ಸೈಲೆಂಟ್ ಪ್ಲ್ಯಾನಿಂಗ್ ಮೋದಿ ನಿಗೂಢ ನಡೆ**

ಈ ಹಿಂದೆ 2016ರ ಸೆಪ್ಟೆಂಬರ್ 18ರಂದು ಉರಿ ಮತ್ತು ಫೆ.14 2019ರಂದು ಪುಲ್ವಾಮ ದಾಳಿ ನಡೆದ 12 ದಿನಗಳ ಅಂತರದಲ್ಲಿ ಪಾಕಿಸ್ತಾನ ಪೋಷಿತ ಭಯೋತ್ಪಾದಕರ ನೆಲೆಗಳಿಗೆ ಬಾಂಬ್ ಸ್ಫೋಟಿಸುವ ಮೂಲಕ ಬಿಸಿ ಮುಟ್ಟಿಸಿತ್ತು. ಆದರೆ ಈಗ ಪಹಲ್ಗಾಮ್ ದಾಳಿಯಾಗಿ ಹತ್ತು ದಿನಗಳ ನಡೆದರೂ ಮೋದಿ ಮೌನವಾಗಿದ್ದಾರೆ. ಸೇನಾ ಮುಖ್ಯಸ್ಥರು ಮತ್ತು ಹಿರಿಯ ಸಂಪುಟ ಸಹದ್ಯೋಗಿಗಳ ಜೊತೆಗೆ ಸಭೆ ನಡೆಸುತ್ತಿರುವ ಮೋದಿ ಈ ಬಾರಿ ದೊಡ್ಡ ಪ್ಲ್ಯಾನ್ ಮಾಡುತ್ತಿದ್ದಾರಾ ಎನ್ನುವ ಅನುಮಾನಗಳನ್ನು ಹುಟ್ಟು ಹಾಕಿದೆ. ಘಟನೆ ನಡೆದು ಹತ್ತು ದಿನಗಳು ಕಳೆದರೂ ಭಾರತದಿಂದ ಯಾವುದೇ ದೊಡ್ಡ ಮಿಲಿಟರಿ ಕಾರ್ಯಾಚರಣೆಯ ಘೋಷಣೆಯಾಗಿಲ್ಲ. ಇದಕ್ಕೆ ಹಲವು ಕಾರಣಗಳು ಇರಬಹುದು ಎನ್ನಲಾಗುತ್ತಿದೆ.



ಯುದ್ಧದಿಂದ ದೇಶದ ಆರ್ಥಿಕತೆ, ಜನಜೀವನದ ಮೇಲೆ ದೀರ್ಘ ಪರಿಣಾಮ ಬೀರುವ ಸಾಧ್ಯತೆ ಇದೆ. ಇದನ್ನು ತಪ್ಪಿಸಲು ಮೋದಿ ತಾತ್ಕಾಲಿಕ ಮೌನವಾಗಿರಬಹುದು. ಈಗಾಗಲೇ ಪಾಕ್ ವಿರುದ್ಧ ಭಾರತ ಹಲವು ಕ್ರಮಗಳನ್ನು ಕೈಗೊಂಡಿದೆ. ಸಿಂಧೂ ನದಿ ನೀರು ಒಪ್ಪಂದ ರದ್ದು, ವೀಸಾ ನಿರ್ಬಂಧ, ಪಾಕಿಸ್ತಾನದ ರಾಯಭಾರಿಗಳ ಸಂಖ್ಯೆ ಕಡಿಮೆ ಮಾಡುವುದು ಇವೆಲ್ಲ 'ಯುದ್ಧವಿಲ್ಲದ ಯುದ್ಧ' ತಂತ್ರವನ್ನು ಸೂಚಿಸುತ್ತವೆ. ಮಿಲಿಟರಿ ಕ್ರಮದ ಬದಲು, ಆರ್ಥಿಕ-ರಾಜತಾಂತ್ರಿಕ ಒತ್ತಡ ಹೇರಲು ಆದ್ಯತೆಯನ್ನು ನೀಡಲಾಗಿದೆ. ಇದರಿಂದ ಪಾಕಿಸ್ತಾನಕ್ಕೆ ದೀರ್ಘಕಾಲದ ಹಾನಿ ಉಂಟಾಗಬಹುದು. ಆದರೆ ತಕ್ಷಣದ ಯುದ್ಧದ ಅಪಾಯವನ್ನು ತಪ್ಪಿಸುತ್ತದೆ. ಯುದ್ಧ ಘೋಷಣೆ ಬದಲು ದಾಳಿಯ ಹಿಂದಿನ ಕುತಂತ್ರಕ್ಕೆ ಸಾಕ್ಷ್ಯ ಕಲೆ ಹಾಕುವ ಯೋಜನೆಯಿಂದ ಮೋದಿ ಮೌನವಾಗಿದ್ದಾರೆ ಎನ್ನಲಾಗಿದೆ.

# ಜಾತಿ ಗಣತಿ: ಕೇಂದ್ರದ ನಿರ್ಧಾರ ಸ್ವಾಗತ, ರಾಹುಲ್ ಗಾಂಧಿಗೆ ಅಭಿನಂದನೆ

**■ ರಾಜ್ಯ ಸರ್ಕಾರ ನಡೆಸಿದ ಜಾತಿಗಣತಿಗೆ ಮಹತ್ವ ಇಲ್ಲ ಎಂದು ಎಚ್‌ಡಿ ಕುಮಾರಸ್ವಾಮಿ ನೀಡಿದ್ದ ಹೇಳಿಕೆಗೆ ತಿರುಗೇಟು**

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಜನಗಣತಿ ಯೊಂದಿಗೆ ಜಾತಿಗಣತಿ ಮಾಡುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಸ್ವಾಗತಿಸುತ್ತೇವೆ. ಅದರೊಂದಿಗೆ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆಯೂ ನಡೆಯಬೇಕು ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು. ದೇಶದ ಜನತೆಗೆ ಸಾಮಾಜಿಕ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಜಾತಿ ಗಣತಿ ಯೊಂದಿಗೆ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸಬೇಕು. ಮೀಸಲಾತಿಯಲ್ಲಿ ಶೇ.50% ಗರಿಷ್ಠ ಪರಿಮಿತಿಯನ್ನು ಸಡಿಲಗೊಳಿಸಿ ಜನಸಂಖ್ಯೆ ಅನುಗುಣವಾಗಿ ಮೀಸಲಾತಿ ಕಲ್ಪಿಸಬೇಕು. ಜಾತಿ ಗಣತಿಗೆ ಕೂಡಲೇ ದಿನಾಂಕ ನಿಗದಿಗೊಳಿಸಬೇಕು ಎಂದರು.

ರಾಹುಲ್ ಗಾಂಧಿಯವರು ಕೂಡಾ ಇದನ್ನೇ ಆಗ್ರಹಿಸಿದ್ದು, ಜಾತಿ ಗಣತಿ ವೇಳೆ ಸಾಮಾಜಿಕ, ಆರ್ಥಿಕ ಸಮೀಕ್ಷೆ ನಡೆಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು. ಬಡವರು, ಹಿಂದುಳಿದವರನ್ನು ಮುಖ್ಯವಾಹಿನಿಗೆ ತರಲು ಅನುಕೂಲ ಸಾಮಾಜಿಕವಾಗಿ , ಶೈಕ್ಷಣಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡಬೇಕೆಂದು ಸಂವಿಧಾನ ಹೇಳುತ್ತದೆ.

ಜಾತಿ ಗಣತಿ ಯೊಂದಿಗೆ ಸಾಮಾಜಿಕ, ಆರ್ಥಿಕ , ಶೈಕ್ಷಣಿಕ ಮಾಡಿದರೆ ಜನಸಂಖ್ಯೆಗನುಗುಣವಾಗಿ ಮೀಸಲಾತಿ ನೀಡಲು ಅನುಕೂಲವಾಗುತ್ತದೆ ಮತ್ತು ಅವರನ್ನು ಮುಖ್ಯವಾಹಿನಿಗೆ ತರಲು ಸಾಧ್ಯವಾಗುತ್ತದೆ ಎಂದರು.

**ಬಿಹಾರ ಚುನಾವಣೆ ಹಿನ್ನೆಲೆಯಲ್ಲಿ ಸಮೀಕ್ಷೆ**

ಈ ರೀತಿಯ 2015 ರಲ್ಲಿಯೇ ನಮ್ಮ ಸರ್ಕಾರ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಮೂಲಕ 192 ಕೋಟಿ ವೆಚ್ಚ ಮಾಡಿ 1. 33 ಲಕ್ಷ ಸಿಬ್ಬಂದಿ ನಿಯೋಜನೆ ಮಾಡಿ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸಲಾಗಿದೆ . ಇದರಿಂದ ಪ್ರೇರಿತವಾಗಿ ಮತ್ತು ಬಿಹಾರ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕೇಂದ್ರ ಸರ್ಕಾರವು ಈಗ ಸಮೀಕ್ಷೆಗೆ ಮುಂದಾಗಿದೆ ಎಂದರು.

73-74 ರ ತಿದ್ದುಪಡಿಗಳನ್ನು ಬಿಜೆಪಿ ವಿರೋಧಿಸಿತ್ತು. ಇತಿಹಾಸ ನೋಡಿದರೆ ಬಿಜೆಪಿ ಸಾಮಾಜಿಕ ನ್ಯಾಯದ ಪರ ಎಂದಿಗೂ ಇಲ್ಲ. ಜಾತಿ ಗಣತಿ ಮಾಡುವಾಗ ಸಾಮಾಜಿಕ ಆರ್ಥಿಕ ಸಮೀಕ್ಷೆ ಕೂಡ ಆಗಬೇಕು. ಇಲ್ಲಿಯವರೆಗೂ ಇದನ್ನು ವಿರೋಧಿಸುತ್ತಿದ್ದವರು ಈಗ ಸಮೀಕ್ಷೆ ನಡೆಸುವ ಘೋಷಣೆ ಮಾಡಿದ್ದಾರೆ ಎಂದರು.



**ಕುಮಾರಸ್ವಾಮಿ ಸಚಿವರನ್ನು ಹೆದರಿಸಿ ವರದಿ ಪಡೆಯಲಿಲ್ಲ**

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಯವರು ಜಾತಿ ಗಣತಿ ಹಾಗೂ ಜನಗಣತಿ ನಡೆಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಹಾಡಿ ಹೊಗಳಿದ್ದು, ರಾಜ್ಯ ಸರ್ಕಾರದ ಸಮೀಕ್ಷೆಗೆ ಯಾವುದೇ ಪಾವಿತ್ರ್ಯತೆ ಇಲ್ಲ ಏನು ಹೇಳಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಗಳು ಸಮ್ಮಿಶ್ರ ಸರ್ಕಾರದಲ್ಲಿ ಪುಟ್ಟರಂಗಶೆಟ್ಟಿ ಹಿಂದುಳಿದ ವರ್ಗಗಳ ಸಚಿವರಾಗಿದ್ದಾಗ ಜಾತಿ ಗಣತಿ ವರದಿ ಪಡೆಯಲು ದಿನಾಂಕ ನಿಗದಿ ಮಾಡಿದಾಗ ಅವರನ್ನು ಅಮಾನತು ಮಾಡುವುದಾಗಿ ಹೆದರಿಸಿ ವರದಿಯನ್ನು ಪಡೆಯಲಿಲ್ಲ ಎಂದರು.

**ಮೇ 9 ಕ್ಕೆ ಸಚಿವ ಸಂಪುಟ ಸಭೆ**

ಪ್ರಸಕ್ತ ಸಚಿವ ಸಂಪುಟದಲ್ಲಿ ಮಂಡಿಸಿರುವ ಸಾಮಾಜಿಕ , ಶೈಕ್ಷಣಿಕ ಸಮೀಕ್ಷೆಯನ್ನು ಮೇ 9 ರಂದು ನಡೆಯುವ ಸಚಿವ ಸಂಪುಟದಲ್ಲಿ ಸಚಿವರೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿ ಎಂದು ಅವರು ತಿಳಿಸಿದರು. 50% ಮೀಸಲಾತಿಯನ್ನು ಬದಲಾಯಿಸಬೇಕು. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸಂವಿಧಾನದ 15 ವಿಧಿ, ಕಲಂ (5) ರಂತೆ ಮೀಸಲಾತಿಯನ್ನು ಕೊಡಬೇಕೆಂದು ರಾಹುಲ್ ಗಾಂಧಿ ಒತ್ತಾಯಿಸಿದ್ದಾರೆ. ಇದನ್ನು ಪರಿಗಣಿಸಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದಾಗಿ ತಿಳಿಸಿದರು.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹9,753/Gram24ct ₹8,775/Gram22ct ಬೆಳ್ಳಿ: ₹98.00/Gram

## ಇಂದು ಎಸ್‌ಎಸ್‌ಎಲ್‌ಸಿ ರಿಸಲ್ಟ್

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯು ಎಸ್.ಎಸ್.ಎಲ್.ಸಿ. ಪರೀಕ್ಷೆ-1ರ ಫಲಿತಾಂಶವನ್ನು ಇಂದು ಪ್ರಕಟಿಸಲಿದೆ. ಕಳೆದ ಮಾ. 21 ರಿಂದ ಏ. 4 ವರೆಗೆ ಎಸ್.ಎಸ್.ಎಲ್.ಸಿ. ಪರೀಕ್ಷೆ-1 ಅನ್ನು ನಡೆಸಲಾಗಿತ್ತು. ಎಲ್ಲಾ ವಿಷಯಗಳ ಉತ್ತರ ಪತ್ರಿಕೆಗಳ ಮೌಲ್ಯ ಮಾಪನ ಕಾರ್ಯವು ಮುಕ್ತಾಯವಾಗಿದ್ದು, ಇಂದು ಫಲಿತಾಂಶ ಪ್ರಕಟಿಸುವುದಾಗಿ ಮಂಡಳಿ ತಿಳಿಸಿದೆ.

ಎಸ್.ಎಸ್.ಎಲ್.ಸಿ.ಪರೀಕ್ಷೆ-1ರ ಫಲಿತಾಂಶವನ್ನು ಇಂದು ಬೆಳಿಗ್ಗೆ 11-30 ಗಂಟೆಗೆ ಮಂಡಲಿಯಲ್ಲಿ ನಡೆಯುವ ಸುದ್ದಿಗೋಷ್ಠಿಯಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಮಧು ಬಂಗಾರಪ್ಪ ಅವರು ಫಲಿತಾಂಶವನ್ನು ಪ್ರಕಟಿಸಲಿದ್ದಾರೆ. ಫಲಿತಾಂಶವನ್ನು http://karresults.nic.in ಜಾಲತಾಣದಲ್ಲಿ ಇಂದು ಮಧ್ಯಾಹ್ನ 12-30 ಗಂಟೆಯ ನಂತರ ವೀಕ್ಷಿಸಬಹುದಾಗಿದೆ ಎಂದು ಮಂಡಳಿ ಪ್ರಕಟಣೆ ತಿಳಿಸಿದೆ.

## ವಿಜ್ಞಾನ ವಿವಿ ಸೆನೆಟ್ ಸದಸ್ಯರ ಆಯ್ಕೆ ಚುನಾವಣೆಯಲ್ಲಿ ಅಕ್ರಮ

• ಉದಯವಾಹಿನಿ, ಬೆಂಗಳೂರು

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಯಯ ಸೆನೆಟ್ ಸದಸ್ಯರ ಆಯ್ಕೆ ಸಂಬಂಧ ನಡೆದ ಚುನಾವಣೆಯಲ್ಲಿ ಮೇಲ್ನೋಟಕ್ಕೆ ಅಕ್ರಮ ನಡೆದಿರುವ ಸಾಧ್ಯತೆ ಇರುವುದರಿಂದ ತನಿಖೆ ನಡೆಸಲು ರಾಜ್ಯಪಾಲರು ಆದೇಶಿಸಿದ್ದಾರೆ. ಮತದಾರರ ಪಟ್ಟಿಯಲ್ಲಿ ಲೋಪ ಉಂಟಾಗಿದ್ದು ಇದರ ಬಗ್ಗೆ ದೂರುಗಳು ಬಂದ ಹಿನ್ನಲೆಯಲ್ಲಿ ವಿಶ್ವವಿದ್ಯಾಯದ ಕುಲಾಧಿಪತಿಗಳು ಆದ ರಾಜ್ಯಪಾಲರು ತನಿಖೆ ನಡೆಸಿ ವರದಿ ಬರುವವರೆಗೂ ಚುನಾಯಿತ ಸದಸ್ಯರು ಯಾವುದೇ ಅಧಿಕಾರ ಚಲಾಯಿಸುವಂತಿಲ್ಲ,ವಿವಿ ಆಡಳಿತದಲ್ಲಿ ಮುಂದಿನ ಆದೇಶ ದವರೆಗೂ ಹಸ್ತಕ್ಷೇಪ ಮಾಡುವಂತಿಲ್ಲ, ಸೆನೆಟ್‌ಗೆ ಆಯ್ಕೆಯಾದ್ದ ಡಾ. ಶ್ರೀನಿವಾಸ್, ಡಾ. ಕೋನರಡ್ಡಿ, ಡಾ. ನವೀನ್, ವೈಶಾಲಿ ಶ್ರೀಜಿತ್, ಡಾ. ಶಶಿಕುಮಾರ್ ಅವರಿಗೆ ಸದ್ಯ ಯಾವುದೇ ಕರ್ತವ್ಯಗಳು, ಜವಾಬ್ದಾರಿಗಳನ್ನು ನಿರ್ವಹಿಸುವುದರಿಂದ ನಿರ್ಬಂಧಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. 10ನೇ ಸೆನೆಟ್‌ಗೆ 2024-27ರವರೆಗೆ ಸದಸ್ಯರ ಆಯ್ಕೆಗೆ ಕಳೆದ 2024 ಡಿ.10 ರಂದು ಚುನಾವಣೆ ನಡೆದಿತ್ತು.

## ಇನ್ನೂ 5 ದಿನ ಬೇಸಿಗೆ ಮಳೆ

• ಉದಯವಾಹಿನಿ, ಬೆಂಗಳೂರು

ಬೇಸಿಗೆ ಮಳೆ ರಾಜ್ಯದಲ್ಲಿ ಚೇತರಿಕೆ ಕಂಡಿದ್ದು, ಐದು ದಿನಗಳ ಕಾಲ ಗುಡುಗು, ಮಿಂಚು ಹಾಗೂ ಬಿರುಗಾಳಿ ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.ರಾಜ್ಯದ ಒಳನಾಡಿನಲ್ಲಿ ಟ್ರಫ್ ನಿರ್ಮಾಣವಾಗಿರುವ ಪರಿಣಾಮ ಒಳನಾಡಿನಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದ್ದು, ಚದುರಿದಂತೆ ಅಲ್ಲಲ್ಲಿ ಮಳೆ ಮುಂದುವರೆದಿದೆ ಎಂದು ಹವಾಮಾನ ಇಲಾಖೆ ಬೆಂಗಳೂರು ಪ್ರಾದೇಶಿಕ ಕೇಂದ್ರದ ನಿರ್ದೇಶಕ ಸಿ.ಎಸ್.ಪಾಟೀಲ್ ತಿಳಿಸಿದ್ದಾರೆ. ನಿನ್ನೆ ಸಂಜೆ ಹಾಗೂ ರಾತ್ರಿ, ಬೆಂಗಳೂರು ಸೇರಿದಂತೆ ರಾಜ್ಯದ ದಕ್ಷಿಣ ಒಳನಾಡಿನ ಹಲವೆಡೆ ಚದುರಿದಂತೆ ಮಳೆಯಾಗಿದೆ. ಕೆಲವೆಡೆ ಹಗುರದಿಂದ ಸಾಧಾರಣ ಮಳೆಯಾಗಿದ್ದರೆ, ಮತ್ತೆ ಕೆಲವೆಡೆ ಗುಡುಗು, ಮಿಂಚು, ಬಿರುಗಾಳಿ ಸಹಿತ ಮಳೆಯಾಗಿದೆ. ಕರಾವಳಿ ಹಾಗೂ ಉತ್ತರ ಒಳನಾಡಿನ ಕೆಲವೆಡೆ ಅಲ್ಲಲ್ಲಿ ಹಗುರ ಮಳೆಯಾಗಿದೆ ಎಂದು ಅವರು ಹೇಳಿದ್ದಾರೆ.

ಹಿರಿಯೂರು, ಚಿತ್ರದುರ್ಗದಲ್ಲಿ 5 ಸೆ.ಮೀ., ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ 3 ಸೆ.ಮೀ., ಬೆಳ್ತಂಗಡಿಯಲ್ಲಿ 2 ಸೆ.ಮೀ.ನಷ್ಟು ಮಳೆಯಾಗಿದೆ. ಬೆಂಗಳೂರು ಸೇರಿದಂತೆ ಒಳನಾಡಿನಲ್ಲಿ ಮೂರು ದಿನಗಳ ಕಾಲ ಹಗುರದಿಂದ ಸಾಧಾರಣ ಮಳೆಯಾಗುವ ಮುನ್ಸೂಚನೆಗಳಿವೆ ಎಂದಿದ್ದಾರೆ. ಕರಾವಳಿ, ಮಲೆನಾಡು ಹಾಗೂ ಉತ್ತರ ಒಳನಾಡಿನ ಹಲವೆಡೆ ಐದು ದಿನಗಳ ಕಾಲ ಮಳೆಯಾಗಲಿದೆ. ಕೆಲವೆಡೆ ಗುಡುಗು, ಮಿಂಚು, ಬಿರುಗಾಳಿ ಸಹಿತ ಮಳೆಯಾಗಲಿದೆ. ಬಿರುಗಾಳಿಯು ಗಂಟೆಗೆ 40ರಿಂದ 50 ಕಿ.ಮೀ.ವೇಗದಲ್ಲಿ ಬೀಸುವ ಸಾಧ್ಯತೆ ಇದ್ದು, ಸಾರ್ವಜನಿಕರು ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ಅವರು ಸಲಹೆ ಮಾಡಿದ್ದಾರೆ. ಕಲಬುರಗಿಯಲ್ಲಿ 42 ಡಿ.ಸೆಂ., ಬೀದರ್‌ನಲ್ಲಿ 41 ಡಿ.ಸೆಂ., ಬೆಂಗಳೂರಿನಲ್ಲಿ 34 ಡಿ.ಸೆಂ., ಧಾರವಾಡದಲ್ಲಿ 37 ಡಿ.ಸೆಂ.ನಷ್ಟು ಗರಿಷ್ಠ ತಾಪಮಾನ ದಾಖಲಾಗಿದೆ. ಮುಂದಿನ 5 ದಿನಗಳಲ್ಲಿ ಬೆಂಗಳೂರು ಸೇರಿದಂತೆ ದಕ್ಷಿಣ ಒಳನಾಡು, ಕರಾವಳಿ ಭಾಗದಲ್ಲಿ 34ರಿಂದ 36 ಡಿ.ಸೆಂ., ಕಲ್ಯಾಣ ಕರ್ನಾಟಕ ಭಾಗದಲ್ಲಿ 40ರಿಂದ 42 ಡಿ.ಸೆಂ.ನಷ್ಟು ಗರಿಷ್ಠ ತಾಪಮಾನ ದಾಖಲಾಗುವ ಸಾಧ್ಯತೆ ಇದೆ ಎಂದು ಅವರು ಮಾಹಿತಿ ನೀಡಿದ್ದಾರೆ.

## ಹೆಲ್ಮೆಟ್ ಹಾಕದೆ ಪ್ರಾಣ ತೆತ್ತ ಸವಾರ

• ಉದಯವಾಹಿನಿ, ಬೆಂಗಳೂರು

ಊರಲ್ಲಿ ಹೆಂಡತಿ, ಮಕ್ಕಳನ್ನು ಬಿಟ್ಟು ನಗರದಲ್ಲಿ ನೆಲೆಸಿದ್ದ ತಮಿಳುನಾಡು ಮೂಲದ ವ್ಯಕ್ತಿಯೊಬ್ಬರು ತಲೆಗೆ ಹೆಲ್ಮೆಟ್ ಹಾಕದ ಪರಿಣಾಮ ಬೈಕ್ ಅಪಘಾತದಲ್ಲಿ ಮೃತಪಟ್ಟಿರುವ ಘಟನೆ ಯಶವಂತಪುರ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಯನ್ನು ತಮಿಳುನಾಡಿನ ದಿಂಡಿಗಲ್ ನಿವಾಸಿ ಡೇವಿಡ್ ಸಂಗೋಲ್ (32) ಎಂದು ಗುರುತಿಸಲಾಗಿದೆ. ಸಂಗೋಲ್ ಪತ್ನಿ, ಮಕ್ಕಳು ತಮಿಳುನಾಡಿನ ದಿಂಡಿಗಲ್‌ನಲ್ಲಿ ವಾಸವಾಗಿದ್ದರೆ, ನಗರದ ಲಾಂಡ್ರಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಅವರು ಮತ್ತಿಕೆರೆಯ ಪಿಜಿಯೊಂದರಲ್ಲಿ ವಾಸವಾಗಿದ್ದರು.

ನಿನ್ನೆ ರಾತ್ರಿ 10.15 ರ ಸುಮಾರಿಗೆ ಕೆಲಸ ಮುಗಿಸಿ ಮತ್ತಿಕೆರೆಯಲ್ಲಿರುವ ತನ್ನ ಪಿಜಿಗೆ ಸಂಗೋಲ್ ಸ್ಕೂಟರ್‌ನಲ್ಲಿ ತೆರಳುತ್ತಿದ್ದರು. ಎಂ.ಎಸ್. ರಾಮಯ್ಯ ಆಸ್ಪತ್ರೆ ಹಿಂಭಾಗದ ಗೇಟ್ ನಂಬರ್ 11 ರ ಬಳಿ ಎದುರಿನಿಂದ ಬಂದ ಬೈಕ್ ಇವರ ಸ್ಕೂಟರ್‌ಗೆ ಡಿಕ್ಕಿ ಹೊಡೆಯಿತು. ಡಿಕ್ಕಿ ಹೊಡೆದ ರಭಸಕ್ಕೆ ಎರಡು ವಾಹನಗಳ ಸವಾರರು ಕೆಳಗೆ ಬಿದ್ದರೂ ಸಂಗೋಲ್ ತಲೆಗೆ ಹೆಲ್ಮೆಟ್ ಹಾಕದ ಪರಿಣಾಮ ಅವರ ತಲೆ ಮತ್ತು ಮೈ ಕೈಗಳಿಗೆ ಗಾಯಗಳಾಗಿದ್ದವು. ತಕ್ಷಣ ಅವರನ್ನು ಪಕ್ಕದಲ್ಲೇ ಇದ್ದ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ. ಮತ್ತೊಂದು ಬೈಕ್ ಸವಾರನಿಗೆ ಸಣ್ಣ-ಪುಟ್ಟ ಗಾಯಗಳಾಗಿದ್ದು, ಆತ ಪ್ರಾಣಾಪಾಯದಿಂದ ಪಾರಾಗಿದ್ದಾನೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಯಶವಂತಪುರ ಸಂಚಾರಿ ಠಾಣೆ ಪೊಲೀಸರು ಶವವವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿ ಮುಂದಿನ ಕ್ರಮ ಜರುಗಿಸಿದ್ದಾರೆ.

## ಬಿಯರ್ ಪ್ರಿಯರಿಗೆ ಮತ್ತೆ ಶಾಕ್ 20ರೂ. ಹೆಚ್ಚಳಕ್ಕೆ ನಿರ್ಧಾರ

• ಉದಯವಾಹಿನಿ, ಬೆಂಗಳೂರು

ಮದ್ಯದ ದರ ಏರಿ ಕೆಗೆ ರಾಜ್ಯ ಸರ್ಕಾರ ಮುಂದಾಗಿದೆ. ಬಿಯರ್ ಮೇಲಿನ ಅಬಕಾರಿ ಸುಂಕವನ್ನ 195% ನಿಂದ 205% ಹೆಚ್ಚಿಸುವ ಬಗ್ಗೆ ಸರ್ಕಾರ ಕರಡು ಅಧಿಸೂಚನೆ ಪ್ರಕಟಿಸಿದೆ. ಇದಕ್ಕೆ ವಾರದೊಳಗೆ ಆಕ್ಷೇಪಣೆ ಸಲ್ಲಿಸಲು ಸಾರ್ವಜನಿಕರಿಗೆ ಅವಕಾಶ ನೀಡಲಾಗಿದೆ. ಬ್ರಾಂಡಿ, ವಿಸ್ಕಿ, ರಮ್, ಜಿನ್‌ಗಳ ದರವನ್ನ ಪ್ರತಿ ಕ್ವಾಟರ್‌ಗೆ 10 ರೂ.ನಿಂದ 15 ರೂ. ವರೆಗೆ ಹೆಚ್ಚಿಸಲು ನಿರ್ಧರಿಸಲಾಗಿದೆ.

ಇನ್ನೂ ಹೈ ಎಂಡ್ ಅಥವಾ ಪ್ರೀಮಿಯಂ ಮದ್ಯಗಳ ದರಗಳಲ್ಲಿ ಏರಿಕೆ ಇರುವುದಿಲ್ಲ. ರಾಜ್ಯ ಸರ್ಕಾರದಿಂದ ಎರಡು ವರ್ಷಗಳಲ್ಲಿ ಮೂರನೇ ಬಾರಿಗೆ ಮದ್ಯದ ದರ ಏರಿಕೆಗೆ ತೀರ್ಮಾನಿಸಲಾಗಿದೆ. 40 ಸಾವಿರ ಕೋಟಿ ರೂ. ಆದಾಯದ ಗುರಿ ಮುಟ್ಟಲು ಎಣ್ಣೆ ಪ್ರಿಯರಿಗೆ ಸರ್ಕಾರ ಶಾಕ್ ನೀಡಲು ಮುಂದಾಗಿದೆ.

# ಕೆಂಪೇಗೌಡ ಬಡಾವಣೆಗೆ ವಿದ್ಯುತ್ ಸೌಕರ್ಯ ಕಲ್ಪಿಸಲು ಮೀನಮೇಷ

## ಬೆಸ್ಕಾಂ ಮತ್ತು ಬಿಡಿಎ ಸಮಸ್ಯೆಯಿಂದ ಲೇಔಟ್‌ನಲ್ಲಿ ಸಾರ್ವಜನಿಕರ ಪರದಾಟ

• ಉದಯವಾಹಿನಿ, ಬೆಂಗಳೂರು

ನಾಡಪ್ರಭು ಕೆಂಪೇಗೌಡ ಬಡಾವಣೆಗೆ ವಿದ್ಯುತ್ ಸೇರಿದಂತೆ ಅಗತ್ಯ ಮೂಲಸೌಕರ್ಯ ಕಲ್ಪಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು(ಬಿಡಿಎ) ವಿಳಂಬಧೋರಣೆ ಅನುಸರಿಸುತ್ತಿದೆ. ಬಡಾವಣೆಗೆ ವಿದ್ಯುತ್ ಸಂಪರ್ಕ ಒದಗಿಸುವ ಸಲುವಾಗಿ ಕೊಮ್ಮಘಟ್ಟ ವಿದ್ಯುತ್ ಉಪಕೇಂದ್ರ ಸ್ಥಾಪನೆಯಾಗಿದ್ದರೂ, ಕಳೆದ ಆರು ತಿಂಗಳಿಂದ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ. 2024 ನವೆಂಬರ್ ವೇಳೆಗೆ ಬಡಾವಣೆಗೆ ಎಲ್ಲಾ ರೀತಿಯ ಮೂಲಸೌಕರ್ಯ ಕಲ್ಪಿಸುವುದಾಗಿ ಭರವಸೆ ನೀಡಿದ್ದ ಬಿಡಿಎ, ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ.

■ ಕೊಮ್ಮಘಟ್ಟ ಉಪಕೇಂದ್ರದ ಸ್ಥಾಪನೆ ಹೊರತಾಗಿಯೂ ದೊರಕದ ಸಂಪರ್ಕ

■ ಸಮೀಪದ ಕಂದಾಯ ಬಡಾವಣೆಗಳಿಂದ ತಾತ್ಕಾಲಿಕ ಸಂಪರ್ಕ ಪಡೆದ ನಿವಾಸಿಗಳು

■ 2 ವರ್ಷ ತಡವಾಗಿ ಕೆಲಸ ಮುಗಿಸಲಾಗಿದೆ. ಆದರೂ, ಕಾರ್ಯಾರಂಭಕ್ಕೆ ಮುಹೂರ್ತವೇ ಕೂಡಿಬಂದಿಲ್ಲ.

5 ವಿದ್ಯುತ್ ಉಪಕೇಂದ್ರಗಳಲ್ಲಿ ಕೊಮ್ಮಘಟ್ಟ ವಿದ್ಯುತ್ ಉಪಕೇಂದ್ರದ ಕಾಮಗಾರಿ ಪೂರ್ಣಗೊಂಡು 6 ತಿಂಗಳು ಕಳೆದಿವೆ. ಆದರೆ, ಅದನ್ನು ಕಾರ್ಯಾರಂಭಗೊಳಿಸಲು ಮೀನ ಮೇಷ ಎಣಿಸಲಾಗುತ್ತಿದೆ. ಇದರಿಂದ ನಿವಾಸಿಗಳು, ನಿವೇಶನದಾರರು ಹೆಚ್ಚುವರಿಯಾಗಿ 10 ರಿಂದ 15 ಸಾವಿರ ರೂ. ವೆಚ್ಚ ಮಾಡಿ ಸಮೀಪದ ಹಳ್ಳಿಗಳು, ಕಂದಾಯ ಬಡಾವಣೆಗಳಿಂದ ತಾತ್ಕಾಲಿಕ ಸಂಪರ್ಕ ಪಡೆಯುವಂತಾಗಿದೆ.

☛ ಉದಯವಾಹಿನಿ ಚಿತ್ರ



ಕೊಮ್ಮಘಟ್ಟ ವಿದ್ಯುತ್ ಉಪಕೇಂದ್ರ ಕಾಮಗಾರಿ ಪೂರ್ಣಗೊಂಡಿದೆ. ಆದರೆ, ಉದ್ಘಾಟನೆ ವಿಳಂಬವಾಗುತ್ತಿದೆ. ವಿದ್ಯುತ್, ಸ್ಯಾನಿಟರಿ, ನೀರು ಎಲ್ಲಾ ಸಂಪರ್ಕಕ್ಕೂ ಹಣ ಪಾವತಿಸಲಾಗಿದೆ. ಆದರೆ, ಸಂಪರ್ಕ ಕಲ್ಪಿಸಲು ವಿಳಂಬಧೋರಣೆ ಅನುಸರಿಸಲಾಗುತ್ತಿದೆ. ಪರಿಣಾಮ ಪಕ್ಕದ ಹಳ್ಳಿ, ಕಂದಾಯ ಬಡಾವಣೆಗಳಿಂದ ಹೆಚ್ಚುವರಿ ಹಣ ವ್ಯಯಿಸಿ ತಾತ್ಕಾಲಿಕ ಸಂಪರ್ಕ ಪಡೆಯಲಾಗುತ್ತಿದೆ. ಈ ತಾತ್ಕಾಲಿಕ ಸಂಪರ್ಕ ಪಡೆಯಲೂ ಬೆಸ್ಕಾಂ ಸಿಸಿ ಪ್ರಮಾಣ ಪತ್ರ, ಎನ್‌ಒಸಿ ಕೇಳುತ್ತಿದೆ. ಆ ಪ್ರಮಾಣಪತ್ರಗಳನ್ನು ನೀಡುವುದಕ್ಕೂ ಬಿಡಿಎ ಅಧಿಕಾರಿಗಳು ಸತಾಯಿಸುತ್ತಿದ್ದಾರೆ.

-ಎಂ.ಅಶೋಕ್, ಕಾರ್ಯದರ್ಶಿ, ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ

### ಕತ್ತಲಲ್ಲೇ ಓಡಾಡಬೇಕಾದ ಪರಿಸ್ಥಿತಿ

9 ಬ್ಲಾಕ್‌ಗಳಲ್ಲೂ ವಿದ್ಯುತ್ ಕಂಬಗಳಿವೆ. ಆದರೆ, ಅವುಗಳಿಗೆ ಸಂಪರ್ಕ ಮತ್ತು ಬೀದಿ ದೀಪಗಳ ಅಳವಡಿಕೆ ಆಗಿಲ್ಲ. ಪರಿಣಾಮ ನಿರ್ಮಾಣ ಹಂತದ ಕಟ್ಟಡಗಳಲ್ಲಿ ಸಿಮೆಂಟ್, ಸ್ಟೀಲ್ ಸೇರಿದಂತೆ ಇತರೆ ವಸ್ತುಗಳು ಕಳವಾಗುತ್ತಿವೆ. ಇನ್ನು ಕಟ್ಟಡ ನಿರ್ಮಾಣ ಕಾರ್ಮಿಕರು, ಭದ್ರತಾ ಸಿಬ್ಬಂದಿಗೆ ವಸತಿ ವ್ಯವಸ್ಥೆ ಕಲ್ಪಿಸಲು ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸಲಾಗುತ್ತಿದೆ. ಆ ಶೆಡ್‌ಗಳಿಗೂ ವಿದ್ಯುತ್ ಸಂಪರ್ಕ ಇಲ್ಲ. ಹೀಗಾಗಿ, ಕಾರ್ಮಿಕರು, ಸಾರ್ವಜನಿಕರು ಕತ್ತಲೆಯಲ್ಲೇ ಓಡಾಡಬೇಕಾದ ಸ್ಥಿತಿ ಇದೆ. ವಿದ್ಯುತ್ ಸಂಬಂಧಿ ಸೌಕರ್ಯ ನೀಡಲು ಬೆಸ್ಕಾಂಗೆ ಬಿಡಿಎ 59 ಕೋಟಿ ರೂ. ಪಾವತಿಸಿದೆ. ಆದರೂ, ಯಾವುದೇ ಕೆಲಸಗಳು ತ್ವರಿತವಾಗಿ ನಡೆಯುತ್ತಿಲ್ಲ. ಬೆಸ್ಕಾಂ ಮತ್ತು ಬಿಡಿಎ ನಡುವಿನ ಸಮನ್ವಯದ ಕೊರತೆಯಿಂದ ನಿವಾಸಿಗಳು ಮತ್ತು ನಿವೇಶನದಾರರು ಪರದಾಡುವಂತಾಗಿದೆ.

**ಮೂಲ ಸೌಕರ್ಯ ಒದಗಿಸುವಲ್ಲಿ ವಿಫಲ**

**5ರಲ್ಲಿ ಒಂದು ಕೇಂದ್ರವಷ್ಟೇ ಪೂರ್ಣ:** ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ 30 ಸಾವಿರ ನಿವೇಶನಗಳ ಹಂಚಿಕೆಯಾಗಿದ್ದು, 240 ಮೆಗಾ ವ್ಯಾಟ್ ಅಗತ್ಯವಿದೆ. ಇದಕ್ಕಾಗಿ 5 ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸಲು ಬಿಡಿಎ, ಬೆಸ್ಕಾಂ ಯೋಜನೆ ರೂಪಿಸಿದ್ದವು. ಪ್ರತಿ ಕೇಂದ್ರ ಸ್ಥಾಪನೆಗೆ ತಲಾ 25 ರಿಂದ 32 ಕೋಟಿ ರೂ. ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಈ ಪೈಕಿ 32 ಕೋಟಿ ರೂ.ವೆಚ್ಚದಲ್ಲಿ ಕೊಮ್ಮಘಟ್ಟದಲ್ಲಿ 66/11 ಕೆವಿ ವಿದ್ಯುತ್ ಉಪಕೇಂದ್ರ ಸ್ಥಾಪಿಸಲಾಗಿದೆ. ಭೀಮನಕುಪ್ಪೆ, ಕನ್ನಳ್ಳಿ, ಸೂಲಿಕೆರೆ, ಸೀಗೆಹಳ್ಳಿಯಲ್ಲಿ ಉಪ ಕೇಂದ್ರಗಳ ಸ್ಥಾಪನೆ ಕಾರ್ಯ ಬಾಕಿ ಇದೆ.

ಕೊಮ್ಮಘಟ್ಟ ಉಪಕೇಂದ್ರ ನಿರ್ಮಾಣಕ್ಕೆ 2021ರ ಆಗಸ್ಟ್‌ನಲ್ಲೇ ಟೆಂಡರ್ ಕರೆಯಲಾಗಿತ್ತು. 2022ರ ಮೇ ತಿಂಗಳಿನಲ್ಲಿ ನಿರ್ಮಾಣ ಕಾಮಗಾರಿ ಆರಂಭವಾಯಿತು. ಕಾಮಗಾರಿ ಪೂರ್ಣಕ್ಕೆ 13 ತಿಂಗಳ ಗಡುವು ನೀಡಲಾಗಿತ್ತು. ಆದರೆ, 2 ವರ್ಷ ತಡವಾಗಿ ಕೆಲಸ ಮುಗಿಸಲಾಗಿದೆ. ಆದರೂ, ಕಾರ್ಯಾರಂಭಕ್ಕೆ ಮುಹೂರ್ತವೇ ಕೂಡಿಬಂದಿಲ್ಲ.

**ಬಡಾವಣೆಗೆ ವಿದ್ಯುತ್ ಸಂಪರ್ಕ ಜಾಲವೇ ಇಲ್ಲ:** ಬಡಾವಣೆಯನ್ನು ಅಭಿವೃದ್ಧಿಪಡಿಸಿರುವ ಬಿಡಿಎ ನಿಗದಿತ ಸಮಯದಲ್ಲಿ ರಸ್ತೆ, ವಿದ್ಯುತ್ ಸೇರಿದಂತೆ ಮೂಲಸೌಕರ್ಯ ಒದಗಿಸುವಲ್ಲಿ ವಿಫಲವಾಗಿದೆ. ಇಡೀ ಬಡಾವಣೆಯಲ್ಲಿ ವಿದ್ಯುತ್ ಸಂಪರ್ಕ ಜಾಲವೇ ಇಲ್ಲವಾಗಿದೆ. ಕೊಮ್ಮ ಘಟ್ಟ ಉಪಕೇಂದ್ರ ಉದ್ಘಾಟನೆ ನಂತರವಷ್ಟೇ ವಿದ್ಯುತ್ ಸಂಪರ್ಕ ಸಿಗಲಿದೆ. ಸದ್ಯ ನಿವಾಸಿಗಳು, ಮನೆ ನಿರ್ಮಾಣ ಕಾರ್ಯ ಆರಂಭಿಸಿರುವ ನಿವೇಶನದಾರರು ಪಕ್ಕದ ಹಳ್ಳಿಗಳು, ಕಂದಾಯ ಬಡಾವಣೆಗಳಿಂದ ತಾತ್ಕಾಲಿಕ ಸಂಪರ್ಕ ಪಡೆದುಕೊಳ್ಳುತ್ತಿದ್ದಾರೆ.

## ಅಕ್ಕ ಸಂಘಟನೆಗಳ ಅಧ್ಯಕ್ಷರಾಗಿ ಮಧು ರಂಗಯ್ಯ ಆಯ್ಕೆ

• ಉದಯವಾಹಿನಿ, ಬೆಂಗಳೂರು



ಅಮೆರಿಕದ ಕನ್ನಡ ಸಂಘಟನೆಗಳ ಕೂಟದ (ಅಕ್ಕ) ನೂತನ ಅಧ್ಯಕ್ಷರಾಗಿ ಮಧು ರಂಗಯ್ಯ ಅವರು ಆಯ್ಕೆ ಯಾಗಿದ್ದಾರೆ. ಮುಂದಿನ ಎರಡು ವರ್ಷಗಳ ಅವಧಿಗೆ ಮಧು ರಂಗಯ್ಯ ಅಕ್ಕವನ್ನು ಮುನ್ನಡೆಸಲಿದ್ದಾರೆ.ಮುಂಬರುವ ಅಕ್ಕ ಸಮೇಳನ, ಅಕ್ಕದ ವಿವಿಧ ಕಾರ್ಯಕ್ರಮಗಳು ನೂತನ ಪದಾಧಿಕಾರಿಗಳ ತಂಡದ ನೇತೃತ್ವದಲ್ಲಿ ಜರುಗಲಿದೆ.

**ನೂತನ ಪದಾದಿಕಾರಿಗಳ ತಂಡ ಹೀಗಿದೆ:** ಅಧ್ಯಕ್ಷರಾಗಿ ಮಧುರಂಗಯ್ಯ, ಕಾರ್ಯದರ್ಶಿಯಾಗಿ ಡಾ ನವೀನ್ ಕೃಷ್ಣ, ಖಜಾಂಚಿಯಾಗಿ ಚಂದ್ರು ಆರಾಧ್ಯ ಉಪಾಧ್ಯಕ್ಷರಾಗಿ ರೂಪಶ್ರೀ ಮೇಲುಕೋಟೆ, ರಘುಶಿವ ರಾಮ್, ವಿನೋದ್ ಕುಮಾರ್, ಜಂಟಿ ಕಾರ್ಯದರ್ಶಿಯಾಗಿ ಮನು ಗೋರೂರು, ಡಾ ಲಾವಣ್ಯ ಸಹ ಕಾರ್ಯದರ್ಶಿಯಾಗಿ ವತ್ಸಾರಾಮನಾಥನ್, ಡಾ ಮೋಹನ್ ಕುಮಾರ್ ಸೇರಿದಂತೆ ಗೌರವ ಸದಸ್ಯರಾಗಿ ಹಿರಿಯ ಅಕ್ಕ ಸಂಘಟರಾದ ಅಮರನಾಥಗೌಡ ಅವರು ಸೇರಿದಂತೆ ಅಮೇರಿಕದ ವಿವಿಧ ರಾಜ್ಯಗಳ ಕನ್ನಡ ಸಂಘದ 20 ಜನರ ತಂಡ ಕಾರ್ಯನಿರ್ವಹಿಸಲಿದೆ. ಮೂಲತಃ ಮಂಡ್ಯದವರಾದ ಮಧು ರಂಗಯ್ಯ ಎಂಜಿನಿಯರಿಂಗ್ ಪದವಿಧರರು. ವ್ಯಾಸಂಗ ಮುಗಿಸಿ ಅಮೆರಿಕದ ಖಾಸಗಿ ಕಂಪನಿಯಲ್ಲಿ ಎಂಜಿನಿಯರ್ ಕೆಲಸ ಆರಂಭಿಸಿದರು. ಕಳೆದ ಮೂರು ದಶಕಗಳಿಂದ ಅಮೆರಿಕದಲ್ಲಿ ನೆಲೆಸಿದ್ದಾರೆ. ತಾಯ್ನಾಡಿನಿಂದ ದೂರ ವಾಗಿದ್ದರೂ ತನ್ನ ನಾಡನ್ನು ಮರೆಯದೆ ನಿರಂತರವಾಗಿ ಕನ್ನಡ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಅಮೆರಿಕದ ವಿವಿಧ ಕನ್ನಡ ಸಂಘಟನೆಗ ಳೊಂದಿಗೆ ಸಕ್ರಿಯವಾಗಿ ಕೆಲಸ ಮಾಡುತ್ತಾ ಕನ್ನಡ ನಾಡು, ನುಡಿ, ಸಂಸ್ಕೃತಿ ಯನ್ನು ಉಳಿಸಿ, ಬೆಳೆಸಿ, ಎಲ್ಲೆಡೆ ಪಸರಿಸುವ ಕೆಲಸ ವನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಕನ್ನಡ ಬಗೆಗಿನ ಇವರ ಕಾಳಜಿಗೆ ಅಕ್ಕ ಸಂಘಟನೆಯ ಜವಾಬ್ದಾರಿ ಒಲಿದಿದೆ. ಈ ಕುರಿತು ಸಂತಸ ಹಂಚಿಕೊಂಡಿರುವ ಮಧು ರಂಗಯ್ಯ ಅವರು, ಅಕ್ಕ ಸಂಘಟನೆಗೆ 25 ವರ್ಷಗಳ ತುಂಬಿರುವ ಬೆಳ್ಳಿ ಹಬ್ಬ ಸಂದರ್ಭದಲ್ಲಿ ಸಂಘಟನೆಯ ಜವಾಬ್ದಾರಿ ಸಿಕ್ಕಿರುವುದು ಖುಷಿ ಉಂಟುಮಾಡಿದೆ. ಅಮೆರಿಕದಲ್ಲಿನ ಕನ್ನಡಿಗರನ್ನು ಮತ್ತಷ್ಟು ಒಂದುಗೂಡಿಸಿ ಕನ್ನಡ ಭಾಷೆ, ಪರಂಪರೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕೆಲಸ ಮಾಡುತ್ತೇನೆ. ಹೊಸ ತಲೆ ಮಾರಿನ ಅನೇಕರು ಅಮೆರಿಕಕ್ಕೆ ಬರುತ್ತಿದ್ದಾರೆ. ಅವರನ್ನು ಸಂಘಟಿಸಿ ಕನ್ನಡದ ಕುರಿತಾದ ಅಭಿಮಾನ, ಆಲೋಚನೆ, ಸಾಹಿತ್ಯ, ಸಂಸ್ಕೃತಿ, ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಹೋಗಲು ಸಾಧ್ಯವಾದಷ್ಟು ಮಾರ್ಗದರ್ಶನ ಮಾಡುತ್ತೇನೆ. ಸಪ್ತ ಸಾಗರದಾಚೆಗೂ ಕನ್ನಡದ ಕಂಪು ಹಬ್ಬುತ್ತಲೇ ಇರುತ್ತದೆ ಎಂದು ಹೇಳಿದರು.

## ಮಳೆಗೆ ಆಟೋದ ಮೇಲೆ ಬಿದ್ದ ಮರ ಚಾಲಕ ಸಾವು



• ಉದಯವಾಹಿನಿ, ಬೆಂಗಳೂರು

ಭಾರೀ ಗಾಳಿ-ಮಳೆಗೆ ಆಟೋದ ಮೇಲೆ ಮರ ಬಿದ್ದ ಪರಿಣಾಮ ಆಟೋ ಚಾಲಕ ಸ್ಥಳದಲ್ಲೇ ಮೃತಪಟ್ಟ ಘಟನೆ ಬೆಂಗಳೂರಿನಲ್ಲಿ ನಡೆದಿದೆ. ಸಿಕೆ ಅಚ್ಚುಕಟ್ಟು ಬಳಿಯ ಬಸ್ ನಿಲ್ದಾಣದಲ್ಲಿ ಈ ಘಟನೆ ನಡೆದಿದ್ದು, ಇಟ್ಟಮಡು ಮೂಲದ ಆಟೋ ಚಾಲಕ ಮಹೇಶ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಸಂಜೆ 7:30ರ ಸುಮಾರಿಗೆ ಈ ಘಟನೆ ನಡೆದಿದೆ. ನಗರದ ವಿವಿಧ ಕಡೆಗಳಲ್ಲಿ ಗುರುವಾರ ಭಾರೀ ಮಳೆ, ಗಾಳಿ ಶುರುವಾಗಿತ್ತು. ಆಟೋಗೆ ಗ್ಯಾಸ್ ತುಂಬಿಸಿಕೊಂಡು ಬರುತ್ತಿದ್ದ ವೇಳೆ ಜೋರು ಗಾಳಿ ಬೀಸಿದ ಪರಿಣಾಮ ಆಟೋ ಮೇಲೆ ಮರ ಬಿದ್ದಿದೆ. ಮರ ಬಿದ್ದ ರಭಸಕ್ಕೆ ಆಟೋ ಸಂಪೂರ್ಣ ಜಖಂ ಆಗಿದ್ದು, ಚಾಲಕ ಮಹೇಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮತ್ತೊಂದು ಕಾರಿನ ಮೇಲೂ ಮರ ಬಿದ್ದಿದ್ದು, ಕಾರಿನಲ್ಲಿ ಇದ್ದವರಿಗೆ ಯಾವುದೇ ಪ್ರಾಣಾಪಾಯವಾಗಿಲ್ಲ.

## ನಿಲ್ಲದ ಕಾರ್ಮಿಕರ ಶೋಷಣೆ: ಸಿಐಟಿಯು ಬೇಸರ

• ಉದಯವಾಹಿನಿ, ದೊಡ್ಡಬಳ್ಳಾಪುರ




ಸಿಐಟಿಯು, ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಗುರುವಾರ ನಗರದ ಸಿದ್ದಲಿಂಗಯ್ಯ ವೃತ್ತದಲ್ಲಿ ಮೇ ದಿನಾಚರಣೆ ರ್‍ಯಾಲಿ, ಬಹಿರಂಗ ಸಭೆ ಆಯೋಜಿಸಿದ್ದವು. ಕಾರ್ಯಕ್ರಮದ ಅಂಗವಾಗಿ ಧ್ವಜಾರೋಹಣ, ವಿವಿಧ ಕಾರ್ಮಿಕ ಸಂಘಟನೆಗಳಿಂದ ಮೆರವಣಿಗೆ, ಕಾರ್ಮಿಕ ಗೀತೆಗಳ ಗಾಯನ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಕಾರ್ಮಿಕರಿಗೆ ಮೂಲ ಸೌಲಭ್ಯಗಳು ಇನ್ನೂ ಮರೀಚಿಕೆಯಾಗಿಯೇ ಉಳಿದಿವೆ. ಕಾರ್ಮಿಕರ ಮೇಲಾಗುತ್ತಿರುವ ಅನ್ಯಾಯ, ದಬ್ಬಾಳಿಕೆ ನಿಂತಿಲ್ಲ. ಕಾರ್ಮಿಕರ ಹಕ್ಕುಗಳು ಸಮರ್ಪಕವಾಗಿ ಜಾರಿಯಾಗಿಲ್ಲ ಎಂದು ಸಿಐಟಿಯು ತಾಲ್ಲೂಕು ಸಂಚಾಲಕ ಹಾಗೂ ಬಿರ್ಲಾ ಸೂಪರ್ ಕಾರ್ಖಾನೆ ಕಾರ್ಮಿಕ ಸಂಘದ ಕಾರ್ಯದರ್ಶಿ ರೇಣುಕಾರಾಧ್ಯ ಹೇಳಿದರು. ಇಂದಿನ ಕೇಂದ್ರ ಸರ್ಕಾರ ಕಾರ್ಮಿಕರಿಗೆ ನೀಡಬೇಕಾದ ನ್ಯಾಯಯುತ ಸೌಲಭ್ಯ ನೀಡುತ್ತಿಲ್ಲ. ಕಂಪನಿಗಳ, ಬಂಡವಾಳಶಾಹಿಗಳ ಸಹಸ್ರಾರು ಕೋಟಿ ರೂಪಾಯಿ ಸಾಲ ಮನ್ನಾ ಮಾಡಲಾಗುತ್ತಿದೆ. ದೇಶದಲ್ಲಿ ಇಂದಿಗೂ ಬಡತನ, ನಿರುದ್ಯೋಗ ಮೊದಲಾದ ಸಮಸ್ಯೆಗಳಿವೆ. ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಹೋರಾಟಕ್ಕೆ ಸಜ್ಜಾಗಬೇಕಿದೆ ಎಂದರು. ಕೇಂದ್ರ ಸರ್ಕಾರ ಬಹುರಾಷ್ಟ್ರೀಯ ಹಾಗೂ ಬಂಡವಾಳಶಾಹಿಗಳ ಪರವಾಗಿ ಕೆಲಸ ಮಾಡುತ್ತಿದೆ ಎನ್ನುವುದಕ್ಕೆ ಈಗ ತರಲು ಹೊರಟಿರುವ ನಾಲ್ಕು ಕಾರ್ಮಿಕ ಸಂಹಿತೆ ನಿದರ್ಶನ ಎಂದು ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಪಿ.ಎ.ವೆಂಕಟೇಶ್ ಹೇಳಿದರು.

ಕಾರ್ಮಿಕರಿಗೆ ಕನಿಷ್ಟ ವೇತನ ಜಾರಿಯಾಗಬೇಕಿದೆ. ತಾಲ್ಲೂಕಿನ ಕೈಗಾರಿಕಾ ಪ್ರದೇಶದಲ್ಲಿ ಇಎಸ್‌ಐಸಿ ಆಸ್ಪತ್ರೆ ಶೀಘ್ರ ಆರಂಭಿಸಬೇಕಿದೆ. ವಿದ್ಯುತ್ ಖಾಸಗೀ ಕರಣ, ಮಹಿಳೆಯರಿಗೆ ರಾತ್ರಿ ಪಾಳಿ ಕೆಲಸಕ್ಕೆ ವಿರೋಧ ಮೊದಲಾದ ಕಾರ್ಮಿಕ ನೀತಿಗಳನ್ನು ವಿರೋಧಿಸಿ ಹಾಗೂ ಕೇಂದ್ರ ಸರ್ಕಾರ ಜಾರಿಗೆ ತರುತ್ತಿರುವ 4 ಸಂಹಿತೆಗಳನ್ನು ವಿರೋಧಿಸಿ ಮೇ 20 ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ನಡೆಸಲಾಗುತ್ತಿದೆ ಎಂದರು.

## ರಾಜ್ಯ ಸರ್ಕಾರಗಳಿಗೆ ಜಾತಿ ಜನಗಣತಿ ಮಾಡುವ ಅಧಿಕಾರ ಇಲ್ಲ: ವಿಜಯೇಂದ್ರ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರಗಳಿಗೆ ಜಾತಿ ಜನಗಣತಿ ಮಾಡುವ ಅಧಿಕಾರ ಇಲ್ಲ. ಇದು ಗೊತ್ತಿದ್ದೂ ಸಿದ್ದರಾಮಯ್ಯ ಸರ್ಕಾರ ಜಾತಿಗಳ ನಡುವೆ ವಿಷ ಬೀಜ ಬಿತ್ತಲು ಮುಂದಾಗಿದೆ ಎಂದು ವಿಜಯೇಂದ್ರ ವಾಗ್ದಾಳಿ ನಡೆಸಿದರು. ಕೇಂದ್ರದಿಂದ ಜಾತಿ ಆಧಾರಿತ ಜನಗಣತಿ ನಡೆಸುವ ವಿಚಾರವಾಗಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಬಹಳ ಉತ್ತಮ ನಿರ್ಧಾರ ತೆಗೆದು ಕೊಂಡಿದೆ. ಜನಗಣತಿ ಜತೆಗೆ ಜಾತಿ ಜನಗಣತಿಯೂ ಮಾಡುವ ನಿರ್ಧಾರ ಮಾಡಲಾಗಿದೆ. 1931 ರ ನಂತರ ದೇಶದಲ್ಲಿ ಜಾತಿ ಜನಗಣತಿ ನಡೆದಿರಲಿಲ್ಲ.



ಎಲ್ಲಾ ಸಮುದಾಯಗಳಿಗೂ ನ್ಯಾಯ ಸಿಗಬೇಕು ಅನ್ನೋದು ಮೋದಿಯವರ ಉದ್ದೇಶ. ಎಲ್ಲರೂ ಈ ನಿರ್ಧಾರ ಸ್ವಾಗತ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಜಾತಿ ಜಾತಿಗಳ ನಡುವೆ ವಿಷಬೀಜ ಬಿತ್ತಿ ಸಮಾಜ ಒಡೆಯುವ ಕೆಲಸ ಕಾಂಗ್ರೆಸ್ ಮಾಡ್ತಿದೆ. ಕೇಂದ್ರದ ನಿರ್ಧಾರ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೂ ಅಚ್ಚರಿ ತಂದಿದೆ ಎಂದರು. ಖರ್ಗೆಯವರೇ ಹೇಳಿದ್ದಾರೆ ಇದು ಔಟ್‌ಡೇಟೆಡ್ ವರದಿ ಅಂತಾ. ಈಗಲಾದರೂ ರಾಜ್ಯದ ಜಾತಿ ಜನಗಣತಿಗೆ ಇತಿಶ್ರೀ ಹಾಡಲಿ. ಸಿದ್ದರಾಮಯ್ಯ ಜಾತಿಗಳ ನಡುವೆ ಕಂದಕ ಸೃಷ್ಟಿಸಲು ಹೊರಟಿದ್ದಾರೆ.

ಕಾಂಗ್ರೆಸ್ ಸರ್ಕಾರದ ಬಳಿ ಕಾಂತರಾಜು ವರದಿಯ ಪ್ರತಿಯೇ ಇಲ್ಲ. ಜಯಪ್ರಕಾಶ್ ಹೆಗ್ಡೆ ಯಾವ ಆಧಾರದಲ್ಲಿ ವರದಿ ಕೊಟ್ರು, ಹಾಗಾದ್ರೆ? ಸಿದ್ದರಾಮಯ್ಯ ವರದಿಯಲ್ಲಿ ಸದುದ್ದೇಶವಂತೂ ಇಲ್ಲ. ಈಗಲಾದರೂ ಸಿದ್ದರಾಮಯ್ಯಗೆ ಭಗವಂತ ಬುದ್ಧಿ ಕೊಡಲಿ, ಕೇಂದ್ರದ ಪರ ಸಿದ್ದರಾಮಯ್ಯ ನಿಲ್ಲಲಿ ಎಂದು ತಿಳಿಸಿದರು.

ಮಂಗಳೂರು ಗುಂಪು ಹತ್ಯೆ ಪ್ರಕರಣ, ಪರಮೇಶ್ವರ್ ಹೇಳಿಕೆ ಬದಲು ವಿಚಾರವಾಗಿ ಮಾತನಾಡಿ, ವಿಧಾನಸೌಧದಲ್ಲಿ ಪಾಕ್ ಪರ ಘೋಷಣೆ ಕೂಗಿದ್ರು. ಆಗಲೇ ಕಠಿಣ ಕ್ರಮ ಕೈಗೊಂಡಿದ್ದಿದ್ರೆ ಇಂತಹ ಘಟನೆ ಆಗ್ತಿರಲಿಲ್ಲ. ಕಾಂಗ್ರೆಸ್ ಮುಸಲ್ಮಾನರ ಓಲೈಕೆಯಿಂದ ಪದೇ ಪದೇ ಈಥರ ನಡೀತಿದೆ ಎಂದು ಬೇಸರ ಹೊರಹಾಕಿದರು.

## ಅನಿಲ ಸೋರಿಕೆಯಿಂದ ಮನೆಗೆ ಬೆಂಕಿ ಬಿದ್ದು ಇಬ್ಬರ ಸಾವು, ಮೂವರಿಗೆ ಗಾಯ

• ಉದಯವಾಹಿನಿ, ನೆಲಮಂಗಲ

ಅನಿಲ ಸೋರಿಕೆಯಿಂದ ಮನೆಗೆ ಬೆಂಕಿ ಬಿದ್ದು ಇಬ್ಬರು ಸಾವನ್ನಪ್ಪಿ ಮೂವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಅಡಕಮಾರನಹಳ್ಳಿಯ ಓವರ್ ಟ್ಯಾಂಕ್ ಬಳಿ ನಡೆದಿದೆ. ನಾಗರಾಜ್ (50), ಶ್ರೀನಿವಾಸ್ (50) ಮೃತ ದುರ್ದೈವಿಗಳು. ಅಡಕಮಾರನಹಳ್ಳಿಯಲ್ಲಿ ನೆಲಮಂಗಲ ಮೂಲದ ಗಂಗಯ್ಯ ಅವರಿಗೆ ದೇರಿದ ಎರಡು ಮನೆಯನ್ನು ಬಾಡಿಗೆಗೆ ನೀಡಲಾಗಿದೆ ಒಂದು ಮನೆಯಲ್ಲಿ ಬಳ್ಳಾರಿ ಮೂಲದ ನಾಗರಾಜ್ ಪತ್ನಿ ಲಕ್ಷ್ಮಿ ದೇವಿ (35), ಮಕ್ಕಳಾದ ಬಸನಗೌಡ (19), ಅಭಿಷೇಕ್ ಗೌಡ (18) ಎರಡು ವರ್ಷದಿಂದ ವಾಸಿಸುತ್ತಿದ್ದರು. ನಾಗರಾಜ್ ದೇವರಿಗೆ ದೀಪ ಹಚ್ಚಿ ಕೆಲಸಕ್ಕೆ ಹೋಗುತ್ತಿದ್ದರು ಈ ವೇಳೆ ಖಾಲಿಯಾಗಿದ್ದ ಸಿಲಿಂಡರ್ ಬದಲಾಯಿಸಲು ಎರಡನೇ ಮಗ ಅಭಿಷೇಕ್ ಮುಂದಾಗಿದ್ದ. ಈ ವೇಳೆ ಸಿಲಿಂಡರ್‌ನಿಂದ ಗ್ಯಾಸ್ ಲೀಕ್ ಆಗಿದ್ದು ಯಾರಿಗೂ ಗೊತ್ತಾಗಿಲ್ಲ ಸ್ವಲ್ಪ ಸಮಯದಲ್ಲೇ ಬೆಂಕಿ ತಗುಲಿದೆ ಮನೆ ಹೊತ್ತಿ ಉರಿದಿದೆ. ನಾಗರಾಜ್, ಲಕ್ಷ್ಮಿದೇವಿ, ಬಸವನಗೌಡ, ಅಭಿಷೇಕ್‌ಗೂ ಬೆಂಕಿ ಆವ ರಿಸಿ ಗಾಯ ಗೊಂಡಿದ್ದಾರೆ. ಪಕ್ಕದ ಮನೆಗೂ ಬೆಂಕಿ ಆವರಿಸಿ ಶ್ರೀನಿವಾಸ್, ಶಿವಶಂಕರ್‌ಗೂ ಸುಟ್ಟ ಗಾಯವಾಗಿದೆ. ಕೂಡಲೇ ಸ್ಥಳೀಯರು ಎಲ್ಲರನ್ನೂ ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಿದರು. ಚಿಕಿತ್ಸೆ ಫಲಿಸದೆ ನಾಗರಾಜ್, ಶ್ರೀನಿವಾಸ್ ಕೊನೆಯುಸಿರೆಳೆದಿದ್ದಾರೆ. ಅಭಿಷೇಕ್, ಶಿವಶಂಕರ್, ಲಕ್ಷ್ಮೀದೇವಿ, ಬಸವ ಎಂಬುವವರಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕೇಂದ್ರದ ಜಾತಿ ಗಣತಿಗೆ ರಾಹುಲ್ ಅವಿರತ ಪ್ರಯತ್ನ

• ಉದಯವಾಹಿನಿ, ಬೆಂಗಳೂರು

ಜನಗಣತಿಯ ಜೊತೆಗೆ ಜಾತಿ ಗಣತಿ ನಡೆಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಸ್ವಾಗತಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಇದಕ್ಕೆ ವಿಶೇಷವಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಅವಿರತ ಪ್ರಯತ್ನ, ಒತ್ತಡ ಕಾರಣ ಎಂದು ಗುರುವಾರ ಹೇಳಿದ್ದಾರೆ. ಕೇಂದ್ರದ ನಿರ್ಧಾರವನ್ನು ನಾನು ಸ್ವಾಗತಿಸುತ್ತೇನೆ. ಆದರೆ ಇದಕ್ಕಾಗಿ ನಾನು ರಾಹುಲ್ ಗಾಂಧಿ ಅವರನ್ನು ಹೆಚ್ಚು ಅಭಿನಂದಿಸುತ್ತೇನೆ.

ಏಕೆಂದರೆ, ಕಳೆದ ಐದು ವರ್ಷಗಳಿಂದ, ಅವರು ಜಾತಿ ಗಣತಿ ನಡೆಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ ಮತ್ತು ಅದಕ್ಕಾಗಿ ವ್ಯಾಪಕ ಪ್ರಯತ್ನ ಮಾಡಿದ್ದಾರೆ ಎಂದು ಸಿಎಂ ತಿಳಿಸಿದರು. ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲೇ ಜಾತಿ ಗಣತಿಯನ್ನು ಸೇರಿಸಿದೆ. ಕೇಂದ್ರದ ಈ ನಿರ್ಧಾರ ಮುಂಬರುವ ಬಿಹಾರ ಚುನಾವಣೆಗೆ ಲಿಂಕ್ ಮಾಡಬಹುದು. ಈ ಜನಗಣತಿ ಜೊತೆಗೆ ಸಮಗ್ರ ಸಾಮಾಜಿಕ-ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಅಗತ್ಯವನ್ನು ಸಿದ್ದರಾಮಯ್ಯ ಒತ್ತಿ ಹೇಳಿದರು. ಈ ಜಾತಿ ಗಣತಿಗೆ ಒಂದು ಟೈಮ್ ಲೈನ್ ನಿಗದಿಪಡಿಸುವಂತೆ ರಾಹುಲ್ ಗಾಂಧಿ ಕೂಡ ಸ್ಪಷ್ಟವಾಗಿ ಹೇಳಿದ್ದಾರೆ ಮತ್ತು ಸಾಮಾಜಿಕ-ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಮಾಡಬೇಕು ಎಂದು ಸಿದ್ದರಾಮಯ್ಯ ಆಗ್ರಹಿಸಿದರು.

ವೈಜ್ಞಾನಿಕವಾದ ಮೀಸಲಾತಿ ನೀತಿಯನ್ನು ರೂಪಿಸುವುದೇ ಜಾತಿ ಆಧಾರಿತ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಮೂಲ ಉದ್ದೇಶವಾಗಿದೆ. ಪ್ರತಿ ಬಾರಿ ಮೀಸಲಾತಿಗೆ ಸಂಬಂಧಿಸಿದ ಪ್ರಕರಣಗಳು ವಿಚಾರಣೆಗೆ ಬಂದಾಗೆಲ್ಲ ಸುಪ್ರೀಂಕೋರ್ಟ್ ಇಂತಹದ್ದೊಂದು ಸಮೀಕ್ಷೆ ನಡೆಸುವ ಅಗತ್ಯವನ್ನು ಒತ್ತಿ ಒತ್ತಿ ಹೇಳುತ್ತಾ ಬಂದಿದೆ ಎನ್ನುವುದನ್ನು ಕೇಂದ್ರ ಸರ್ಕಾರ ಗಮನಿಸಬೇಕಾಗುತ್ತದೆ ಎಂದರು.

## ಹೊಸ ಯೆಲ್ಲೋ ಬೋರ್ಡ್ ವಾಹನ ಖರೀದಿಸುವವರಿಗೆ ಶಾಕ್

• ಉದಯವಾಹಿನಿ, ಬೆಂಗಳೂರು

10 ಲಕ್ಷ ರೂ. ಒಳಗಿನ ಯೆಲ್ಲೋ ಬೋರ್ಡ್ ವಾಹನ ಖರೀದಿಸುವವರು ಲೈಫ್ ಟೈಮ್ ಟ್ಯಾಕ್ಸ್ ಕಟ್ಟುವ ಆದೇಶವನ್ನು ರಾಜ್ಯ ಸರ್ಕಾರ ಜಾರಿಗೆ ತಂದಿದೆ. ಈ ಮೂಲಕ ಹೊಸದಾಗಿ ಯೆಲ್ಲೋ ಬೋರ್ಡ್ ವಾಹನ ಖರೀದಿ ಮಾಡುವವರಿಗೆ ಸರ್ಕಾರ ಶಾಕ್ ನೀಡಿದೆ. ವಾಹನ ತೆರಿಗೆ ಹೆಚ್ಚಳದ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧಾರಣೆ ವಿಧೇಯಕಕ್ಕೆ ರಾಜ್ಯಪಾಲರು ಗ್ರೀನ್ ಸಿಗ್ನಲ್ ನೀಡಿದ್ದು, ಇಂದಿನಿಂದಲೇ ಈ ನೂತನ ಆದೇಶ ಜಾರಿಗೆ ಬರಲಿದೆ. ಕಟ್ಟಡ ಸಾಮಾಗ್ರಿ, ಶಿಫ್ಟಿಂಗ್ ವಾಹನಗಳು ಮತ್ತು ವಾಣಿಜ್ಯ ಬಳಕೆ, ಎಲೆಕ್ಟ್ರಿಕ್ ಕಾರುಗಳಿಗೂ ಈ ದುಬಾರಿ ಟ್ಯಾಕ್ಸ್ ಪಾವತಿ ಮಾಡಬೇಕಾಗಿದೆ.



**ಇಂದಿನಿಂದಲೇ ಕಟ್ಟೇಕು ಲೈಫ್ ಟೈಮ್ ಟ್ಯಾಕ್ಸ್**

ಈ ಹಿಂದೆ 10 ಲಕ್ಷ ರೂ. ಒಳಗಿನ ಯೆಲ್ಲೋ ಬೋರ್ಡ್ ವಾಹನ ಗಳಿಗೆ ಪ್ರತಿ ಸೀಟ್‌ಗೆ ಮೂರು ತಿಂಗಳಿಗೊಮ್ಮೆ 100 ರೂ.ನಂತೆ 4 ಸೀಟ್ ವಾಹನಕ್ಕೆ 400 ರೂ.ಪಾವತಿ ಮಾಡಬೇಕಿತ್ತು. ನೂತನ ತಿದ್ದುಪಡಿ ವಿಧೇಯಕದಲ್ಲಿ ಅದನ್ನು ಬದಲಿಸಿ, 10 ಲಕ್ಷ ರೂ. ಒಳಗಿನ ಯೆಲ್ಲೋ ಬೋರ್ಡ್ ವಾಹನಗಳಿಗೆ 5% ರಷ್ಟು ಲೈಫ್ ಟೈಮ್ ಟ್ಯಾಕ್ಸ್ ವಿಧಿಸಲಾಗಿದೆ. 10 ಲಕ್ಷ ರೂ. ಯೆಲ್ಲೋ ಬೋರ್ಡ್ ಕಾರು ಖರೀದಿ ಮಾಡಿದ್ರೆ ಇಂದಿನಿಂದ 50,000 ರೂ. ಲೈಫ್ ಟೈಮ್ ಟ್ಯಾಕ್ಸ್ ಪಾವತಿ ಮಾಡಬೇಕಾಗಿದೆ.

25 ಲಕ್ಷ ರೂ. ಮೇಲ್ಪಟ್ಟ ವಾಣಿಜ್ಯ ಬಳಕೆಯ ಎಲೆಕ್ಟ್ರಿಕ್ ವಾಹನಗಳಿಗೆ 10% ರಷ್ಟು ಟ್ಯಾಕ್ಸ್ ಪಾವತಿ ಮಾಡಬೇಕು. 25 ಲಕ್ಷ ರೂ. ವಾಣಿಜ್ಯ ಬಳಕೆಯ ಎಲೆಕ್ಟ್ರಿಕ್ ಕಾರು ಖರೀದಿ ಮಾಡಿದ್ರೆ 2.5 ಲಕ್ಷ ರೂ. ಟ್ಯಾಕ್ಸ್ ಪಾವತಿ ಮಾಡಬೇಕು. ಈ ಹಿಂದೆ 25 ಲಕ್ಷ ರೂ. ಮೇಲ್ಪಟ್ಟ ವಾಣಿಜ್ಯ ಬಳಕೆಯ ಎಲೆಕ್ಟ್ರಿಕ್ ಕಾರುಗಳಿಗೆ ತೆರಿಗೆ ವಿನಾಯಿತಿ ನೀಡಲಾಗಿತ್ತು.

ಕಟ್ಟಡ ಸಾಮಾಗ್ರಿ, ಗಳ ಶಿಫ್ಟಿಂಗ್ ವಾಹನಗಳ ಮೇಲೆ ಈ ಹಿಂದೆ 6% ರಷ್ಟು ಲೈಫ್ ಟೈಮ್ ಟ್ಯಾಕ್ಸ್ ವಿಧಿಸಲಾಗಿತ್ತು. ನೂತನ ಆದೇಶದಲ್ಲಿ 8% ರಷ್ಟು ಲೈಫ್ ಟ್ಯಾಕ್ಸ್ ವಿಧಿಸಲಾಗಿದೆ.

# ಮಹಿಳಾ ಮೀಸಲಾತಿ ಜಾರಿಗೆ ಖರ್ಗೆ ಆಗ್ರಹ


## ದೇಶದ ಇತಿಹಾಸದಲ್ಲೇ ಇಷ್ಟೊಂದು ಪೌರ ಕಾರ್ಮಿಕರನ್ನು ಖಾಯಂಗೊಳಿಸಿರುವುದು ಹೆಮ್ಮೆಯ ವಿಷಯ

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸರ್ಕಾರ ಜಾತಿ ಜನಗಣತಿ ಮಾಡುವುದಾಗಿ ಘೋಷಣೆ ಮಾಡಿರುವುದನ್ನು ಸ್ವಾಗತಿಸುವುದಾಗಿ ಹೇಳಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಪದ್ಧತಿಯನ್ನು ಜಾರಿಗೆ ತರಲು ಕಾನೂನು ರೂಪಿಸುವಂತೆ ಆಗ್ರಹಿಸಿದ್ದಾರೆ. ನಗರದ ಅರಮನೆ ಮೈದಾನದಲ್ಲಿ ಬಿಬಿಎಂಪಿಯಿಂದ ಆಯೋಜಿಸಿದ್ದ ಪೌರ ಕಾರ್ಮಿಕರ ದಿನಾಚರಣೆ, ಪೌರಕಾರ್ಮಿಕರಿಗೆ ನೇಮಕಾತಿ ಪತ್ರ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ 13 ಸಾವಿರ ಪೌರ ಕಾರ್ಮಿಕರನ್ನು ಖಾಯಂ ಮಾಡಿರುವುದು ಅಭಿನಂದನಾರ್ಹ ಎಂದರು.

ದೇಶದ ಇತಿಹಾಸದಲ್ಲೇ ಇಷ್ಟೊಂದು ಪೌರ ಕಾರ್ಮಿಕರನ್ನು ಖಾಯಂಗೊಳಿಸಿರುವುದು ಹೆಮ್ಮೆಯ ವಿಷಯ. ಪೌರ ಕಾರ್ಮಿಕರಿಗೆ ಸಿಗಬೇಕಾದ ಹಕ್ಕುಗಳು ಸರಿಯಾಗಿ ಸಿಗುತ್ತಿಲ್ಲ. 13 ಸಾವಿರ ಮಂದಿಯ ಜೊತೆಗೆ ರಾಜ್ಯದ ಉಳಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಪೌರ ಕಾರ್ಮಿಕರನ್ನು ಖಾಯಂ ಮಾಡಬೇಕು ಎಂದು ಸೂಚನೆ ನೀಡಿದರು.

ಕೇಂದ್ರ ಸರ್ಕಾರ ಜನಗಣತಿಯ ಜೊತೆಗೆ ಜಾತಿ ಗಣತಿಯನ್ನು ಮಾಡುವುದಾಗಿ ಘೋಷಣೆ ಮಾಡಿದೆ.




☛ ಉದಯವಾಹಿನಿ ಚಿತ್ರ

### ಜಾತಿ ಗಣತಿಗೆ ನೆಹರು ವಿರೋಧ ಇದ್ದರು

ಅದಕ್ಕಿಂತ ಮೊದಲು ಯುಪಿಎ ಸರ್ಕಾರ 2010ರ ಸೆಪ್ಟೆಂಬರ್ ನಲ್ಲಿ ಸಾಮಾಜಿಕ, ಆರ್ಥಿಕ ಸಮೀಕ್ಷೆಯನ್ನು ಡಾ.ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ಆರಂಭಿಸಿತ್ತು. ಆಗ ನಾನು ಕಾರ್ಮಿಕ ಹಾಗೂ ಸಮಾಜ ಕಲ್ಯಾಣ ಸಚಿವನಾಗಿದ್ದೆ. 2016ರಲ್ಲಿ ಜಾತಿ ಗಣತಿ ಮುಗಿದಿದೆ. ಆದರೆ ಬಿಜೆಪಿ ಸರ್ಕಾರ ಆ ವರದಿಯನ್ನು ಈವರೆಗೂ ಬಹಿರಂಗ ಪಡಿಸಿಲ್ಲ ಮತ್ತು ಜಾರಿಗೂ ತಂದಿಲ್ಲ. ಇಂತಹ ಒಳ್ಳೆಯ ಕೆಲಸಗಳ ಕೀರ್ತಿ ಕಾಂಗ್ರೆಸ್ ಪಕ್ಷಕ್ಕೆ ಸಿಗುವುದಿಲ್ಲ ಎಂದು ಬೇಸರ ವ್ಯಕ್ತ ಪಡಿಸಿದರು.

2023ರ ಏ. 16ಕ್ಕೆ ತಾವು ಪ್ರಧಾನಿಯ ಅವರಿಗೆ ಪತ್ರ ಬರೆದು ಜನಗಣತಿ ಯಲ್ಲಿ ಜಾತಿ ಗಣತಿಯನ್ನು ಸೇರಿಸಬೇಕು ಎಂದು ಒತ್ತಾಯ ಮಾಡಿದ್ದೆ. ಕೇಂದ್ರ ಸರ್ಕಾರ ಎರಡು ವರ್ಷದಿಂದ ಏನನ್ನೂ ಮಾಡಲಿಲ್ಲ. ನಿನ್ನೆ ವಿಶೇಷ ಸಚಿವ ಸಂಪುಟ ಸಭೆ ಮಾಡಿ ಜಾತಿ ಗಣತಿಯನ್ನು ಪ್ರಕಟಿಸಿದ್ದಾರೆ. ನಾವು ಹೇಳಿದಾಗ ನಿರ್ಲಕ್ಷ್ಯ ಮಾಡಿ, ಅವರಿಗೆ ಬೇಕಾದಾಗ ನಿರ್ಧಾರ ತೆಗೆದುಕೊಳ್ಳುತ್ತಾರೆ.

### ಬಿಜೆಪಿಯಿಂದ ಸಾಧ್ಯವಿಲ್ಲ

ಡಾ.ಬಿ.ಆರ್.ಅಂಬೇಡ್ಕರ್ ರೂಪಿಸಿದ್ದ ಹಿಂದು ಕೋಡ್ ಬಿಲ್ ಅನ್ನು ನೆಹರು ನಾಲ್ಕು ಭಾಗಗಳಾಗಿ ವಿಂಗಡಿಸಿ ಜಾರಿಗೆ ತಂದರು. ಕಾಂಗ್ರೆಸ್ ಮಾಡಿದಷ್ಟು ಒಳ್ಳೆಯ ಕೆಲಸಗಳನ್ನು ಬಿಜೆಪಿಯಿಂದ ಮಾಡಲು ಸಾಧ್ಯವಿಲ್ಲ. ಹೆಣ್ಣು ಮಕ್ಕಳಿಗೆ ಮೀಸಲಾತಿ ಜಾರಿಗೆ ತರಬೇಕು ಎಂದು ಹಿಂದೆ ಕಾಂಗ್ರೆಸ್ ಸರ್ಕಾರ ಕಾನೂನು ರೂಪಿಸಿತ್ತು, ಆದರೆ ಈವರೆಗೂ ಅದನ್ನು ಯಾಕೆ ಜಾರಿ ಮಾಡಿಲ್ಲ? ಜನ ವಿರೋಧ ವ್ಯಕ್ತವಾಗಿ ಪ್ರತಿಭಟನೆಗಳಾದಾಗ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದು ಸಿಡಿಮಿಡಿ ವ್ಯಕ್ತ ಪಡಿಸಿದರು.

ನಾವು ಹೇಳಿದಾಗಲೇ ಕ್ರಮ ಕೈಗೊಂಡರೆ ಕಾಂಗ್ರೆಸ್‌ಗೆ ಕೀರ್ತಿ ಬರುತ್ತದೆ ಎಂಬುದು ಅವರ ಧೋರಣೆ. ನರೇಂದ್ರ ಮೋದಿ ಹಾಗೂ ಬಿಜೆಪಿಗೆ ಮಾತ್ರ ಕೀರ್ತಿ ಬರಬೇಕು ಎಂಬುದು ಅವರ ಹುನ್ನಾರ ಎಂದು ಆರೋಪಿಸಿದರು.

ಕಾರ್ಮಿಕರಿಗೆ ಅಂಬೇಡ್ಕರ್ ಬಹಳಷ್ಟು ಕೊಡುಗೆ ನೀಡಿದ್ದರು, ಮೋದಿ ಸರ್ಕಾರ ಅದನ್ನು ಹಾಳು ಮಾಡುತ್ತಿದೆ. ಖಾಸಗಿಯಲ್ಲಿ ಪರಿಶಿಷ್ಟರು ಹಾಗೂ ಹಿಂದುಳಿದ ವರ್ಗಗಳಿಗೆ ನೌಕರಿ ನೀಡುವುದಿಲ್ಲ. ಆದಕ್ಕಾಗಿಯೇ ನೆಹರು ಸರ್ಕಾರಿ ಸಹಭಾಗಿತ್ವದ ಸಂಸ್ಥೆಗಳನ್ನು ಮಾಡಿದ್ದರು, ಈಗ ಮೋದಿ ಸರ್ಕಾರ ಸಾರ್ವಜನಿಕ ಉದ್ದಿಮೆಗಳನ್ನು ಹಂತ ಹಂತವಾಗಿ ಮುಚ್ಚುತ್ತಿದೆ. ಈಗಲೂ ಅಸ್ಪೃಶ್ಯತೆ ಜಾರಿಯಲ್ಲಿದೆ. ಪೌರ ಕಾರ್ಮಿಕರು ತಮ ಮಕ್ಕಳಿಗೆ ಶಿಕ್ಷಣ ಕೊಡಿಸಿ, ವ್ಯಾಪಾರ, ಉದ್ಯಮಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿ ಎಂದು ಸಲಹೆ ನೀಡಿದರು. ಕೋವಿಡ್ ಸಂದರ್ಭದಲ್ಲಿ ಪೌರ ಕಾರ್ಮಿಕರು ಮಾಡಿದ ಕೆಲಸ ಸರಣೀಯ ಎಂದು ಕೊಂಡಾಡಿದರು.

# ಹಾಲು ಒಕ್ಕೂಟದ ಭ್ರಷ್ಟಾಚಾರ ಸಿಬಿಐಗೆ ಒಪ್ಪಿಸಿ: ನಾರಾಯಣಗೌಡ ಒತ್ತಾಯ

• ಉದಯವಹಿನಿ, ಮುಳಬಾಗಿಲು


ಉದಯವಾಹಿನಿ ಚಿತ್ರ

ಹಾಲು ಒಕ್ಕೂಟದ ಭ್ರಷ್ಟಾಚಾರವನ್ನು ಸಿಬಿಐಗೆ ಒಪ್ಪಿಸಿ ಬಾಕಿ ಇರುವ ಪ್ರೋತ್ಸಾಹ ಧನವನ್ನು ಬಿಡುಗಡೆ ಮಾಡಿ ಪ್ರತಿ ಲೀಟರ್ ಹಾಲಿಗೆ 50 ರೂಪಾಯಿ ಬೆಲೆ ನಿಗದಿ ಮಾಡಿ ಪಶು ಆಹಾರ ಒಕ್ಕೂಟದಿಂದಲೇ ಸಬ್ಸಿಡಿ ದರದಲ್ಲಿ ವಿತರಣೆ ಮಾಡಬೇಕೆಂದು ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಪತ್ರಿಕೆ ಹೇಳಿಕೆ ಮುಖಾಂತರ ಸಹಕಾರ ಸಚಿವರನ್ನು ಆಗ್ರಹಿಸಿದರು. ಲಕ್ಷಾಂತರ ರೈತ ಕುಟುಂಬಗಳ ಜೀವನಾಡಿಯಾಗಿರುವ ಎರಡು ಕಣ್ಣುಗಳಂತಿರುವ ಡಿಸಿಸಿ ಬ್ಯಾಂಕ್ ಹಾಗೂ ಹಾಲು ಒಕ್ಕೂಟದಲ್ಲಿ ನಡೆದಿರುವ ನೂರಾರು ಕೋಟಿ ಹಗರಣದ ರೂವಾರಿಗಳು ಯಾರು, ಹೈನೋದ್ಯಮದಲ್ಲಿ ಸಗಣಿ ತಿಂದು ಒಕ್ಕೂಟವನ್ನು ನಷ್ಟಕ್ಕೆ ತಂದು ನಿಲ್ಲಿಸಿರುವ ಮಾಜಿ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ವಿರುದ್ಧ ಬಂಗಾರಪೇಟೆ ಶಾಸಕರು ಮಾಡುತ್ತಿರುವ ಆರೋಪಕ್ಕೆ ಆಡಳಿತಾಧಿಕಾರಿಗಳು ತೆಗೆದುಕೊಂಡಿರುವ ನಿರ್ಧಾರವೇನು ಎಂಬುದನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಿ ಪುಣ್ಯ ಕಟ್ಟಿಕೊಳ್ಳಿ ಎಂದು ಆಗ್ರಹಿಸಿದರು. ಡೀಸೆಲ್ ಖರೀದಿಯಿಂದ ಹಿಡಿದು ವಿದೇಶಿ ಪ್ರವಾಸ, ನೇಮಕಾತಿ ಮೆಗಾ ಡೇರಿ ಸೋಲಾರ್ ಘಟಕ, ಕೋಟ್ಯಾಂತರ ರೂಪಾಯಿ ಹಗರಣ ಎಂದು ಬಂಗಾರಪೇಟೆ ಶಾಸಕರು ಮಾಲೂರು ಶಾಸಕರ ಮೇಲೆ ನಿರಂತರವಾಗಿ ಆರೋಪ ಮಾಡುತ್ತಿದ್ದರೂ ಆಡಳಿತಾಧಿಕಾರಿಗಳು ಈ ವಿಚಾರವನ್ನು ಗಂಭೀರವಾಗಿ ಏಕೆ ಪರಿಗಣಿಸುತ್ತಿಲ್ಲ. ರೈತರ ಸಮಸ್ಯೆ ಎಂದು ನಿರ್ಲಕ್ಷ್ಯವೇ ಎಂದು ಅಸಮಾಧಾನ ವ್ಯಕ್ತಪಡಿಸಿದರು.

> ಎರಡೂ ಸಹಕಾರ ಸಂಸ್ಥೆಗಳಲ್ಲಿ ರಾಜಕೀಯ ಮಾಡುತ್ತಿರುವ ಜನಪ್ರತಿನಿಧಿಗಳು ಕೃಷಿ ಭೂಮಿಗೆ ಒಂದು ದಿನವೂ ನೇಗಿಲು ಕಟ್ಟಿ ಹುತ್ತಿಲ್ಲ, ಹಸು ಕಟ್ಟಿ ಸಗಣಿ ಎತ್ತಿಲ್ಲ. ಬಟ್ಟೆ ಕೊಳಕಾಗಿಲ್ಲ. ಆದರೂ ಸಹ ದಿನಕ್ಕೊಂದು ಆರೋಪ ಮಾಡಿಕೊಳ್ಳುವ ಮುಖಾಂತರ ಇಡೀ ಒಕ್ಕೂಟವನ್ನೇ ಹಾಳು ಮಾಡಲು ತುದಿಗಾಲಲ್ಲಿ ನಿಂತಿರುವುದು ಯಾವ ನ್ಯಾಯ ಎಂದು ಪ್ರಶ್ನೆ ಮಾಡಿದರು.

## ಕೈಗಾರಿಕೆ ಪ್ರದೇಶದಿಂದ ತಾಲ್ಲೂಕು ಅಭಿವೃದ್ಧಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಶಿಡ್ಲಘಟ್ಟ


ತಾಲ್ಲೂಕಿನ ಜಂಗಮಕೋಟೆ ಭಾಗದಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿಗೆ ಭೂಮಿ ನೀಡಲು ಸಿದ್ಧವಿರುವುದಾಗಿ ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ ಮತ್ತು 13 ಗ್ರಾಮಗಳ ರೈತರ ಹೋರಾಟ ಸಮಿತಿ ಬೆಂಬಲ ವ್ಯಕ್ತಪಡಿಸಿವೆ. ಕೆಐಎಡಿಬಿ ಅಧಿಸೂಚನೆಯಂತೆ ದೇವನಹಳ್ಳಿ ವಿಮಾನ ನಿಲ್ದಾಣದ ಸಮೀಪದಲ್ಲಿರುವ ಜಂಗಮ ಕೋಟೆ ಭಾಗದಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿಪಡಿಸಿದರೆ ಜಮೀನು ಬಿಟ್ಟು ಕೊಡಲು ಸಿದ್ಧ ಇರುವುದಾಗಿ 13 ಹಳ್ಳಿಗಳ ರೈತರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಘೋಷಿಸಿದರು. ಕೆಐಎಡಿಬಿ ಭೂ ಸ್ವಾಧೀನಕ್ಕೆ ಅಧಿಸೂಚನೆ ನಂತರ ರಾಜ್ಯದ ಎಲ್ಲಿಯೂ ಈವರೆಗೂ ರೈತರ ಅಭಿಪ್ರಾಯ ಸಂಗ್ರಹಿಸಿ ಭೂ ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ನಡೆದಿಲ್ಲ. ಆದರೆ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಮತ್ತು ಶಿಡ್ಲಘಟ್ಟ ಶಾಸಕ ಬಿ.ಎನ್.ರವಿಕುಮಾರ್ ನೇತೃತ್ವದಲ್ಲಿ ಮೊದಲ ಬಾರಿಗೆ ರೈತರ ಅಭಿಪ್ರಾಯ ಸಂಗ್ರಹಿಸಲಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲ್ಲೂಕು ಅಭಿವೃದ್ಧಿ ಹೊಂದುವ ಜೊತೆಗೆ ಈ ಭಾಗದ ನಿರುದ್ಯೋಗ ಯುವಕ, ಯುವತಿಯರಿಗೆ ಉದ್ಯೋಗ ಕಲ್ಪಿಸಿದಂತಾಗುತ್ತದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭಕ್ತರಹಳ್ಳಿ ಪ್ರತೀಶ್ ಹೇಳಿದರು. ತಾಲ್ಲೂಕಿನ ಯಾವುದೇ ಭಾಗದಲ್ಲಿ ಕೈಗಾರಿಕಾ ಪ್ರದೇಶ ಮಾಡಿದರೂ ಸಹ ರೈತರ ಭೂಮಿಗಳಲ್ಲಿಯೇ ಮಾಡಬೇಕಲ್ಲ ಎಂದು ಪ್ರಶ್ನಿಸಿದರು. ಜಂಗಮಕೋಟೆ ಭಾಗದಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಗಳ ಹಾವಳಿ ಹೆಚ್ಚಾಗಿದೆ. ಬಹುತೇಕ ರೈತರ ಕೃಷಿ ಭೂಮಿ ಇದೀಗ ರಿಯಲ್ ಎಸ್ಟೇಟ್ ಉದ್ಯಮಿಗಳ ಕೈಯಲ್ಲಿದೆ ಎಂದು ಕದಸಂಸ ತಾಲ್ಲೂಕು ಸಂಚಾಲಕ ಮಳಮಾಚನಹಳ್ಳಿ ರಾಮಾಂಜಿನಪ್ಪ ಹೇಳಿದರು.

# 10 ಎಕರೆ ಜಾಗ ನೀಡುವುದರಿಂದ ಪ್ಯಾಕಿಂಗ್ ಘಟಕ ನಿರ್ಮಾಣ

## ಚಿಮೂಲ್‌ಗೆ 10 ಎಕರೆ ಜಾಗ ಮಂಜೂರು: ಸಚಿವ ಡಾ.ಎಂ.ಸಿ.ಸುಧಾಕರ್ ಭರವಸೆ

• ಉದಯವಾಹಿನಿ, ಚಿಂತಾಮಣಿ


ಉದಯವಾಹಿನಿ ಚಿತ್ರ

ಜಿಲ್ಲೆಯಲ್ಲಿ ಒಂದು ಲಕ್ಷ ಲೀಟರ್ ಹಾಲು ಉತ್ಪಾದನೆ ಮಾಡುವ ಮೂಲಕ ಗಮನಸೆಳೆದಿರುವ ಚಿಕ್ಕಬಳ್ಳಾಪುರ ಹಾಲು ಒಕ್ಕೂಟಕ್ಕೆ ಅಗತ್ಯವಾದ 10 ಎಕರೆ ಜಾಗವನ್ನು ಮಂಜೂರು ಮಾಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಭರವಸೆ ನೀಡಿದರು. ತಾಲ್ಲೂಕಿನ ಜಂಗಮಶೀಗೇಹಳ್ಳಿಯಲ್ಲಿ ಸ್ಥಾಪಿಸಿರುವ ನೂತನ ಪಶುಚಿಕಿತ್ಸಾಲಯ ಉದ್ಘಾಟಿಸಿ ಮಾತನಾಡಿದರು. ನೂತನವಾಗಿ ಸ್ಥಾಪನೆಯಾಗಿರುವ ಚಿಮೂಲ್‌ನ ಸಾಕಷ್ಟು ಸಮಸ್ಯೆಗಳನ್ನು ಬಗೆಹರಿಸಿಕೊಂಡು ಮುಂದೆ ಸಾಗಬೇಕಾಗಿದೆ. 10 ಎಕರೆ ಜಾಗ ನೀಡುವುದರಿಂದ ಪ್ಯಾಕಿಂಗ್ ಘಟಕ ನಿರ್ಮಾಣ ಮಾಡಲು ಸಹಕಾರಿಯಾಗುತ್ತದೆ.

**ಸಹಾಯ ಧನವನ್ನು ಹೆಚ್ಚಿಸುವ ಚಿಂತನೆ**

ಸರ್ಕಾರದಿಂದ ರೈತರಿಗೆ ನೀಡುತ್ತಿರುವ ಸಹಾಯ ಧನವನ್ನು ಹೆಚ್ಚಿಸುವ ಚಿಂತನೆ ಇದೆ ಎಂದು ತಿಳಿಸಿದರು. ವಿರೋಧ ಪಕ್ಷಗಳಿಗೆ ರೈತರ ಮೇಲೆ ಕಾಳಜಿ ಇಲ್ಲ. ರೈತರಿಗಾಗಿ ಹಾಲಿನ ಬೆಲೆಯನ್ನು ಸ್ವಲ್ಪಮಟ್ಟಿಗೆ ಜಾಸ್ತಿ ಮಾಡಿದರೆ ಸುಖಾಸುಮ್ಮನೆ ಹುಯಿಲೆಬ್ಬಿಸುತ್ತಿದ್ದಾರೆ. ರೈತರು ಕೊಳ್ಳುವ ಪಶುಆಹಾರ, ಪಶುಔಷಧಿಗಳ ಬೆಲೆ ಏರಿಕೆಯಾಗಿದೆ. ಉತ್ಪಾದನಾ ವೆಚ್ಚ ಅಧಿಕವಾಗಿದೆ ಎಂದರು. ಮಸ್ತೇನಹಳ್ಳಿಯ ಕೈಗಾರಿಕಾ ಪ್ರಾಂಗಣಕ್ಕೆ ಸಮರ್ಪಕವಾದ ವಿದ್ಯುತ್ ಸಂಪರ್ಕ ಇರಲಿಲ್ಲ. ನಾನು ಸಚಿವನಾದ ನಂತರ ವಿದ್ಯುತ್ ಸಂಪರ್ಕ ಕಲ್ಪಿಸಿದ್ದೇನೆ. ಈಗ ಹಲವಾರು ಕಂಪನಿಗಳು ಸ್ಥಾಪನೆಯಾಗಲು ಮುಂದೆ ಬರುತ್ತಿವೆ. 2010ರಲ್ಲಿ ನಾನು ಕಂಡ ಕನಸು ಇದೀಗ ನನಸಾಗುತ್ತಿದೆ. ಸರ್ಕಾರ, ವಿವಿಧ ಧಾನಿಗಳ ನೆರವಿನಿಂದ ಕುಡಿಯುವ ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ ಎಂದು ತಿಳಿಸಿದರು. ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲ್ಲೂಕು ಘಟಕದ ಅಧ್ಯಕ್ಷ ಮುನಿ ನಾರಾಯಣಪ್ಪ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಎಸ್.ಎಂ.ರೋಜಾ, ಮಾದಿಗ ದಂಡೋರದ ರಾಜ್ಯ ಘಟಕದ ಮುಖಂಡ ಜೆ.ಎಂ.ದೇವರಾಜ, ಅಧ್ಯಕ್ಷ ಡಾಬ ನಾಗರಾಜ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಎಸ್.ಎನ್.ಚಿನ್ನಪ್ಪ, ತಹಶೀಲ್ದಾರ್ ಸುದರ್ಶನ ಯಾದವ್ ಭಾಗವಹಿಸಿದ್ದರು.

**ನಂದಿಬೆಟ್ಟದಲ್ಲಿ ಸಚಿವ ಸಂಪುಟ ಸಭೆ**

> ಮುಂದಿನ ಸಚಿವ ಸಂಪುಟದ ಸಭೆಯನ್ನು ಪ್ರಸಿದ್ಧ ಗಿರಿಧಾಮವಾದ ನಂದಿ ಬೆಟ್ಟದಲ್ಲಿ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಒಪ್ಪಿಗೆ ನೀಡಿದ್ದಾರೆ. 3-4 ಜಿಲ್ಲೆಗಳ ಅಭಿವೃದ್ಧಿ ಯೋಜನೆಗಳು ಹಾಗೂ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚೆ ನಡೆಸಲಾಗುವುದು. ಚಿಂತಾಮಣಿ ಸರ್ಕಾರಿ ಪಾಲಿಟೆಕ್ನಿಕ್‌ನ ಸುವರ್ಣ ಮಹೋತ್ಸವವನ್ನು ನಡೆಸಲಾಗುವುದು ಎಂದು ಸಚಿವ ಡಾ.ಎಂ.ಸಿ. ಸುಧಾಕರ್ ತಿಳಿಸಿದರು.

**ಚನ್ನಪಟ್ಟಣ ಮಾದರಿಯಲ್ಲಿ ಕೆರೆಗಳಿಗೆ ನೀರು**

ವಿಶ್ವೇಶ್ವರಯ್ಯ ಜಲನಿಗಮದಿಂದ 41 ಕೋಟಿ ಮಂಜೂರು ಮಾಡಿಸಿದ್ದೇನೆ. ಜತೆಗೆ ಕುಶಾವತಿ ನದಿಯಲ್ಲಿ ಹೂಳು ತೆಗೆದು ನೀರಿನ ಶೇಖರಣೆ ಸಾಮರ್ಥ್ಯ ಹೆಚ್ಚಿಸಲು, ಸುತ್ತಮುತ್ತಲಿಕ ಕೆರೆಗಳಿಗೆ ನೀರು ತುಂಬಿಸಲು 94 ಕೋಟಿ ಮಂಜೂರು ಮಾಡಿಸಿದ್ದೇನೆ ಎಂದು ಸಚಿವ ಡಾ.ಎಂ.ಸಿ. ಸುಧಾಕರ್ ತಿಳಿಸಿದರು. ಎಚ್.ಎನ್ ವ್ಯಾಲಿ ಯೋಜನೆಯಲ್ಲಿ ಶಿಡ್ಲಘಟ್ಟ ಚಿಂತಾಮಣಿ ತಾಲ್ಲೂಕುಗಳ 160 ಕೆರೆಗಳಿಗೆ ನೀರು ಹರಿಸಲಾಗುವುದು. ಚನ್ನಪಟ್ಟಣದಲ್ಲಿ ಸಿ.ಪಿ ಯೋಗೇಶ್ವರ್ ಯಾವ ರೀತಿ ಕೆರೆಗಳಿಗೆ ನೀರು ತುಂಬಿಸಿದರೋ ಅದೇ ರೀತಿ ನಮ್ಮ ತಾಲ್ಲೂಕಿನ ಕೆರೆಗಳಿಗೂ ನೀರು ಹರಿಸುವ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು.

## ಜಾತಿ ಗಣತಿಯಿಂದ ಸಾಮಾಜಿಕ ನ್ಯಾಯ: ವಿ. ಸೋಮಣ್ಣ

• ಉದಯವಾಹಿನಿ, ಗುಬ್ಬಿ


ಉದಯವಾಹಿನಿ ಚಿತ್ರ

ಶೋಷಿತ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಒದಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಹೊಸದಾಗಿ ಜಾತಿ ಗಣತಿ ಮಾಡಲು ಮುಂದಾಗಿದೆ ಎಂದು ಕೇಂದ್ರ ರೈಲ್ವೆ ಖಾತೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ತಾಲ್ಲೂಕಿನ ಕಡಬ ಹೋಬಳಿ ಯಡವನಳ್ಳಿ ಮಜರೆ ಕಡೆಕೋಡಿಪಾಳ್ಯ ಗ್ರಾಮದಲ್ಲಿ ಗುರುವಾರ ಹನುಮಂತ ದೇವರು, ತಿರುಮಲೇಶ್ವರಸ್ವಾಮಿ ನೂತನ ಶಿಲಾ ದೇಗುಲ, ಶಿಲಾಬಿಂಬ, ಕಳಸ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಮಾತ ನಾಡಿದರು. ರಾಜ್ಯ ಸರ್ಕಾರ ರಾಜಕೀಯ ಉದ್ದೇಶಕ್ಕಾಗಿ ಜನಗಣತಿ ಮಾಡಲು ಹೊರಟಿದ್ದು ದುರಾದೃಷ್ಟಕರ.

ಇದನ್ನು ಅರಿತ ಕೇಂದ್ರ ಸರ್ಕಾರವು ದೇಶದ ಸರ್ವಜನರ ಹಿತಕ್ಕೆ ಅನುಕೂಲವಾಗುವಂತೆ ಜಾತಿಗಣತಿ ಮಾಡಲು ಮುಂದಾಗಿದೆ ಎಂದು ಹೇಳಿದರು.ಎಲ್ಲಾ ಶೋಷಿತ ಸಮುದಾಯಗಳಿಗನ್ನು ಜಾತಿಗಣತಿಯಲ್ಲಿ ಗುರ್ತಿಸುವಂತೆ ಆಗಬೇಕು. ಆಗ ಮಾತ್ರ ಸಾಮಾಜಿಕ ನ್ಯಾಯವನ್ನು ಒದಗಿಸಲು ಸಾಧ್ಯ ಎಂದರು. ನಿವೃತ್ತ ಐಎಎಸ್ ಅಧಿಕಾರಿ ಎಸ್. ದಯಾಶಂಕರ್ ಹಾಗೂ ಎಸ್.ಡಿ. ದಿಲೀಪ್ ಕುಮಾರ್, ಚಂದ್ರಶೇಖರ್ ಬಾಬು, ಕಳ್ಳಿಪಾಳ್ಯ ಲೋಕೇಶ್, ಜಿ.ಎನ್. ಬೆಟ್ಟಸ್ವಾಮಿ, ಪಿಡಿಒ ಮಂಜುಳ ಪಾಟೀಲ್, ಗ್ರಾ.ಪಂ ಅಧ್ಯಕ್ಷೆ ಕಲಾವತಿ, ಗ್ರಾ.ಪಂ. ಸದಸ್ಯರಾದ ದಯಾನಂದ್, ಭದ್ರಮ್ಮ, ಬಾಲಾಜಿ ಹಾಜರಿದ್ದರು.

> ದಶಕಗಳ ಹಿಂದೆ ಮಾಡಿದ್ದ ಜಾತಿಗಣತಿಯನ್ನೇ ರಾಜ್ಯ ಸರ್ಕಾರವು ಜಾರಿಗೊಳಿಸಲು ಹೊರಟಿತ್ತು. ಇದು ಅವೈಜ್ಞಾನಿಕವಾಗಿದ್ದರಿಂದ ಎಲ್ಲರ ವಿರೋಧಕ್ಕೆ ಕಾರಣವಾಗಿತ್ತು. ಕೇಂದ್ರ ಸರ್ಕಾರ ಹೊಸದಾಗಿ ಜನಗಣತಿ ಮಾಡಲು ನಿರ್ಧರಿಸಿರುವುದು ಒಳ್ಳೆಯ ಬೆಳವಣಿಗೆ
> – ಎಸ್.ಆರ್. ಶ್ರೀನಿವಾಸ್, ಶಾಸಕ

## ಸಮತಾ ವಿದ್ಯಾಲಯದಲ್ಲಿ ಕಾರ್ಮಿಕ ದಿನಾಚರಣೆ

• ಉದಯವಾಹಿನಿ, ಶಿರಾ


ಉದಯವಾಹಿನಿ ಚಿತ್ರ


ಮಾಲೀಕರಿಂದ ಕಾರ್ಮಿಕರ ಮೇಲೆ ನಿರಂತರವಾಗಿ ನಡೆಯುತ್ತಿದ್ದ ಶೋಷಣೆ ವಿರುದ್ಧ ನಡೆಸಿದ ಹೋರಾಟದಿಂದಾಗಿ ಕಾರ್ಮಿಕರು ತಮ್ಮ ಹಕ್ಕುಗಳನ್ನು ಪಡೆಯಲು ಸಾಧ್ಯವಾಯಿತು ಎಂದು ನಿವೃತ್ತ ಐಜಿಪಿ ಅರ್ಕೇಶ್ ಹೇಳಿದರು. ನಗರದ ಲೋಹಿಯಾ ಸಮತಾ ವಿದ್ಯಾಲಯದ ಕಿಶನ್ ಪಟ್ನಾಯಕ್ ಸಭಾಂಗಣದಲ್ಲಿ ಗುರುವಾರ ರಾಮಮನೋಹರ ಲೋಹಿಯಾ ಸಮತಾ ವಿದ್ಯಾಲಯ, ರೈತ ಸಂಘ ಮತ್ತು ಹಸಿರು ಸೇನೆ, ಮಾನವ ಬಂಧುತ್ವ ವೇದಿಕೆಯಿಂದ ನಡೆದ ಕಾರ್ಮಿಕರ ದಿನಾಚರಣೆಯಲ್ಲಿ ಮಾತನಾಡಿದರು.

ಅಮೆರಿಕದಲ್ಲಿ ಮೊದಲು ಕಾರ್ಮಿಕರ ಹೋರಾಟ ಪ್ರಾರಂಭವಾಗಿ ನಂತರ ಇತರೆಡೆಗೆ ವ್ಯಾಪಿಸಿತು. ಕಾರ್ಮಿಕರಿಗೆ ಹಕ್ಕುಗಳು ದೊರೆತರೂ ಬಂಡವಾಳ ಶಾಹಿಗಳು ಈಗಲೂ ಸಹ ಅವರ ಮೇಲೆ ಶೋಷಣೆ ನಡೆಸುತ್ತಿರುವುದು ವಿಷಾದನೀಯ ಎಂದರು. ವಕೀಲ ರವಿವರ್ಮಕುಮಾರ್ ಮಾತನಾಡಿ, ಅಂಬೇಡ್ಕರ್ ದೇಶಕ್ಕೆ ಉತ್ತಮ ಸಂವಿಧಾನ ನೀಡಿದರು. ಜಾಗತಿಕ ಮಟ್ಟದಲ್ಲಿ ಪ್ರೊ.ನಂಜುಂಡಸ್ವಾಮಿ ಅವರ ಮಾರ್ಗದರ್ಶನದಲ್ಲಿ ರೈತರನ್ನು ಸಂಘಟಿಸಿ ನಡೆಸಿದ ಹೋರಾಟದಿಂದಾಗಿ ರೂಪಿಸಿದ ಕರಡಿಗೆ ಮಾನ್ಯತೆ ನೀಡಿ 2018ರಲ್ಲಿ ವಿಶ್ವಸಂಸ್ಥೆಯು ರೈತರು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಮಾಡುವ ಇತರ ಜನರ ಹಕ್ಕುಗಳ ಕುರಿತು ಘೋಷಣೆ ಮಾಡಿತು. ಇದಕ್ಕೆ ಕೆಲವು ದೇಶಗಳು ಮಾನ್ಯತೆ ನೀಡಿದ್ದು, ನಮ್ಮಲ್ಲಿ ಸಹ ಮಾನ್ಯತೆ ದೊರೆಯಬೇಕು ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ವೈ.ಮಹೇಶ್, ರೈತ ಸಂಘದ ಅಧ್ಯಕ್ಷೆ ಚುಕ್ಕಿ ನಂಜುಂಡಸ್ವಾಮಿ, ಚಿಂತಕ ಕೆ.ದೊರೈರಾಜು, ನ್ಯಾಯವಾದಿ ಅಶ್ವಿನಿ ಓಬಳೇಶ್, ಮಾನವ ಹಕ್ಕುಗಳ ಹೋರಾಟಗಾರ್ತಿ ಮಾರ್ಗರೇಟ್ ಸಂಪತ್, ಮಲ್ಲಿಕಾರ್ಜುನ್, ರಾಮಣ್ಣ, ಡಾ. ಮಂಜುನಾಥ್, ರಂಗನಾಥ ಗೌಡ, ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಧನಂಜಯಾರಾದ ಹಾಜರಿದ್ದರು.

# ಪಾಕಿಸ್ತಾನಕ್ಕೆ ಜೈಕಾರ ಹಾಕುವವರನ್ನು ಗುಂಡಿಕ್ಕಿ ಕೊಲ್ಲಬೇಕು: ಎಚ್. ವಿಶ್ವನಾಥ್

• ಉದಯವಾಹಿನಿ, ಮೈಸೂರು



ದೇಶದಲ್ಲಿದ್ದುಕೊಂಡು ಪಾಕಿಸ್ತಾನಕ್ಕೆ ಜೈಕಾರ ಹಾಕುವವರನ್ನು ಗುಂಡಿಕ್ಕಿ ಕೊಲ್ಲಬೇಕು ಎಂದು ವಿಧಾನಪರಿಷತ್ ಸದಸ್ಯ ಎ.ಎಚ್. ವಿಶ್ವನಾಥ್ ಒತ್ತಾಯಿಸಿದರು. ಇಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪಾಕಿಸ್ತಾನ್ ಜಿಂದಾಬಾದ್ ಎನ್ನುವವರನ್ನು ದೇಶದ್ರೋಹಿಗಳೆಂದು ಘೋಷಿಸಿ ಶಿಕ್ಷೆ ವಿಧಿಸಬೇಕು. ಶತ್ರು ರಾಷ್ಟ್ರದ ಪರ ಜೈಕಾರ ಕೂಗಿದವರನ್ನು ಸುಮ್ಮನೆ ಬಿಟ್ಟು ಕಳುಹಿಸುವುದು ಸರಿಯಲ್ಲ. ನಮ್ಮ ದೇಶದ ಅನ್ನ ತಿಂದು, ನಮ್ಮ ನೀರು ಕುಡಿದು ಶತ್ರುಗಳಿಗೆ ಜೈ ಎನ್ನುವವರನ್ನು ಒಪ್ಪಲು ಸಾಧ್ಯವಿಲ್ಲ' ಎಂದರು. ಈಗ ಯುದ್ಧದ ವಾತಾವರಣ ಸೃಷ್ಟಿಯಾಗಿದ್ದು, ಇಡೀ ದೇಶ ಪ್ರಧಾನಿ ನರೇಂದ್ರ ಮೋದಿ ಅವರ ಪರ ನಿಲ್ಲಬೇಕಾಗಿದೆ ಎಂದು ಹೇಳಿದರು. ಜನಗಣತಿ ಜೊತೆ ಜಾತಿ ಗಣತಿಯನ್ನೂ ನಡೆಸಲು ಕೇಂದ್ರ ಸರ್ಕಾರ ನಿರ್ಣಯ ಕೈಗೊಂಡಿರುವುದು ಸ್ವಾಗತಾರ್ಹ. ಎಲ್ಲಾ ಜಾತಿಯ ಮುಖಂಡರೂ ಇದನ್ನು ಸ್ವಾಗತಿಸಿದ್ದಾರೆ. ಈಗ, ರಾಜ್ಯದಲ್ಲಿ ನಡೆಸಲಾದ ಸಮೀಕ್ಷಾ ವರದಿಯನ್ನು ಸರ್ಕಾರ ಅಧಿಕೃತವಾಗಿ ಬಹಿರಂಗಪಡಿಸಲಿ ಎಂದು ಆಗ್ರಹಿಸಿದರು. ಕೇಂದ್ರ ನಡೆಸುವ ಜಾತಿ ಗಣತಿಗೆ ವಿಶ್ವಾಸಾರ್ಹತೆ ಹೆಚ್ಚು. ಸಿಎಂ ಸಿದ್ದರಾಮಯ್ಯ ಅವರಿಗೆ ಬೇಕಾದವರನ್ನು ಕೂರಿಸಿಕೊಂಡು ಗಣತಿ ಮಾಡಿಸಿದ್ದರಿಂದ ಎಡವಟ್ಟುಗಳಾದವು. ಕಾಂತರಾಜ್ ಆಯೋಗದ ವರದಿಯ ಮೂಲ ಪ್ರತಿಯೇ ಇಲ್ಲದೆ ಹೇಗೆ ಸಮೀಕ್ಷೆ ನಡೆಸಿದ್ದಾರೆ ಎಂದು ಕೇಳಿದರು. ಕರ್ನಾಟಕದ ಜಾತಿ ಗಣತಿ ರಾಜಕೀಕರಣಗೊಂಡಿದೆ. ನಡೆಸಿದ ತಂಡವು ಒಂದು ರೀತಿ ಗಂಜಿಕೇಂದ್ರದ ತಂಡದಂತೆ ಆಗಿ ಹೋಯಿತು. ತಜ್ಞರಲ್ಲದೆ ಇರುವವರನ್ನೂ ಸೇರಿಸಿಕೊಂಡಿದ್ದರಿಂದ ಎಡವಟ್ಟಾದವು ಎಂದು ದೂರಿದರು.

> ಬೆಳಗಾವಿಯಲ್ಲಿ ಎಎಸ್ಪಿ ನಾರಾಯಣ ಭರಮನಿ ಮೇಲೆ ಸಿದ್ದರಾಮಯ್ಯ ಅವರು ಕೈಎತ್ತಿದ ವಿಚಾರ ಪ್ರಸ್ತಾಪಿಸಿದ ವಿಶ್ವನಾಥ್, ಸಿದ್ದರಾಮಯ್ಯ ಎಲ್ಲರನ್ನೂ ಏಕವಚನದಲ್ಲಿ ಮಾತನಾಡಿಸಿ ಏಕಾಂಗಿ ಆಗುತ್ತಿದ್ದಾರೆ. ಸಾರ್ವಜನಿಕವಾಗಿ ಅವರ ನಡವಳಿಕೆ ಸರಿ ಇಲ್ಲ. ಇದು ಯಾರೂ ಒಪ್ಪುವ ನಡೆಯಲ್ಲ
> -ಎ.ಎಚ್. ವಿಶ್ವನಾಥ್, ವಿಧಾನಪರಿಷತ್ ಸದಸ್ಯ

**ಅಧಿಕೃತವಾಗಿ ಬಹಿರಂಗ ಪಡಿಸಲಿ**

## ಜಾತಿ ಗಣತಿ: ಮಾದಿಗ ಎಂದು ನಮೂದಿಸಲು ಮನವಿ

• ಉದಯವಾಹಿನಿ, ಮಧುಗಿರಿ

ಜಾತಿ ಗಣತಿಯ ನಮೂನೆಯ ಕಲಂ 61ರಲ್ಲಿ ಮಾದಿಗ ಸಮುದಾಯ ಎಂದು ನಮೂದಿಸಬೇಕು ಎಂದು ಜಿ.ಪಂ ಮಾಜಿ ಸದಸ್ಯ ಎಚ್.ಡಿ. ಕೃಷ್ಣಪ್ಪ ತಿಳಿಸಿದರು. ಪಟ್ಟಣದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯಲ್ಲಿ 101 ಜಾತಿಗಳ ಪೈಕಿ ಒಳಮೀಸಲಾತಿ ವರ್ಗೀಕರಣದ ಸಮೀಕ್ಷೆಗೆ ಬರುವ ಅಧಿಕಾರಿಗಳ ಬಳಿ ಯಾವುದೇ ಕಾರಣಕ್ಕೂ ಆದಿ ಕರ್ನಾಟಕ, ಆದಿ ದ್ರಾವಿಡ ಇತ್ಯಾದಿ ಜಾತಿ ಸೂಚಕವಲ್ಲದ ಪದಗಳನ್ನು ಬರೆಸಬಾರದು ಎಂದು ತಿಳಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್.ಗೋಪಾಲಯ್ಯ ಮಾತನಾಡಿ, ಮಾದಿಗ ಸಂಬಂಧಿತ ಜಾತಿಗಳು ಸರ್ಕಾರದ ಪ್ರತಿನಿಧಿಗಳು ಜಾತಿ ಸಮೀಕ್ಷೆಗೆ ಬರುತ್ತಿದ್ದು ತಪ್ಪದೆ ಆಯಾ ಗ್ರಾಮದಲ್ಲಿರುವ ವಿದ್ಯಾರ್ಥಿಗಳು, ಯುವಕರು, ಸಂಘಟನೆ ಮುಖಂ ಡರು ಗ್ರಾಮದ ಯಾವುದೇ ಕುಟುಂಬ ಈ ಜಾತಿ ಸಮೀಕ್ಷೆಯಿಂದ ಹೊರಗುಳಿಯದಂತೆ ಎಚ್ಚರ ವಹಿಸಬೇಕು ಎಂದರು.

ತಾ.ಪಂ. ಮಾಜಿ ಸದಸ್ಯ ಸೊಸೈಟಿ ರಾಮಣ್ಣ ಮಾತನಾಡಿ, ತಾಲ್ಲೂಕಿನ ಜನರಿಗೆ ಅರಿವು ಮೂಡಿಸುವ ಕಾರ್ಯಕ್ರಮವಾಗಬೇಕಿದೆ. ದತ್ತಾಂಶ ಸಂಗ್ರಹಕ್ಕಾಗಿ ಜಿಲ್ಲೆಯಲ್ಲಿ ಮೇ 5ರಿಂದ ಮನೆ ಮನೆ ಸಮೀಕ್ಷೆ ನಡೆಯಲಿದೆ ಎಂದರು. ಮಾದಿಗ ದಂಡೋರ ರಾಜ್ಯ ಉಪಾಧ್ಯಕ್ಷ ತೋಂಡೋಟಿ ರಾಮಾಂಜಿನಪ್ಪ, ದಲಿತಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಡಿ.ಟಿ.ಸಂಜೀವ ಮೂರ್ತಿ, ಆದಿ ಜಾಂಬವ ಮಹಾಸಭಾ ಅಧ್ಯಕ್ಷ ಮಹರಾಜು, ಬೇಡತ್ತೂರು, ತಿಪ್ಪೇಸ್ವಾಮಿ, ರಂಗನಾಥ್, ಎಸ್.ಸಂಜೀವಯ್ಯ, ಸಿದ್ದಗಂಗಪ್ಪ, ವಕೀಲ ನರಸಿಂಹಮೂರ್ತಿ, ಪೋಸ್ಟ್ ರಾಮಣ್ಣ, ಮರಿಯಪ್ಪ, ಸಾಗರ್, ಕವಣದಾಲ ಶಿವಣ್ಣ, ಹನುಮಂತರಾಜು ಹಾಜರಿದ್ದರು.

## ಕಾರ್ಮಿಕರ ಶ್ರಮದಲ್ಲಿ ದೇಶದ ಅಭಿವೃದ್ಧಿ ಅಡಗಿದೆ: ಪುಟ್ಟಸ್ವಾಮಿಗೌಡ

• ಉದಯವಾಹಿನಿ, ಚನ್ನಪಟ್ಟಣ


ಉದಯವಾಹಿನಿ ಚಿತ್ರ

ಸುಂದರ ಸಮಾಜ ನಿರ್ಮಾಣದಲ್ಲಿ ಕಾರ್ಮಿಕರ ಪಾತ್ರ ಮಹತ್ವದ್ದಾಗಿದ್ದು, ಕಾರ್ಮಿಕರ ಶ್ರಮದಲ್ಲಿ ದೇಶದ ಅಭಿವೃದ್ಧಿ ಅಡಗಿದೆ ಎಂದು ಭಾರತ ವಿಕಾಸ ಪರಿಷತ್ ಕಣ್ವ ಶಾಖೆ ಅಧ್ಯಕ್ಷ ಪುಟ್ಟಸ್ವಾಮಿಗೌಡ ಅಭಿಪ್ರಾಯ ಪಟ್ಟರು. ನಗರದ ವಿವೇಕಾನಂದ ನಗರದಲ್ಲಿ ಭಾರತ ವಿಕಾಸ ಪರಿಷತ್ ಕಣ್ವ ಶಾಖೆ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ವಿಶ್ವ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಕಟ್ಟಡ ಕಾರ್ಮಿಕರನ್ನು ಸನ್ಮಾನಿಸಿ ಮಾತನಾಡಿದರು. ಕಾರ್ಮಿಕರು ಇಲ್ಲದಿರುವ ಜಗತ್ತನ್ನು ಊಹಿಸುವುದಕ್ಕೆ ಸಾಧ್ಯವಿಲ್ಲ. ಪ್ರತಿಯೊಂದು ಕ್ಷೇತ್ರದಲ್ಲೂ ಶ್ರಮಪಟ್ಟು ದುಡಿಯುವ ಕೆಲಸಗಾರರು ದೇಶ, ರಾಜ್ಯದ ಅಭಿವೃದ್ಧಿಗೆ ಹೆಗಲು ಕೊಡುತ್ತಾರೆ. ಹೀಗೆ ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುವ ಕಾರ್ಮಿಕರ ಶ್ರಮ ಮತ್ತು ಸೇವೆಯನ್ನು ಗೌರವಿಸುವುದು ಮತ್ತು ಅವರ ಸೇವೆಗೆ ಕೃತಜ್ಞತೆ ಸಲ್ಲಿಸುವುದು ಎಲ್ಲರ ಕರ್ತವ್ಯ ಎಂದರು.

ಭಾವಿಪ ಪ್ರಾಂತ್ಯ ಸಂಘಟನಾ ಕಾರ್ಯದರ್ಶಿ ವಸಂತಕುಮಾರ್ ಮಾತನಾಡಿ, ಕಾರ್ಮಿಕರ ದುಡಿಮೆಯಿಂದ ದೇಶದ ಆರ್ಥಿಕತೆ ನಿಂತಿದೆ. ಮಾಲೀಕ ಮತ್ತು ಕಾರ್ಮಿಕರ ಸಂಬಂಧ ತಂದೆ ಮಕ್ಕಳಂತಿದ್ದರೆ ದೇಶದ ಅಭಿವೃದ್ಧಿ ಸಾಧ್ಯ. ಕಾರ್ಮಿಕರ ಹಕ್ಕುಗಳ ಹೋರಾಟದ ನೆನಪಿಗಾಗಿ ಕಾರ್ಮಿಕ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ ಎಂದು ತಿಳಿಸಿದರು. ಬೊಂಬೆನಾಡು ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಕರ್ಣ, ಮಸೀಗೌಡನದೊಡ್ಡಿ ಕಟ್ಟಡ ಕಾರ್ಮಿಕರಾದ ಲಲಿತಾ, ಕಾವೇರಿ, ಮದನ್, ಇತರರನ್ನು ಸನ್ಮಾನಿಸಲಾಯಿತು.

ಶಾಖೆಯ ಗೌರವಾಧ್ಯಕ್ಷ ಬಿ.ಎನ್.ಕಾಡಯ್ಯ, ಭಾವಿಪ ಕಾರ್ಯದರ್ಶಿ ಯೋಗೇಶ್ ಚಕ್ಕೆರೆ, ಖಜಾಂಚಿ ವಿ.ಟಿ.ರಮೇಶ್, ಉಪಾಧ್ಯಕ್ಷ ಕರಿಯಪ್ಪ, ಸಂಚಾಲಕ ರುದ್ರೇಶ್, ಸಂಘಟನಾ ಕಾರ್ಯದರ್ಶಿ ಕೃಷ್ಣಕುಮಾರ್, ಭಾವಿಪ ರಾಷ್ಟ್ರೀಯ ಪದಾಧಿಕಾರಿಗಳಾದ ಚಂದ್ರಿಕಾ ಗಿರೀಶ್, ಮನುಜಾ, ಪಾರ್ವತಮ್ಮ ಚಂದ್ರೇಗೌಡ, ವೆಂಕಟಾಚಲ, ಟಿ.ಎನ್. ದೇವರಾಜು, ಗೋವಿಂದಳ್ಳಿ ಶಿವಣ್ಣ, ಬಸವರಾಜು, ನಿವೃತ್ತ ಶಿಕ್ಷಕಿ ಪ್ರಮೀಳಮ್ಮ, ಶಿಕ್ಷಕಿ ರಾಜೇಶ್ವರಿ ಇತರರು ಭಾಗವಹಿಸಿದ್ದರು.

# ಕಾರ್ಮಿಕರ ಮೆರವಣಿಗೆ, ಹಕ್ಕೊತ್ತಾಯ ಮಂಡನೆ

## ಮೇ.25ಕ್ಕೆ ಜೆಸಿಟಿಯು ಸಮಾವೇಶ ಆಯೋಜನೆ, ಕರಪತ್ರ ಹಂಚಿಕೆ

• ಉದಯವಾಹಿನಿ, ಮೈಸೂರು



ಉದಯವಾಹಿನಿ ಚಿತ್ರ

ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ, ಎಐಟಿಯುಸಿ, ಸಿಐಟಿಯು, ಎಐಯುಟಿಯುಸಿ, ಎಐಸಿಸಿಟಿಯು, ವಿವಿಧ ಕಾರ್ಮಿಕ ಸಂಘಟನೆಗಳು ಸದಸ್ಯರು 'ಮೇ ದಿನಾಚರಣೆ' ಅಂಗವಾಗಿ ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ, ವಿವಿಧ ಹಕ್ಕೊತ್ತಾಯ ಮಂಡಿಸಿದರು. ಎಐಟಿಯುಸಿ ಜಿಂದಾಬಾದ್, ಕಾರ್ಮಿಕರ ಐಕ್ಯತೆ ಚಿರಾಯುವಾಗಲಿ, ವಿಶ್ವ ಕಾರ್ಮಿಕರೇ ಒಂದಾಗಿ, ಕಾರ್ಮಿ ಕರನ್ನು ಗುಲಾಮಗಿರಿಗೆ ತಳ್ಳುವ ನಾಲ್ಕು ಸಂಹಿತೆ ರದ್ದುಗೊಳಿಸಿ, ಕಾರ್ಮಿಕ ವಿರೋಧಿ ಕಾನೂನು ಹಿಂಪಡೆಯಿರಿ', ಅಂಗನಾವಾಡಿ, ಆಶಾ ಕಾರ್ಯಕರ್ತೆಯರ ಸೇವೆ ಕಾಯಂಗೊಳಿಸಿ ಇತ್ಯಾದಿ ಬೇಡಿಕೆಗಳ ಘೋಷಣೆ ಕೂಗುತ್ತಾ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು. ಕಾರ್ಮಿಕ ಸಂಘಗಳ ಜಂಟಿ ಸಮಿತಿಯು (ಜೆಸಿಟಿಯು) ಮೇ. 25ರಂದು ರೋಟರಿ ಶಾಲೆ ಸಭಾಂಗಣದಲ್ಲಿ ಆಯೋಜಿಸುತ್ತಿರುವ ಸಮಾವೇಶದ ಕರಪತ್ರ ಹಂಚಿದರು. ಗಾಂಧಿ ವೃತ್ತದಿಂದ ಆರಂಭವಾದ ಮೆರವಣಿಗೆಯು ಕೆ.ಟಿ.ರಸ್ತೆ, ಇರ್ವಿನ್ ರಸ್ತೆ, ನ್ಯೂ ಸಯ್ಯಾಜಿರಾವ್ ರಸ್ತೆ, ಆಯುರ್ವೇದ ಆಸ್ಪತ್ರೆ ವೃತ್ತದ ಮೂಲಕ ತೆರಳಿ ಗಾಂಧಿ ವೃತ್ತದಲ್ಲಿ ಮುಕ್ತಾಯವಾಯಿತು.

**ಹೆಚ್ಚಿನ ಸಂಕಷ್ಟಕ್ಕೆ ದೂಡುತ್ತಿದೆ**

**ಹೆಚ್ಚಿದ ಅಸಮಾನತೆ:** ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಸಂಘಟನೆಯ ರಾಷ್ಟ್ರೀಯ ಉಪಾಧ್ಯಕ್ಷ ಎಚ್.ಆರ್.ಶೇಷಾದ್ರಿ, ಮಾತನಾಡಿ, ದೇಶದಲ್ಲಿ ಪ್ರಸ್ತುತ ಬಡತನ, ಹಸಿವು, ನಿರುದ್ಯೋಗ, ಗುಣಮಟ್ಟವಿಲ್ಲದ ಕೆಲಸ ಸೇರಿದಂತೆ ಅನೇಕ ಸಮಸ್ಯೆಗಳಿದ್ದು, ಅಸಮಾನತೆ ಹೆಚ್ಚಿದೆ. ಇದನ್ನು ಹೋಗಲಾಡಿಸಬೇಕಾದರೆ ಉತ್ತಮವಾದ ನೀತಿ ರೂಪಿಸಬೇಕಾದ ಸರ್ಕಾರವು ದೇಶದ ಶೇ 3ರಷ್ಟು ಇರುವ ಗುತ್ತಿಗೆದಾರರು, ಬಂಡವಾಳಗಾರರ ಪರವಾದ ನೀತಿ ಜಾರಿಗೆ ತರುತ್ತಿದೆ. ದುಡಿಯುವ ವರ್ಗವನ್ನು ಹೆಚ್ಚಿನ ಸಂಕಷ್ಟಕ್ಕೆ ದೂಡುತ್ತಿದೆ. ಕಾರ್ಮಿಕರು ತಮ್ಮ ಹಕ್ಕು ಪಡೆದುಕೊಳ್ಳಬೇಕಾದರೆ, ಹೊಸ ರೂಪಗಳಲ್ಲಿ ಹೋರಾಟ ಸಂಘಟಿಸಬೇಕಿದೆ ಎಂದು ಕರೆ ನೀಡಿದರು.

ಸಂಘಟನೆಗಳ ಪದಾಧಿಕಾರಿಗಳಾದ ಎಚ್.ಬಿ.ರಾಮಕೃಷ್ಣ, ಎನ್.ಕೆ.ದೇವದಾಸ್, ಸೋಮರಾಜೇ ಅರಸ್, ಎಐಸಿಸಿಟಿಯು ಜಿಲ್ಲಾಧ್ಯಕ್ಷ ಚೌಡಳ್ಳಿ ಜವರಪ್ಪ, ಜೆಸಿಟಿಯು ಸಂಚಾಲಕ ಎನ್.ಕೆ.ದೇವದಾಸ್, ಡಿ.ಜಗನ್ನಾಥ್, ಅಣ್ಣಪ್ಪ, ಯಶೋಧರಾ, ಚಂದಾ ವರೆ ಭಾಗವಹಿಸಿದ್ದರು.

> ಸ್ವಾತಂತ್ರ್ಯ ಪೂರ್ವದಿಂದ ಇದ್ದ ಟ್ರೇಡ್ ಯೂನಿಯನ್, ಫ್ಯಾಕ್ಟರಿ, ಕೈಗಾರಿಕಾ ವಿವಾದ ಮುಂತಾದ 29 ಕಾಯ್ದೆಗಳನ್ನು ನಾಲ್ಕು ಸಂಹಿತೆಗಳನ್ನಾಗಿ ಮಾರ್ಪಡಿಸಿದ ಕೇಂದ್ರ ಸರ್ಕಾರ ಕಾರ್ಮಿಕರ ಎಲ್ಲಾ ಹಕ್ಕುಗಳನ್ನು ಕಸಿದುಕೊಂಡಿದೆ. ಇದರಿಂದಾಗಿ ಮುಂದೆ ಕಾರ್ಮಿಕ ಸಂಘ ರಚನೆ ಅಸಾಧ್ಯವಾಗುತ್ತದೆ. ಸರ್ಕಾರದ ಈ ನಡೆ ಖಂಡಿಸಿ ಮೇ 20ರಂದು ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಲಾಗಿದೆ ಎಂದರು.

## ಮಿನಿ ನ್ಯೂಸ್

### ಗುಡಿಸಲಿಗೆ ಬೆಂಕಿ ಹಚ್ಚಿದವರ ವಿರುದ್ಧ ಕ್ರಮಕ್ಕೆ ಆಗ್ರಹ

• ಉದಯವಾಹಿನಿ, ಮಾಲೂರು

ಕ್ಷುಲಕ ಕಾರಣಕ್ಕೆ ಗೌರಮ್ಮ ಎಂಬುವರ ಗುಡಿಸಲಿಗೆ ಬೆಂಕಿ ಇಟ್ಟ ಚವರಮಂಗಲ ಗ್ರಾಮದ ಶ್ರೀನಿವಾಸ್ ಬಿನ್ ಯಲ್ಲಪ್ಪ ಇವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಘಟನಾ ಸಂಚಾಲಕ ಲಕ್ಕೂರು ವೆಂಕಟೇಶ್ ಒತ್ತಾಯಿಸಿದ್ದಾರೆ. ಅವರು ತಾಲ್ಲೂಕಿನ ಮಾಸ್ತಿ ಹೋಬಳಿಯ ಚವರಮಂಗಲ ಗ್ರಾಮದ ಗೌರಮ್ಮ ದಲಿತ ಜನಾಂಗಕ್ಕೆ ಸೇರಿದ್ದು, ಅದೇ ಗ್ರಾಮದ ಶ್ರೀನಿವಾಸ್ ಬಿನ್ ಯಲ್ಲಪ್ಪ ಕ್ಷುಲಕ ಕಾರಣಕ್ಕೆ ಗುಡಿಸಲಿಗೆ ಬೆಂಕಿ ಹಚ್ಚಿ ಮನೆಯಲ್ಲಿದ್ದ ದವಸ ದಾನ್ಯ, ಮನೆ ಕಟ್ಟಿಕೊಳ್ಳಲು ಕೂಲಿ ಮಾಡಿ ಕೂಡಿಟ್ಟಿದ 2 ಲಕ್ಷ ಹಣ ಸುಟ್ಟು ಕರಕಲಾಗಿದ್ದು, ಇದಕ್ಕೆ ಕಾರಣರಾದ ಶ್ರೀನಿವಾಸ್ ಅವರ ವಿರುದ್ದ ಈಗಾಗಲೇ ಅನೇಕ ಪ್ರಕರಣಗಳು ಠಾಣೆಗಳಲ್ಲಿ ದಾಖಲಾಗಿದ್ದು, ಈತನ ವಿಚಾರವಾಗಿ ಅನೇಕ ಬಾರಿ ಹಿರಿಯರು ಸೇರಿ ರಾಜಿ ಪಂಚಾಯಿತಿ ಮೂಲಕ ಈತನ ಪ್ರಕರಣಗಳನ್ನು ಮುಚ್ಚಿ ಹಾಕುತ್ತಿರುವುದರಿಂದ ಈತನಿಗೆ ಕಾನೂನಿನ ಭಯವಿಲ್ಲದೆ ಇಂತಹ ಘಟನೆಗಳನ್ನು ಮತ್ತೆ ಮತ್ತೆ ಮಾಡಲು ಉತ್ತೇಜನವಾಗುತ್ತಿದ್ದು ಈತನ ವಿರುದ್ದ ಸೂಕ್ತ ಕಾನೂನು ಕ್ರಮ ಜರುಗಿಸಿ ನಷ್ಟವಾಗಿರುವ ಮಹಿಳೆಗೆ ಸೂಕ್ತ ಪರಿಹಾರ ಒದಗಿಸುವ ಮೂಲಕ ನ್ಯಾಯ ದೊರಕಿಸಿಕೊಡಬೇಕೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ವಾದ ತಹಶೀಲ್ದಾರ್ ಎಂ.ವಿ.ರೂಪರಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಅಗ್ರಹಾರ ಬಾಬು, ಅಂಬರೀಶ್, ಸುರೇಶ್. ಕಲ್ಯಾಣ್, ಇನ್ನಿತರರು ಹಾಜರಿದ್ದರು.

### ಕಾಶ್ಮೀರ ಪ್ರವಾಸಿಗರ ಹತ್ಯೆ ಖಂಡಿಸಿ ಪ್ರತಿಭಟನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆಜಿಎಫ್

ಕಾಶ್ಮೀರದ ಪಹಲ್ಗಾಮ್ ನಲ್ಲಿ ಪ್ರವಾಸಿಗರನ್ನು ಹತ್ಯೆ ಮಾಡಿದ ಉಗ್ರಗಾಮಿಗಳ ನಡೆಯನ್ನು ಖಂಡಿಸಿ ಶಾಸಕಿ ರೂಪಕಲಾಶಶಿಧರ್ ನೇತೃತ್ವದಲ್ಲಿ ನೂರಾರು ಕಾಂಗ್ರೆಸ್ ಕಾರ್ಯಕತರು, ಸಾರ್ವಜನಿಕರು ಸಾಲ್ಡಾನ ವೃತ್ತದಿಂದ ಗಾಂಧಿವೃತ್ತದವರೆಗೆ ಕ್ಯಾಂಡಲ್ ಕೈಯಲ್ಲಿ ಹಿಡಿದು ಮೌನ ಮೆರವಣಿಗೆ ಮೂಲಕ ಪ್ರತಿಭಟನೆ ನಡೆಸಿದರು. ಈ ವೇಳೆ ಗಾಂಧಿವೃತ್ತದಲ್ಲಿ ಶಾಸಕಿ ರೂಪಕಲಾಶಶಿಧರ್ ಮಾತನಾಡಿ ಪಹಲ್ಗಾಮ್‌ನಲ್ಲಿ ಪ್ರವಾಸಿಗರನ್ನು ಗುಂಡಿಟ್ಟು ಹತ್ಯೆ ಮಾಡಿರುವ ಕೃತ್ಯ ಖಂಡನಾರ್ಹ ದೇಶ ವಿರೋಧಿ ಚಟುವಟಿಕೆ ನಡೆಸುವ ಯಾವುದೇ ಸಂಘಟನೆಯನ್ನು ಬೇರು ಸಮೇತವಾಗಿ ಕಿತ್ತು ಹಾಕಬೇಕು ಭಯೋತ್ಪಾದಕರಿಗೆ ಉಗ್ರವಾದ ಶಿಕ್ಷೆಯನ್ನು ನೀಡಬೇಕು ಎಂದು ಹೇಳಿದರು. ಭಯೋತ್ಪಾದಕರ ಕೃತ್ಯವನ್ನು ನೋಡಿದರೆ ನಮ್ಮ ರಕ್ತ ಸಹ ಕುದಿಯುತ್ತದೆ ಹೇಯವಾದ ಕೃತ್ಯವನ್ನು ಯಾರು ಸಹ ಮಾಡಬಾರದು ಎಂದರು.

### ಫೈರಿಂಗ್ ಕೇಸ್ ವಿಚಾರಣೆಗೆ ಹಾಜರಾಗುವಂತೆ ರಿಕ್ಕಿ ರೈಗೆ ನೋಟಿಸ್

• ಉದಯವಾಹಿನಿ, ರಾಮನಗರ

ಮುತ್ತಪ್ಪ ರೈ ಪುತ್ರ ಮೇಲಿನ ಫೈರಿಂಗ್ ಪ್ರಕರಣ ಸಂಬಂಧ ರಿಕ್ಕಿ ರೈಗೂ ಬಿಡದಿ ಪೊಲೀಸರು ನೋಟಿಸ್ ನೀಡಿದ್ದಾರೆ. ಈಗಾಗಲೇ ಆಸ್ಪತ್ರೆಯಲ್ಲೇ ರಿಕ್ಕಿ ರೈ ಹೇಳಿಕೆ ದಾಖಲಿಸಿಕೊಂಡಿದ್ದ ಪೊಲೀಸರು, ಪ್ರಕರಣದ ಕುರಿತು ಹೆಚ್ಚಿನ ವಿಚಾರಣೆ ಅವಶ್ಯಕತೆ ಇದ್ದು ಖುದ್ದು ಠಾಣೆಗೆ ಹಾಜರಾಗುವಂತೆ ರಿಕ್ಕಿ ರೈಗೆ ನೋಟಿಸ್ ನೀಡಿದ್ದಾರೆ. ಫೈರಿಂಗ್‌ನ ವೇಳೆ ರಿಕ್ಕಿ ರೈ ಕೈ ಹಾಗೂ ಮೂಗಿನ ಭಾಗಕ್ಕೆ ಗಂಭೀರ ಗಾಯವಾಗಿತ್ತು. 2 ಆಪರೇಷನ್‌ಗಳಿಗೆ ಒಳಗಾಗಿದ್ದ ರಿಕ್ಕಿ ಸದ್ಯ ಆಸ್ಪತ್ರೆ ಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಬಂಧಿತ ಗನ್‌ಮ್ಯಾನ್ ವಿಠ್ಠಲ್ ಫೈರಿಂಗ್ ಮಾಡಿರುವ ಶಂಕೆ ಇದ್ದು, ಘಟನೆ ಸಂಬಂಧ ವಿಚಾರಣೆಯಲ್ಲಿ ವಿಠ್ಠಲ್ ಯಾವುದೇ ಸತ್ಯ ಬಾಯ್ಬಿಡುತ್ತಿಲ್ಲ. ಹೀಗಾಗಿ ರಿಕ್ಕಿ ರೈ, ಆರೋಪಿ ವಿಠ್ಠಲ್ ಮುಖಾಮುಖಿ ವಿಚಾರಣೆ ನಡೆಸಲು ಪೊಲೀಸರ ಸಿದ್ಧತೆ ನಡೆಸಿದ್ದಾರೆ.ಅಲ್ಲದೇ ಎಫ್‌ಎಸ್‌ಎಲ್ ವರದಿಗಾಗಿ ಕಾಯುತ್ತಿರುವ ಪೊಲೀಸರು, ವಶಪಡಿಸಿಕೊಂಡ 7 ಗನ್‌ಗಳಲ್ಲಿ ಯಾವ ಗನ್‌ಗೆ ಸ್ಥಳದಲ್ಲಿ ಸಿಕ್ಕ ಬುಲೆಟ್ ಮ್ಯಾಚ್ ಆಗುತ್ತೆ ಎಂಬ ಮಾಹಿತಿ ತಿಳಿದು ತನಿಖೆಯನ್ನ ಮತ್ತಷ್ಟು ಚುರುಕುಗೊಳಿಸಲು ಮುಂದಾಗಿದ್ದಾರೆ.

### ಪ್ರಾಧಿಕಾರದಿಂದ ನೀಲಗಾರರ ಪರಂಪರೆಗೆ ಧಕ್ಕೆಯಾಗದಿರಲಿ

• ಉದಯವಾಹಿನಿ, ಹನೂರು

ಸರ್ಕಾರ ಸಿದ್ದಪ್ಪಾಜಿ, ರಾಚಪ್ಪಾಜಿ, ಮಂಟೇಸ್ವಾಮಿ ಕ್ಷೇತ್ರ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಪ್ರಾಧಿಕಾರ ಮಾಡುತ್ತಿರುವುದು ಸಂತಸದ ವಿಚಾರ. ಆದರೆ ನೀಲಗಾರರ ಪರಂಪರೆ ಹಾಗೂ ಭಕ್ತರ ಭಾವನೆಗೆ ಧಕ್ಕೆಯಾಗದಂತೆ ಪ್ರಾಧಿಕಾರ ರಚನೆ ಮಾಡಬೇಕು. ಇಲ್ಲದಿದ್ದರೆ ಇದನ್ನು ಕೈ ಬಿಡಬೇಕು ಎಂದು ಮಾಜಿ ಶಾಸಕ ಆರ್ ನರೇಂದ್ರ, ಒತ್ತಾಯಿಸಿದರು. ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪವಾಡಪುರುಷ ಸಿದ್ದಪ್ಪಾಜಿ, ಮಂಟೇಸ್ವಾಮಿ ರಾಚಪ್ಪಾಜಿ ಕ್ಷೇತ್ರಗಳಿಗೆ ತನ್ನದೇ ಆದ ಇತಿಹಾಸವಿದೆ. ಈ ಕ್ಷೇತ್ರಗಳೆಲ್ಲವೂ ಒಂದು ಮನೆತನದ ಆಡಳಿತಕ್ಕೆ ಒಳಪಟ್ಟ ಪ್ರದೇಶಗಳಾಗಿವೆ. ಈ ದೇವಸ್ಥಾನಗಳಿಗೆ ಸುಮಾರು 6ರಿಂದ ಏಳು ಜಿಲ್ಲೆಗಳಲ್ಲಿ ಲಕ್ಷಾಂತರ ಭಕ್ತರಿದ್ದಾರೆ. ನೀಲಗಾರರ ಪರಂಪರೆಗೆ ಸೇರಿದ ಸಮುದಾಯದವರು ತಮ್ಮ ಮೊದಲ ಗಂಡು ಮಗುವಿಗೆ ಸಿದ್ದಪ್ಪಾಜಿ ದೀಕ್ಷೆ ಕೊಡಿಸುವುದು, ದೇವರ ಗುಡ್ಡರನ್ನು ಬಿಡಿಸುವುದಕ್ಕೆ ಸುಮಾರು 600 ವರ್ಷಗಳ ಇತಿಹಾಸವಿದೆ. ಏಕಾಏಕಿ ಪ್ರಾಧಿಕಾರ ರಚನೆ ಮಾಡಿದರೆ ಭಕ್ತರ ಭಾವನೆಗಳಿಗೆ ಧಕ್ಕೆ ಮಾಡಿದಂತಾಗುತ್ತದೆ. ನೀಲಗಾರರ ಪರಂಪರೆ ಅಳಿದು ಹೋಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಇನ್ನೊಮ್ಮೆ ಪರಿಶೀಲನೆ ನಡೆಸಿ ಮಠದ ಪೀಠಾಧಿಪತಿಗಳು, ಭಕ್ತರ ಜೊತೆ ಸಭೆ ನಡೆಸಿ ವಿಶ್ವಾಸಕ್ಕೆ ತೆಗೆದುಕೊಂಡು ಪ್ರಾಧಿಕಾರ ರಚನೆ ಮಾಡಬೇಕು ಎಂದರು.

ಪ್ರಾಧಿಕಾರದ ವ್ಯಾಪ್ತಿಯಲ್ಲಿ ಮಠದ ಸ್ವಾಮೀಜಿ ಕಾರ್ಯವೈಖರಿ ಸೇರಿದಂತೆ ರೂಪುರೇಷೆಗಳನ್ನು ಜನರ ಮುಂದಿಡಬೇಕು. ಏಕಾಏಕಿ ನಿರ್ಧಾರ ಜಾರಿ ಮಾಡಿದರೆ ನಮ್ಮ ವಿರೋಧವಿದೆ. ಕ್ಷೇತ್ರದಲ್ಲಿ ಪ್ರಮುಖರ ಸಭೆ ಕರೆದು ಸಾಧಕ, ಬಾಧಕಗಳ ಚರ್ಚೆ ಮಾಡಬಹುದಾಗಿತ್ತು. ಏಕಾಏಕಿ ಪ್ರಾಧಿಕಾರ ರಚನೆ ಮಾಡಲು ಜಿಲ್ಲೆಯ ಯಾವ ಶಾಸಕರು ಪ್ರಸ್ತಾವನೆ ಸಲ್ಲಿಸಿಲ್ಲ. ಆದರೆ, ಏಕಾಏಕಿ ಪ್ರಾಧಿಕಾರ ಪ್ರಸ್ತಾವನೆ ವಿಚಾರ ಏಕೆ ಬಂದಿದೆ ಎಂಬುದನ್ನು ಮತ್ತೊಮ್ಮೆ ಮುಖ್ಯಮಂತ್ರಿಗಳು, ಸಂಬಂಧಪಟ್ಟ ಸಚಿವರ ಜೊತೆ ಚರ್ಚೆ ನಡೆಸುವಂತೆ ಮನವಿ ಮಾಡುತ್ತೇನೆ ಎಂದರು.

ಅಂತರಾಳದಿಂದ... EDITORIAL

# ಪಠ್ಯಪುಸ್ತಕ ಪರಿಷ್ಕರಣೆ ವಿವಾದ ಎನ್‌ಸಿಇಆರ್‌ಟಿ ಕ್ರಮಕ್ಕೆ ಸ್ಪಷ್ಟತೆ ಬೇಕು

ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಏಳನೆಯ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕವನ್ನು ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಪರಿಷ್ಕರಿಸಿದೆ. ದೆಹಲಿಯ ಸುಲ್ತಾನರು ಮತ್ತು ಮೊಘಲರ ಕುರಿತ ಭಾಗವನ್ನು ಪಠ್ಯಪುಸ್ತಕದಿಂದ ಕೈಬಿಟ್ಟಿದೆ. ಇವುಗಳ ಬದಲಿಗೆ ಭಾರತದ ಪ್ರಾಚೀನ ರಾಜವಂಶಗಳು, ಮಹಾ ಕುಂಭಮೇಳ, ಯಾತ್ರಾಸ್ಥಳಗಳ ಬಗ್ಗೆ ಮಾಹಿತಿ ಒದಗಿಸಲಾಗಿದೆ. ಇತಿಹಾಸ, ಭೂಗೋಳಶಾಸ್ತ್ರ ಮತ್ತು ಪೌರನೀತಿಗೆ ಪ್ರತ್ಯೇಕ ಪಠ್ಯಪುಸ್ತಕ ಇದ್ದಿದ್ದನ್ನು ಬದಲಿಸಿ, 'ಎಕ್ಸ್‌ಪ್ಲೋರಿಂಗ್ ಸೊಸೈಟಿ- ಇಂಡಿಯಾ ಆ್ಯಂಡ್ ಬಿಯಾಂಡ್' (ಸಮಾಜದ ಅನ್ವೇಷಣೆ- ಭಾರತ ಮತ್ತು ಅದರ ಆಚೆಗೆ) ಎಂಬ ಒಂದೇ ಪಠ್ಯಪುಸ್ತಕವನ್ನು ನೀಡಲಾಗಿದೆ. ಹೊಸ ಪಠ್ಯಪುಸ್ತಕದಲ್ಲಿ ಇತಿಹಾಸದ ಪಾಠಗಳು ಮೂರು ಮತ್ತು ಆರನೆಯ ಶತಮಾನದ ನಡುವಿನ ಗುಪ್ತರ ಕಾಲಕ್ಕೆ ಕೊನೆಗೊಳ್ಳುತ್ತವೆ. ದೆಹಲಿಯ ಸುಲ್ತಾನರು ಮತ್ತು ಮೊಘಲರ ಅವಧಿ ಕುರಿತ ಪಾಠಗಳನ್ನು ಕೈಬಿಡಲಾಗಿದೆ. ಹೊಸ ಪಠ್ಯಪುಸ್ತಕದಲ್ಲಿನ ಅಧ್ಯಾಯಗಳು ಪ್ರಾಚೀನ ಭಾರತ, ಶಾತವಾಹನರು, ಚೋಳರು, ಪಾಂಡ್ಯರು, ಮೌರ್ಯ ಸಾಮ್ರಾಜ್ಯ, ಸಾಮ್ರಾಟ್ ಅಶೋಕನ ಕಾಲದ ರಾಜಕೀಯ ಸ್ಥಿತಿಯ ಬಗ್ಗೆ ಹೆಚ್ಚು ಗಮನ ನೀಡಿವೆ.



ನಮ್ಮ ಸಾಂಸ್ಕೃತಿಕ ಪರಂಪರೆ ಮತ್ತು ಜ್ಞಾನ ಸಂಪ್ರದಾಯಗಳು, ಆಡಳಿತ ಮತ್ತು ಪ್ರಜಾತಂತ್ರ, ನಮ್ಮ ಸುತ್ತಲಿನ ಆರ್ಥಿಕ ಜೀವನ ಸೇರಿದಂತೆ ಐದು ಅಂಶಗಳ ಬಗ್ಗೆ ಗಮನ ನೀಡಿದೆ. ಧಾರ್ಮಿಕ ಸ್ಥಳಗಳ ಬಗ್ಗೆ 'ನೆಲವು ಪವಿತ್ರವಾಗುವುದು ಹೇಗೆ' ಎಂಬ ಹೆಸರಿನ ಹೊಸ ಪಾಠವೊಂದು ಇದೆ. 66 ಕೋಟಿ ಜನರು ಭಾಗಿಯಾಗಿದ್ದರು ಎಂದು ಹೇಳಲಾಗಿರುವ ಕುಂಭಮೇಳದ ಬಗ್ಗೆಯೂ ವಿವರ ಇದೆ. ಇದು ಪಠ್ಯಪುಸ್ತಕದ ಮೊದಲ ಭಾಗ ಮಾತ್ರ, ಮುಂದಿನ ಭಾಗದಲ್ಲಿ ಹೆಚ್ಚಿನ ಅಧ್ಯಾಯಗಳು ಇರುತ್ತವೆ ಎಂದು ಎನ್‌ಸಿಇಆರ್‌ಟಿ ಅಧಿಕಾರಿಗಳು ಹೇಳಿದ್ದಾರೆ.

**ಇತಿಹಾಸಕ್ಕೆ ಸಂಬಂಧಿಸಿದ ಹಳೆಯ ಪಠ್ಯಪುಸ್ತಕ 7ನೇ ಶತಮಾನದ ನಂತರದ ವಿವರಗಳನ್ನು ಒಳಗೊಂಡಿತ್ತು. ಅದು ದೆಹಲಿಯ ಸುಲ್ತಾನರು, ಮೊಘಲ್ ಆಡಳಿತಗಾರರು, ಅವರ ಆಡಳಿತ ವ್ಯವಸ್ಥೆ ಒಳಗೊಂಡಂತೆ ಮಧ್ಯಯುಗದ ಬಗ್ಗೆ ವಿವರ ಒಳಗೊಂಡಿತ್ತು. ಆದರೆ ಹೊಸ ಪಠ್ಯಪುಸ್ತಕವು ಭಾರತ ಮತ್ತು ವಿಶ್ವದ ಐದು ಅಂಶಗಳ ಬಗ್ಗೆ ಗಮನ ಹರಿಸಿದೆ.**

ಆದರೆ, ಈಗ ಕೈಬಿಟ್ಟಿರುವ ಭಾಗಗಳನ್ನು ಪಠ್ಯಪುಸ್ತಕದ ಎರಡನೆಯ ಭಾಗದಲ್ಲಿ ಅಳವಡಿಸಲಾಗುತ್ತದೆಯೇ ಎಂಬುದನ್ನು ಅವರು ಸ್ಪಷ್ಟವಾಗಿ ಹೇಳಿಲ್ಲ. ಎರಡನೆಯ ಭಾಗವು ಈ ವರ್ಷದಲ್ಲಿ ಮುಂದಿನ ದಿನಗಳಲ್ಲಿ ಹೊರಬರುವ ನಿರೀಕ್ಷೆ ಇದೆ. ಮೊಘಲರ ಕಾಲದ ಪಾಠವನ್ನು ಕೈಬಿಟ್ಟಿಲ್ಲ, ಪುನರಾವರ್ತನೆಗಳನ್ನು ಮಾತ್ರ ಕೈಬಿಡಲಾಗಿದೆ ಎಂದು ಕೇಂದ್ರ ಶಿಕ್ಷಣ ಖಾತೆ ರಾಜ್ಯ ಸಚಿವ ಸುಕಾಂತ ಮಜುಂದಾರ್ ಅವರು ಹೇಳಿದ್ದಾರೆ. ಪಠ್ಯಪುಸ್ತಕದ ಮೊದಲ ಭಾಗದಲ್ಲಿ ಇತಿಹಾಸಕ್ಕೆ ಸಂಬಂಧಿಸಿದ ಮಹತ್ವದ ಕಾಲಘಟ್ಟವೊಂದನ್ನು ಕೈಬಿಡಲಾಗಿದೆ, ಅದು ಪಠ್ಯಪುಸ್ತಕದ ಎರಡನೆಯ ಭಾಗದಲ್ಲಿ ಸೇರ್ಪಡೆ ಆಗುತ್ತದೆ ಎಂಬುದು ಖಚಿತವಿಲ್ಲ ಎನ್ನುವುದು ವಾಸ್ತವ. ಈಗಿನ ಆಡಳಿತಾರೂಢರು ಪಠ್ಯಪುಸ್ತಕಗಳನ್ನು ಸೈದ್ಧಾಂತಿಕ ಹಾಗೂ ರಾಜಕೀಯ ಕದನಕ್ಕೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ರಾಷ್ಟ್ರೀಯ ಶಿಕ್ಷಣ ನೀತಿಯು ಭಾರತೀಯ ಮೌಲ್ಯಗಳಿಗೆ ಆದ್ಯತೆ ನೀಡುತ್ತದೆ ಎಂಬುದು ಪಠ್ಯಪುಸ್ತಕಗಳಲ್ಲಿ ಕಾಲಕಾಲಕ್ಕೆ ಬದಲಾವಣೆ ತರುವುದಕ್ಕೆ ನೆಪವಾಗಿ ಒದಗಿಬಂದಿದೆ. ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳು ಮತ್ತೆ ಮತ್ತೆ ಪರಿಷ್ಕರಣೆ ಕಂಡಿವೆ. ಪುನರಾವರ್ತನೆಯನ್ನು ಇಲ್ಲವಾಗಿಸುವ ನೆಪ ಹೇಳಿ ಪಠ್ಯಗಳನ್ನು ಬದಲಾಯಿಸಲಾಗಿದೆ. ಬಾಬರಿ ಮಸೀದಿ ಧ್ವಂಸ, 1975ರಲ್ಲಿ ಜಾರಿಯಾದ ತುರ್ತು ಪರಿಸ್ಥಿತಿ, ದಲಿತ ಚಳವಳಿಗಳು, ನಕ್ಸಲ್‌ವಾದ, ಕೋಮು ಹಿಂಸಾಚಾರಗಳು ಮತ್ತು 2002ರ ಗುಜರಾತ್ ಗಲಭೆಗೆ ಸಂಬಂಧಿಸಿದ ಉಲ್ಲೇಖಗಳನ್ನು ಪರಿಷ್ಕರಿಸಲಾಗಿದೆ, ಅವುಗಳಿಗೆ ಕತ್ತರಿ ಹಾಕಲಾಗಿದೆ ಅಥವಾ ತೆಗೆದುಹಾಕಲಾಗಿದೆ. ಪಠ್ಯಪುಸ್ತಕದ ಹೂರಣದ ಕುರಿತು ಸ್ಪಷ್ಟತೆ ಇಲ್ಲದಿರುವುದು, ಪಠ್ಯದ ಯಾವ ಭಾಗವನ್ನು ಕೈಬಿಡಬಹುದು ಅಥವಾ ಉಳಿಸಿಕೊಳ್ಳಬಹುದು ಎಂಬುದು ಸ್ಪಷ್ಟವಾಗದೇ ಇರುವುದು, ಯಾವಾಗ ಮತ್ತು ಎಷ್ಟು ಹಂತಗಳಲ್ಲಿ ಆ ಕೆಲಸ ನಡೆಯಬಹುದು ಎಂಬುದು ಗೊತ್ತಾಗದೇ ಇರುವುದು ಪಠ್ಯಪುಸ್ತಕಗಳನ್ನು ಆಗಾಗ ಪರಿಷ್ಕರಿಸುವುದಕ್ಕಿಂತ ಹೆಚ್ಚಿನ ಕಳವಳ ಉಂಟುಮಾಡುವಂತಿವೆ.

# ರಾಮಾಯಣ



## ಗುಹನು ಶ್ರೀ ರಾಮನ ಬಳಿಗೆ ಬಂದದ್ದು

• ಹಿಂದಿನ ಸಂಚಿಕೆಯಿಂದ **78ನೆಯ ಅಧ್ಯಾಯ**

ಸಮಸ್ತ ಪ್ರಾಣಿಗಳ ಪಾಪಸಮೂಹವನ್ನು ಪರಿಹರಿಸುವಂಥಾದ್ದಾಗಿ ಸ್ಫಟಿಕಮಣಿಯಂತೆ ನಿರ್ಮಲವಾದ ಉದಕವುಳ್ಳದ್ದಾಗಿ, ದಿಗ್ಗಜಗಳಂತಿದ್ದ ಕಾಡಾನೆಗಳಿಂದ ಮನೋಹರವಾಗಿದ್ದಿತು. ಸ್ನಾನಾರ್ಥವಾಗಿ ಬಂದ ದೇವಸಮೂಹಗಳಿಂದಲೂ ದೇವದುಂದುಭಿಗಳ ಧ್ವನಿಗಳಿಂದಲೂ ಮನೋಹರವಾಗಿ, ಎಲ್ಲಿ ನೋಡಿದರೂ ಪುಷ್ಪಭರಿತಗಳಾದ ವೃಕ್ಷಗಳೆಂಬ ಭೂಷಣಗಳಿಂದ ಅಲಂಕರಿಸಲ್ಪಟ್ಟ ಸ್ತ್ರೀಯೋ ಎಂಬ ಹಾಗಿದ್ದ ತಳಿರು ಲತಾಮಂಟಪಗಳಿಂದ ಮನೋಹರವಾಗಿದ್ದಿತು. ಶಿಂಶುಮಾರ ನೀರಾನೆ ಜಲಸರ್ಪಗಳಿಂದ ಇಟ್ಟಣಿಸಿದ್ದಿತು. ಸಗರನ ಮಕ್ಕಳ ಮೋಕ್ಷಾರ್ಥವಾಗಿ ಭಗೀರಥನ ತಪಸ್ಸಾಮರ್ಥ್ಯದಿಂದ ಸ್ವರ್ಗದಿಂದಿಳಿದು ಪರಮೇಶ್ವರನ ಜಟಾಮುಕುಟದಲ್ಲೆರಗಿ ಸಮಸ್ತ ಪ್ರಾಣಿಗಳ ಪಾಪಗಳನ್ನೂ ನಾಶಮಾಡುವಂಥಾದ್ದಾಗಿ, ಸಾಕ್ಷಾತ್ ಪರಮಪುರುಷನಾದ ನಾರಾಯಣನ ಪಾದದಿಂದುದ್ಭವಿಸಿದಂಥ ಸಮುದ್ರರಾಜಪತ್ನಿಯಾದ ಗಂಗಾನದಿಯನ್ನು ಶ್ರೀರಾಮನು ದರ್ಶನಮಾಡಿದನು. ಅನಂತರ ಸಾರಥಿಯಾದ ಸುಮಂತ್ರನನ್ನು ನೋಡಿ '' ಸುಮಂತ್ರ, ನಾವು ಈಹೊತ್ತು ಈ ಗಂಗಾತೀರದಲ್ಲಿ ಇರೋಣ. ಇಲ್ಲಿ ಕೋರಕಿತವೂ ಪುಷ್ಪಿತವೂ ಫಲವತ್ತೂ ಆದ ಇಂಗಳವೃಕ್ಷವಿದೆ. ಈ ಮರದಡಿಯಲ್ಲಿದ್ದು ಗಂಗಾಸೇವೆಯನ್ನು ಮಾಡೋಣ. ಈ ಗಂಗೆಯನ್ನು ಪಶುಪಕ್ಷಿಗಳು ಕೂಡ ಸೇವಿಸಿ ಮುಕ್ತಿಮಾರ್ಗವನ್ನು ಸೇರುವುವು'' ಎಂದು ನುಡಿದನು. ಸುಮಂತ್ರನು ಮಹಾಪ್ರಸಾದವೆಂದು ಆ ಇಂಗಳದ ವೃಕ್ಷದ ಸಮೀಪಕ್ಕೆ ರಥವನ್ನು ನಡೆಸಲು ಶ್ರೀರಾಮನು ಸೀತಾಲಕ್ಷ್ಮಣರೊಡನೆ ರಥದಿಂದಿಳಿದು ಆ ವೃಕ್ಷದಡಿಯಲ್ಲಿದ್ದನು. ಆಗ ಸುಮಂತ್ರನು ರಥದ ಕುದುರೆಗಳನ್ನು ಬಿಚ್ಚಿ ಮೈಯನ್ನುಜ್ಜಿ ನೀರನ್ನು ಕುಡಿಸಿದನು. ಅನಂತರ ಶ್ರೀರಾಮನ ಸಮೀಪಕ್ಕೆ ಬಂದು ಕೈ ಮುಗಿದುಕೊಂಡು ನಿಂತನು. ಆ ಸಮಯದಲ್ಲಿ ಶ್ರೀರಾಮನಿಗೆ ಪ್ರಾಣಸಖನೂ ಆ ದೇಶದ ಅಧಿಪತಿಯೂ ಸಮಸ್ತ ಕಿರಾತರಿಗೆ ಒಡೆಯನೂ ಆದ ಗುಹನು ತನ್ನ ದೇಶಕ್ಕೆ ಶ್ರೀರಾಮನು ಬಿಜಯಂಗೈದನೆಂಬ ವಾರ್ತೆಯನ್ನು ಕೇಳಿ ತನ್ನ ಪ್ರಧಾನಿಗಳನ್ನೂ ಜ್ಞಾತಿಗಳನ್ನೂ ಕೂಡಿಕೊಂಡು ಆತನನ್ನು ನೋಡಬೇಕೆಂದು ಬಂದನು.

ಶ್ರೀರಾಮನು ಆತನನ್ನು ದೂರದಲ್ಲಿಯೇ ಕಂಡು ಸೀತಾಲಕ್ಷ್ಮಣಸಮೇತನಾಗಿ ಎದುರುಗೊಂಡು ಹೋದನು. ಗುಹನು ಅತ್ಯಂತ ಪ್ರೀತಿಯಿಂದ ಶ್ರೀರಾಮನನ್ನು ತಬ್ಬಿಕೊಂಡು ಆತನನ್ನು ಕುರಿತು ಶ್ರೀರಾಮ ಆಯೋಧ್ಯಾಪಟ್ಟಣದ ಹಾಗೆಯೇ ಈ ದೇಶವೂ ನಿನ್ನದು. ನಾನು ಮಾಡುವ ಸೇವೆಯನ್ನು ಸ್ವೀಕರಿಸು. ನಿಮ್ಮಂಥ ಅತಿಥಿಗಳು ಯಾರಿಗೂ ದೊರಕಲಾರರು ಎಂದು ನುಡಿದನು ಮತ್ತು ಗಂಗಾಜಲದಿಂದ ಶ್ರೀರಾಮಲಕ್ಷ್ಮಣಸೀತಾದೇವಿಯರಿಗೆ ಪ್ರತ್ಯೇಕವಾಗಿ ಅರ್ಘ್ಯಪಾದ್ಯಾದಿ ಸತ್ಕಾರಗಳನ್ನೂ ಮಾಡಿ ಶ್ರೀರಾಮ ಈ ರಾಜ್ಯವು ನಿನ್ನದು. ನಾನು ನಿನ್ನ ಸೇವಕನು, ನೀನು ನನಗೆ ಒಡೆಯನು. ಈ ರಾಜ್ಯವನ್ನು ನೀನೇ ಪರಿಪಾಲಿಸು, ಭಕ್ಷ್ಯ ಭೋಜ್ಯ ಲೇಹ್ಯ ಚೋಷ್ಯಗಳೆಂಬ ನಾಲ್ಕು ವಿಧಗಳಾದ ಆಹಾರವನ್ನು ಕೈಗೊಳ್ಳು, ಉತ್ತಮವಾದ ಸುಪ್ಪತ್ತಿಗೆಯಲ್ಲಿ ಪವಡಿಸು. ಕುದುರೆಗಳಿಗೆ ಆಹಾರವನ್ನು ಕೊಡಿಸುತ್ತೇನೆ ಎಂದು ನುಡಿದನು. ಶ್ರೀರಾಮನು ಎಲ್ಲೆ ಗುಹನೆ, ನೀನು ಕಾಲುನಡೆಯಿಂದ ಬಂದು ನನ್ನನ್ನು ಕಾಣಿಸಿ ಕೊಂಡದ್ದರಿಂದಲೂ ಅತ್ಯಂತ ಸ್ನೇಹದಿಂದ ಸಂಭಾಷಣೆ ಮಾಡಿದ್ದರಿಂದಲೂ ನಾವು ಸಂತುಷ್ಟರಾದೆವು. ಇಷ್ಟರಿಂದಲೇ ನೀನು ನಮಗೆ ಅನೇಕ ಸತ್ಕಾರಗಳನ್ನು ಮಾಡಿದಂತಾಯಿತು. ಮಕ್ಕಳು ಮೊಮ್ಮಕ್ಕಳು ಬಂಧು ಜನ ಸಹಿತನಾಗಿ ಸುಖದಲ್ಲಿರುವ ನಿನ್ನನ್ನು ದೈವಾನುಕೂಲದಿಂದ ಕಂಡೆವು. ನಿನ್ನ ರಾಜ್ಯದಲ್ಲಿ ಎಲ್ಲರೂ ಸುಖವಾಗಿದ್ದಾರೆಯೆ? ನೀನು ಸಂತೋಷವಾಗಿರುವೆಯಾ? ನೀನು ಪ್ರೀತಿಯಿಂದ ಸಮಸ್ತ ಸಾಮಗ್ರಿಗಳನ್ನೂ ತರಿಸಿದ್ದನ್ನು ನಾನು ಬಲ್ಲೆ. ನಾನು ವನಕ್ಕೆ ಬರುವಾಗ ನಾರು ಬಟ್ಟೆಗಳನ್ನುಟ್ಟು ಜಡೆಗಳನ್ನು ಧರಿಸಿಕೊಂಡು ಕಂದ ಮೂಲ ಫಲಾಹಾರಗಳಿಂದ ಹದಿನಾಲ್ಕು ವರುಷಗಳು ನಿಯಮದಿಂದಿರುವುದಾಗಿ ಪ್ರತಿಜ್ಞೆ ಮಾಡಿದ್ದರಿಂದ ಯಾವ ವಸ್ತುವನ್ನೂ ಪರಿಗ್ರಹಿಸುವುದಿಲ್ಲ. ನಾನು ವಾನಪ್ರಸ್ಥಾಶ್ರಮಿಯಾದ ತಪಸ್ವಿಯೆಂದು ತಿಳಿ. ಕುದುರೆಗಳಿಗೆ ಆಹಾರವನ್ನು ಕೊಡಿಸು ಎಂದು ನುಡಿದನು. ಆಮೇಲೆ ಶ್ರೀರಾಮನು ನಾರುಬಟ್ಟೆಗಳನ್ನುಟ್ಟು ಸಾಯಂಸಂಧ್ಯಾ ವಂದನೆಯನ್ನು ತೀರಿಸಿ ಲಕ್ಷ್ಮಣನಿಂದ ಉದಕವನ್ನು ತರಿಸಿ ಪಾನಮಾಡಿ ಭೂಮಿಯ ಮೇಲೆ ಶಯನ ಮಾಡಿದನು. ಲಕ್ಷ್ಮಣನು ಆತನಿಗೆ ಪಾದಸೇವೆಯನ್ನು ಮಾಡಿ ತಾನೂ ಮರದಡಿಯನ್ನು ಸೇರಿ ಗುಹಸುಮಂತ್ರರೊಡನೆ ಸಂಭಾಷಣೆ ಮಾಡುತ್ತ ಬಿಲ್ಲುಬಾಣಗಳನ್ನು ಧರಿಸಿಕೊಂಡು ನಿದ್ರೆಯಿಲ್ಲದೆ ಎಚ್ಚರಿಕೆಯಿಂದ ರಕ್ಷಿಸಿಕೊಂಡಿರಲು ಆ ರಾತ್ರಿಯು ಕಳೆಯಿತು.

ಮುಂದುವರಿಯುವುದು...

# ಶ್ರೇಷ್ಠ ಅಧ್ಯಾತ್ಮಿಕ ತತ್ವಜ್ಞಾನಿ ಶಂಕರಾಚಾರ್ಯರು





ಗಿರಿಜಾ.ಎಸ್
• ಉದಯವಾಹಿನಿ, ವಿಶೇಷ

ಭಾರತದ ಶ್ರೇಷ್ಠ ಅಧ್ಯಾತ್ಮಿಕ ತತ್ವಜ್ಞಾನಿಗಳಾದ ಆದಿ ಶಂಕರಾಚಾರ್ಯರ ಜಯಂತಿಯನ್ನು ಮೇ 2 ಶುಕ್ರವಾರದ ದಿನದಂದು ಆಚರಿಸಲಾಗುತ್ತಿದೆ. ಅದ್ವೈತ ವೇದಾಂತದ ಅಡಿಪಾಯ ಹಾಕಿದ ಮತ್ತು ಸಾಂಸ್ಕೃತಿಕ , ಧಾರ್ಮಿಕ ಅವನತಿಯ ಸಮಯದಲ್ಲಿ ಹಿಂದೂಧರ್ಮವನ್ನು ಪುನರುಜ್ಜೀವನಗೊಳಿಸುವಲ್ಲಿ ನಿರ್ಣಾಯಕ ಪಾತ್ರವಹಿಸಿದ ಪೂಜ್ಯ ಆದಿ ಶಂಕರಾಚಾರ್ಯರ 1237ನೇಯ(1237)ಜನ್ಮದಿನಾಚರಣೆಯನ್ನು ಆಚರಿಸಲಾಗುತ್ತಿದೆ.

**ಶಂಕರಾಚಾರ್ಯರ ಆರಂಭಿಕ ಜೀವನ ಮತ್ತು ಶಿಕ್ಷಣ:** ಶಂಕರಾಚಾರ್ಯರು ವೈಶಾಖಮಾಸ ಶುಕ್ಲಪಂಚಮಿಯಂದು ಕೇರಳ ರಾಜ್ಯದ ಕಾಲಡಿ (ಕಾಲಟಿ) ಎಂಬ ಸಣ್ಣ ಹಳ್ಳಿಯಲ್ಲಿ ಶಿವಗುರು ಮತ್ತು ಆರ್ಯಾಂಬ ದಂಪತಿಗಳ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ತಮ್ಮ 7 ನೇಯ ವಯಸ್ಸಿನಲ್ಲಿ ಅವರು ವೇದಗಳನ್ನು ಅಧ್ಯಯನ ಮಾಡಲು ತೊಡಗಿಸಿಕೊಂಡರು.ಎಂಟು ವರ್ಷದವರಿರುವಾಗ ಮನೆಯಿಂದ ಹೊರಟು ಗುರು ಅನ್ವೇಷಣೆಯಲ್ಲಿ ತೊಡಗಿದರು.ತಮ್ಮ ಗುರುಗೋವಿಂದ ಭಗವತ್ಪಾದರ ಭೇಟಿಯಾಗುವ ಮೊದಲು ಎರಡುಸಾವಿರ ಕಿ.ಮೀ.ಪ್ರಯಾಣಿಸಿದರಂತೆ. ಗುರುಗಳ ಮಾರ್ಗದರ್ಶನದಲ್ಲಿ 'ಗೌಡಪಾದೀಯಕಾರಿಕ' 'ಬ್ರಹ್ಮಸೂತ್ರ', ವೇದಗಳು,ಉಪನಿಷತ್ತುಗಳನ್ನು ಅಧ್ಯಯನ ಮಾಡಿದರು.ತಮ್ಮ ಹದಿನಾರನೇಯ ವಯಸ್ಸಿನಲ್ಲಿ ತಮ್ಮ ಬರವಣಿಗೆಯನ್ನು ಪೂರ್ಣಗೊಳಿಸಿ ಧರ್ಮವನ್ನು ಸ್ಥಾಪಿಸಲು ಭಾರತದಾದ್ಯಂತ ಕಾಲ್ನಡಿಗೆಯಲ್ಲಿ ಪ್ರಯಾಣಿಸಿದರು. ಇವರು ವಿವಿಧ ಧಾರ್ಮಿಕ ಆಚರಣೆ ಒಗ್ಗೂಡಿಸಿ ಶುದ್ಧ ವೈದಿಕ ನಂಬಿಕೆಯನ್ನು ಉದ್ದೇಶಿಸುವ ಗುರಿ ಇವರದಾಗಿತ್ತು. ತಮ್ಮ ಕೃತಿಗಳಲ್ಲಿ ಇವರು ಬ್ರಹ್ಮ ಸೂತ್ರ, ಉಪನಿಷತ್ತುಗಳು, ಗೀತೆಗಳನ್ನು ವಿವರಿಸಿದರು. ಪೂಜ್ಯ ಶಂಕರಾಚಾರ್ಯರು 820 ರಲ್ಲಿ(820) 32 ನೇಯ ವಯಸ್ಸಿನಲ್ಲಿ ನಿಧನರಾಗುವ ಮೊದಲು ಆಳವಾದ ಅಧ್ಯಾತ್ಮಿಕ ಮತ್ತು ಬೌದ್ಧಿಕ ಮೈಲಿಗಲ್ಲುಗಳನ್ನು ಸಾಧಿಸಿದರು.ಅವರ ಅಲ್ಪಾವಧಿಯ ಜೀವಿತಾವಧಿಯ ಹೊರತಾಗಿಯೂ ಅವರ ಕೊಡುಗೆಗಳು ಭಾರತದ ಅಧ್ಯಾತ್ಮಿಕ ಮತ್ತು ತಾತ್ವಿಕ ಭೂದೃಶ್ಯದ ಮೇಲೆ ಶಾಶ್ವತವಾದ ಪ್ರಭಾವ ಬೀರಿದೆ.

**ಶಂಕರ ಜಯಂತಿ ಆಚರಣೆ:** ಆದಿಶಂಕರಾಚಾರ್ಯರ ಜಯಂತಿಯನ್ನು ವೈಶಾಖ ಮಾಸದ ಶುಕ್ಲಪಕ್ಷ ಪಂಚಮಿ ತಿಥಿಯಂದು ಆಚರಿಸಲಾಗುತ್ತದೆ.ದೇಶಾದ್ಯಂತ ಭಕ್ತರು ಈ ಶುಭದಿನದಂದು ಅವರ ಸ್ಮರಣೆ,ಪ್ರಾರ್ಥನೆ,ಅವರ ಬೋಧನೆ ಕುರಿತಾದ ಪ್ರವಚನಗಳು ಅಲ್ಲದೇ ಅವರು ಸ್ಥಾಪಿಸಿದ ಮಠಗಳು,ದೇವಾಲಯಗಳಿಗೆ ಭೇಟಿ ನೀಡುವ ಮೂಲಕ ಗೌರವಿಸುತ್ತಾರೆ.

ಅಂದಿನ ದಿನ ಭಕ್ತಾದಿಗಳು ಉಪವಾಸವಿದ್ದು ಶಿವ,ವಿಷ್ಣು,ಸೂರ್ಯ,ಗಣೇಶ ಮತ್ತು ದೇವಿಯನ್ನು ಪೂಜಿಸುತ್ತಾರೆ. ಶೃಂಗೇರಿ,ಕೇರಳದ ಶಾರದಾ ಪೀಠ, ಕಂಚೀಪುರದ ಕಂಚೀಕಾಮಕೋಟಿ ಪೀಠ, ಇನ್ನೂ ಮುಂತಾದ ಮಠಗಳಲ್ಲಿ ಹವನ,ಪೂಜೆ,ಸತ್ಸಂಗವನ್ನು ಏರ್ಪಡಿಸಿರುತ್ತಾರೆ. ಇದಲ್ಲದೇ ಸನಾತನ ಧರ್ಮ ಕುರಿತು ಚರ್ಚೆಗಳು,ಭಾಷಣಗಳನ್ನು ಕೂಡ ಆಯೋಜಿಸಲಾಗುತ್ತದೆ. ನಾವೂ ಜಗದ್ಗುರು ಶಂಕರಾಚಾರ್ಯರನ್ನು ಭಕ್ತಿಯಿಂದ ಪೂಜಿಸಿ , ಭಜಿಸಿ ಅವರ ಆಶೀರ್ವಾದಕ್ಕೆ ಪಾತ್ರರಾಗೋಣ.

# ಸಾವಿರ ರೂಪಾಯಿಯ ನವಿಲುಗಳು!



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಪಕ್ಷಿಗಳನ್ನು ಮಾರುವ ಸಂತೆಯಲ್ಲಿ ಒಬ್ಬಾತ ನವಿಲುಗಳನ್ನು ಮಾರುತ್ತಿದ್ದ.
ಅಲ್ಲಿ ದೊಡ್ಡ ಬಲೆಯೊಂದರಲ್ಲಿ ಸಿಲುಕಿದ ಎಷ್ಟೋ ನವಿಲುಗಳು ಇದ್ದವು......!
ಅವುಗಳೊಂದಿಗೆ ಒಂದು ನವಿಲು ಪ್ರತ್ಯೇಕವಾಗಿ ಚಿಕ್ಕದಾದ ಪಂಜರವೊಂದರಲ್ಲಿತ್ತು ...!



ಗ್ರಾಹಕನೊಬ್ಬ ಕೇಳಿದ, ನವಿಲಿನ ಬೆಲೆ ಎಷ್ಟು?
40 ರೂಪಾಯಿಗಳು ಎಂದು ನವಿಲುಗಳನ್ನು ಮಾರುತ್ತಿದ್ದ ವ್ಯಕ್ತಿ ಹೇಳಿದ.
ಆಮೇಲೆ, ಆ ಗ್ರಾಹಕ ಚಿಕ್ಕ ಪಂಜರದಲ್ಲಿ ಪ್ರತ್ಯೇಕವಾಗಿದ್ದ ನವಿಲಿನ ಬೆಲೆ ಎಷ್ಟು ಎಂದು ಕೇಳಿದ.
ನವಿಲಿನ ವ್ಯಾಪಾರಿ, ಅಸಲಿಗೆ ಅದನ್ನು ಮಾರಲು ನನಗಿಷ್ಟವಿಲ್ಲ....! ಎಂದು ಹೇಳಿದ.
ಆದರೆ, ಆ ಗ್ರಾಹಕ ತನಗೆ ಅದೇ ನವಿಲು ಬೇಕು ಎಂದು ಹಠ ಹಿಡಿದ!
ನಿಮಗೆ ಬೇಕೇ ಬೇಕೆಂದರೆ ಇದರ ಬೆಲೆ 1000 ರೂಪಾಯಿಗಳಾಗುತ್ತದೆ ಎಂದ ವ್ಯಾಪಾರಿ.
ಗ್ರಾಹಕ ಆಶ್ಚರ್ಯದಿಂದ, ಏನು ಅದರ ಬೆಲೆ ಅಷ್ಟೊಂದು ತುಟ್ಟಿಯೇ? ಎಂದು ಕೇಳಿದ.
ನಿಜ ಹೇಳಬೇಕೆಂದರೆ ಈ ನವಿಲನ್ನು ನಾನೇ ಸಾಕಿ ಬೆಳೆಸಿದ್ದು. ಇದು ಬೇರೆ ನವಿಲುಗಳನ್ನು ಬಲೆಯಲ್ಲಿ ಕೆಡವಲು ಸಹಾಯ ಮಾಡುತ್ತದೆ.....!
ಅದು ಆಟ ಆಡಿ ಕುಣಿಯುತ್ತಾ ಇತರ ನವಿಲುಗಳನ್ನು ಕರೆದಾಗ ಬೇರೆ ನವಿಲುಗಳು ಆಲೋಚನೆ ಮಾಡದೇ ಇದರ ಸುತ್ತಲೂ ಗುಂಪುಗೂಡಿ ಕುಣಿಯ ತೊಡಗುತ್ತವೆ, ಆಗ ನಾನು ಅವೆಲ್ಲವನ್ನು ಸುಲಭವಾಗಿ ಭೇಟೆಯಾಡುತ್ತೇನೆ....!
ಅಷ್ಟಾದ ಮೇಲೆ ಈ ಪಂಜರದಲ್ಲಿರುವ ನವಿಲಿಗೆ ಅದಕ್ಕೆ ಇಷ್ಟವಾದ ಆಹಾರವನ್ನು ಕೊಡುತ್ತೇನೆ. ಅದನ್ನು ತಿಂದು ಅದು ಸಂತೋಷದಿಂದಿರುತ್ತದೆ.....!
ಅದಕ್ಕೇ ಇದರ ಬೆಲೆ ಕೂಡಾ ಹೆಚ್ಚು....!
ಆ ಗ್ರಾಹಕ, ಆ ವ್ಯಾಪಾರಿಗೆ 1000 ರೂಪಾಯಿಗಳನ್ನು ಕೊಟ್ಟು ಆ ನವಿಲನ್ನು ಕೊಂಡುಕೊಂಡ. ಆಮೇಲೆ ಆ ನವಿಲಿನ ಗೋಣನ್ನು ಮುರಿದು ಅದರ ಕುತ್ತಿಗೆಯನ್ನು ತಿರುವಿ ಅದನ್ನು ಅಲ್ಲಿಯೇ ಕೊಂದು ಹಾಕಿದ.
ಹ್ಞೆ, ಹ್ಞೇ! ಹೀಗೇಕೆ ಮಾಡಿದಿರಿ? ಎಂದು ನವಿಲು ಮಾರುವವ ಕೇಳಿದ.
ಅದಕ್ಕೆ ಆ ಬುದ್ಧಿವಂತ ಗ್ರಾಹಕ,, ಇಂತಹ ದೇಶದ್ರೋಹಿಗಳಿಗೆ ಬದುಕುವ ಹಕ್ಕಿಲ್ಲ. ತನ್ನ ಸ್ವಂತ ಲಾಭಕ್ಕಾಗಿ ತನ್ನ ಸಮಾಜವನ್ನು ಕಷ್ಟದಲ್ಲಿ ಸಿಲುಕಿಸುವವನಿಗೆ, ತನ್ನ ಪ್ರಜೆಗಳಿಗೆ ಮೋಸ ಮಾಡುವವನಿಗೆ ಇದೇ ಸರಿಯಾದ ಶಿಕ್ಷೆ ಎಂದು ತನ್ನ ಕಾರ್ಯವನ್ನು ಸಮರ್ಥಿಸಿಕೊಂಡ.
ಹೀಗೆ ಒಂದು ಸಾವಿರ ರೂಪಾಯಿ ಬೆಲೆಬಾಳುವ ನವಿಲುಗಳು ನಮ್ಮ ದೇಶದಲ್ಲಿ ಬಹಳಷ್ಟಿವೆ...!

# ಬಿಸಿಲಿಗೆ ಮೊಣಕೈ, ಮೊಣಕಾಲು ಕಪ್ಪಾಗಿದ್ದರೆ ಈ ಮನೆಮದ್ದುಗಳು ಟ್ರೈ ಮಾಡಿ



ನಮ್ಮಲ್ಲಿ ಮುಖದ, ಕೂದಲಿನ ಸೌಂದರ್ಯದ ವಿಚಾರಕ್ಕೆ ಕೊಡುವಷ್ಟು ಆರೈಕೆ ಕಾಳಜಿ, ದೇಹದ ಇತರ ಅಂಗಾಂಗಗಳ ಬಗ್ಗೆ ಗಮನ ಹರಿಸುವುದು ತುಂಬಾನೇ ಕಡಿಮೆ ಎನ್ನಬಹುದು ಯಾಕೆಂದ್ರೆ, ಬೆಳಗ್ಗೆ ಎದ್ದ ಕೂಡಲೇ, ಕನ್ನಡಿ ಮುಂದೆ ನಿಂತು ಮೊದಲು ನೋಡುವುದು, ಮುಖ ಡಲ್ ಆಗಿ ಕಾಣಿಸಿಕೊಳ್ಳುತ್ತಿದೆಯಾ? ಮುಖದ ಮೇಲೆ ಮೊಡವೆಗಳು ಕಾಣಿಸಿಕೊಂಡಿದೆಯಾ ಅಥವಾ ಕೂದಲು ಬೆಳ್ಳಗೆ ಆಗಿದ್ಯಾ ಇವೆಲ್ಲಾ ಸಂಗತಿಗಳ ಬಗ್ಗೆ ಮೊದಲು ಗಮನ ಹರಿಸುತ್ತೇವೆ. ಆದರೆ ದೇಹದ ಇತರ ಅಂಗಾಂಗಗಳ ಕಡೆಗೆ ಅಷ್ಟು ಪ್ರಾಮುಖ್ಯತೆಯನ್ನು ನೀಡುವುದೇ ಇಲ್ಲ!
ಬೇಸಿಗೆಯಲ್ಲಿ ತ್ವಚೆಯ ಭಾಗ ಕಪ್ಪಾಗುವುದು ಸಾಮಾನ್ಯವಾಗಿ ಬೇಸಿಗೆಯಲ್ಲಿ ಮುಖ ಮಾತ್ರವಲ್ಲದೆ ಕೈಕಾಲುಗಳ ಚರ್ಮವೂ ಕೂಡ ಕಪ್ಪಗೆ ಆಗಿಬಿಡುತ್ತವೆ! ಹೌದು ಬೇಸಿಗೆಯಲ್ಲಿ ಈ ರೀತಿಯ ತ್ವಚೆಗೆ ಸಂಬಂಧಪಟ್ಟ ಸಮಸ್ಯೆಗಳು ಕಾಣಿಸಿಕೊಳ್ಳುವುದು ಸಹಜ! ಇದಕ್ಕೆ ಪ್ರಮುಖ ಕಾರಣ ನಮ್ಮ ದೈನಂದಿನ ತ್ವಚೆ ಆರೈಕೆ ನಿಯಮವನ್ನು ಅನು ಸರಿಸುವಾಗ ನಾವು ಹೆಚ್ಚಾಗಿ ಮೊಣಕೈ, ಮೊಣಕಾಲುಗಳನ್ನು ಕಡೆಗಣಿಸುತ್ತೇವೆ.

**ಅಡುಗೆ ಸೋಡಾ ಹಾಗೂ ಹಾಲು:** ನಿಮಗೆ ಗೊತ್ತಿರಲಿ, ಚರ್ಮದ ಕಪ್ಪು ಭಾಗವನ್ನು ಬಿಳಿ ಮಾಡುವಲ್ಲಿ ಅಡುಗೆ ಸೋಡವು ತುಂಬಾ ಪರಿಣಾಮಕಾರಿ ಆಗಿ ಕೆಲಸ ಮಾಡುವುದು! ಒಂದು ಚಮಚದಷ್ಟು ಅಡುಗೆ ಸೋಡಾವನ್ನು ಸ್ವಲ್ಪ ಹಾಲಿನೊಂದಿಗೆ ಬೆರೆಸಿ ದಪ್ಪಗೆ ಪೇಸ್ಟ್ ಮಾಡಿಕೊಂಡು, ಕಪ್ಪಗೆ ಆಗಿರುವ ಮೊಣಕಾಲು, ಮೊಣ ಕೈಗಳು, ಬೆರಳುಗಳಿಗೆ ಹಚ್ಚಿ.

**ಅಲೋವೆರಾ ಜೆಲ್:** ತ್ವಚೆಗೆ ಸಂಬಂಧಪಟ್ಟ ಸಮಸ್ಯೆಗಳನ್ನು ನಿವಾರಣೆ ಮಾಡುವಲ್ಲಿ ಅಲೋವೆರಾವು ತುಂಬಾ ಪರಿಣಾಮಕಾರಿ ಆಗಿದೆ. ಇದು ತ್ವಚೆಗೆ ಮಾಯಿಶ್ಚರೈಸ್ ಮಾಡುವುದರ ಜೊತೆಗೆ ಚರ್ಮದ ಕಾಂತಿಯನ್ನು ಹೆಚ್ಚಿಸಲು ನೆರವಿಗೆ ಬರುತ್ತದೆ. ಒಂದು ಬೌಲ್ ನಲ್ಲಿ ಎರಡು ಟೇಬಲ್ ಚಮಚದಷ್ಟು ಹಾಲು ಹಾಗೂ ಅಲೋವೆರಾ ಜೆಲ್ ಅಥವಾ ಲೋಳೆಯನ್ನು ಹಾಕಿ ಮತ್ತು ಇದನ್ನು ಸಮಪ್ರಮಾಣದಲ್ಲಿ ಮಿಶ್ರಣ ಮಾಡಿ ಚರ್ಮಕ್ಕೆ ಹಚ್ಚಿಕೊಳ್ಳಿ. ರಾತ್ರಿ ಪೂರ್ತಿ ಹಾಗೆ ಬಿಟ್ಟು ಮರುದಿನ ಬೆಳಗ್ಗೆ ಬಳಿಕ ತೊಳೆಯಿರಿ. ಇಲ್ಲಾಂದ್ರೆ ಸ್ವಲ್ಪ ಅಲೋವೆರಾದ ಜೆಲ್ ಅನ್ನು ತೆಗೆದುಕೊಂಡು ನೇರವಾಗಿ ಮೊಣಕಾಲು ಮತ್ತು ಮೊಣಕೈಗೆ ಹಚ್ಚಿಕೊಳ್ಳಬಹುದು. ಆ ಬಳಿಕ 15 ನಿಮಿಷ ಹಾಗೆ ಬಿಟ್ಟು ನಂತರ ಉಗುರುಬೆಚ್ಚಗಿನ ನೀರಿನಿಂದ ಚೆನ್ನಾಗಿ ತೊಳೆದುಕೊಳ್ಳಿ.

**ಮೊಸರು ಹಾಗೂ ವಿನೇಗರ್:** ಚರ್ಮದ ವರ್ಣದ್ರವ್ಯವನ್ನು ತೆಗೆದುಹಾಕಲು ಮತ್ತು ತ್ವಚೆಯ ಕಾಂತಿಯನ್ನು ಹೆಚ್ಚಿಸುವಲ್ಲಿ ಮೊಸರು ತುಂಬಾನೇ ನೆರವಿಗೆ ಬರುತ್ತದೆ. ಹೀಗಾಗಿ ಮೊಸರನ್ನು ವಿನೇಗರ್ ಜತೆಗೆ ಮಿಶ್ರಣ ಮಾಡಿಕೊಂಡು ದಪ್ಪಗಿನ ಪೇಸ್ಟ್ ಮಾಡಿಕೊಂಡು ಮೊಣಕಾಲು, ಕೈಗೆ ದಪ್ಪಗೆ ಹಚ್ಚಿಕೊಳ್ಳಿ. ಆಮೇಲೆ ಹಾಗೆಯೇ 10 ನಿಮಿಷಗಳವರೆಗೆ ಬಿಟ್ಟು ಬಳಿಕ ತಣ್ಣೀರಿನಿಂದ ತೊಳೆಯಿರಿ. ಇದರ ಬಳಿಕ ಬಾಡಿ ಲೋಷನ್ ಹಚ್ಚಿಕೊಳ್ಳಿ.

**ಅರಿಶಿನದ ಪೇಸ್ಟ್:** ಒಂದು ಟೇಬಲ್ ಚಮಚದಷ್ಟು ಮೊಸರಿಗೆ, ಚಿಟಿಕೆ ಯಷ್ಟು ಅರಿಶಿನ, ಸ್ವಲ್ಪ ಜೇನು ತುಪ್ಪವನ್ನು ಹಾಕಿ ಚೆನ್ನಾಗಿ ಕಲಸಿ ಪೇಸ್ಟ್ ತಯಾರಿಸಿ. ಈ ಪೇಸ್ಟ್ ಅನ್ನು ನಿಮ್ಮ ಮುಖ, ಕತ್ತನ್ನು ಆವರಿಸುವಂತೆ ಹಚ್ಚಿರಿ, ಆಮೇಲೆ ಹತ್ತು ನಿಮಿಷಗಳವರೆಗೆ ಹಾಗೆಯೇ ಬಿಟ್ಟು ನಂತರ ತಣ್ಣಗೆಯ ನೀರಿನಿಂದ ತೊಳೆಯಿರಿ. ಇಲ್ಲಾಂದ್ರೆ, ಅರಿಶಿನದ ಪೇಸ್ಟನ್ನು ಮೊಣಕೈ ಮತ್ತು ಮೊಣಕಾಲಿಗೆ ದಪ್ಪಗೆ ಹಚ್ಚಿ, ಹತ್ತು ನಿಮಿಷಗಳ ನಂತರ ತಣ್ಣೀರಿನಿಂದ ತೊಳೆಯಿರಿ.

# ಖಾಲಿ ಹೊಟ್ಟೆಗೆ ಈ ನೈಸರ್ಗಿಕ ಜ್ಯೂಸ್ ಕುಡಿಯುತ್ತಾ ಬಂದರೆ ಕೆಟ್ಟ ಕೊಲೆಸ್ಟ್ರಾಲ್ ತನ್ನಿಂತಾನೆ ಕಮ್ಮಿ ಆಗುತ್ತೆ!



ನಮ್ಮ ದೈನಂದಿನ ಆಹಾರಪದ್ಧತಿ ಹಾಗೂ ಪ್ರತಿದಿನ ನಾವು ಅನುಸರಿಸುತ್ತಿರುವ ಜೀವನಶೈಲಿ ಸರಿಯಾಗಿದ್ದರೆ ನಾವು ಕೂಡ ಆರೋಗ್ಯದಿಂದ ಇರುತ್ತೇವೆ. ಇಲ್ಲಿ ಪ್ರಮುಖವಾಗಿ ನೆನಪಿಡಬೇಕಾದ ಸಂಗತಿ ಏನೆಂದ್ರೆ ಜಿಡ್ಡಿನ ಆಹಾರ ಪದಾರ್ಥಗಳಿಂದ ದೂರ ಇರಬೇಕು.

ಬದಲಿಗೆ ನಮ್ಮ ಆಹಾರ ಪದ್ಧತಿಯಲ್ಲಿ ಅಧಿಕ ನಾರಿನಾಂಶ ವಿವಿಧ ಬಗೆಯ ವಿಟಮಿನ್ಸ್, ಖನಿಜಾಂಶಗಳು ಹೆಚ್ಚಾಗಿರುವ ಹಾಗೆ ನೋಡಿಕೊಳ್ಳಬೇಕು, ಅನಾರೋಗ್ಯ ಆಹಾರಗಳಾದ ಜಂಕ್ ಫುಡ್, ತಂಪು ಪಾನೀಯ, ಸಂಸ್ಕರಿಸಿದ ಆಹಾರಪದಾರ್ಥಗಳು, ಎಣ್ಣೆಯಲ್ಲಿ ಕರಿದಿರುವ ಆಹಾರ ಪದಾರ್ಥಗಳಿಂದ ದೂರವಿದ್ದರೆ ರಕ್ತದಲ್ಲಿ ಒಳ್ಳೆಯ ಕೊಲೆಸ್ಟ್ರಾಲ್ ಹೆಚ್ಚಾಗುತ್ತದೆ ಮತ್ತು ಕೆಟ್ಟ ಕೊಲೆಸ್ಟ್ರಾಲ್ ನಿಯಂತ್ರಣವಾಗುತ್ತದೆ.

**ಅಗಸೆಬೀಜದೊಂದಿಗೆ ಬೆಚ್ಚಗಿನ ನಿಂಬೆ ಪಾನೀಯ**
ನಿಂಬೆಹಣ್ಣು ವಿಟಮಿನ್ ಸಿ, ಆ್ಯಂಟಿ ಆಕ್ಸಿಡೆಂಟ್ ನಿಂದ ಸಮೃದ್ಧವಾಗಿದ್ದು ಅದು ರಕ್ತ ಪರಿಚಲನೆ ಕಾರ್ಯವನ್ನು ಸುಧಾರಿಸುತ್ತದೆ, ಉರಿಯೂತವನ್ನು ಕಡಿಮೆ ಮಾಡುತ್ತದೆ. ಇನ್ನು ಅಗಸೆ ಬೀಜಗಳು ಒಮೆಗಾ-3 ಕೊಬ್ಬಿನಾಮ್ಲಗಳು, ಕರಗುವ ನಾರನ್ನು ಹೊಂದಿರುತ್ತವೆ. ಇದು ಹೆಚ್ಚಿನ ಮಟ್ಟದ ಲಿಗ್ನಾನ್‌ಗಳನ್ನು ಹೊಂದಿರುತ್ತದೆ, ಇದು ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡಲು ಪ್ರಯೋಜನಕಾರಿ ಎಂದು ಪರಿಗಣಿಸಲಾಗಿದೆ. ದಿನಗಳಲ್ಲಿ ಅಗಸೆಬೀಜ, ಎಣ್ಣೆಗಳು, ಪುಡಿ, ಮಾತ್ರೆಗಳು, ಕ್ಯಾಪ್ಸುಲ್ಗಳು ಮತ್ತು ಹಿಟ್ಟಿನ ರೂಪದಲ್ಲಿ ಲಭ್ಯವಿದೆ.

**ಕ್ಯಾರೆಟ್ ಜ್ಯೂಸ್:** ಕ್ಯಾರೆಟ್ ಜ್ಯೂಸ್ ಕೂಡ ಪೌಷ್ಟಿಕಾಂಶಗಳನ್ನು ಕೊಡುವ ನೈಸರ್ಗಿಕ ಪದಾರ್ಥವಾಗಿದ್ದು, ತನ್ನಲ್ಲಿ ಬೀಟಾ ಕ್ಯಾರೋಟಿನ್ ಹೆಚ್ಚಾಗಿ ಒಳ ಗೊಂಡಿದೆ. ಇದು ಕೊಲೆಸ್ಟ್ರಾಲ್ ಅನ್ನು ನಿಯಂತ್ರಣ ಮಾಡುವ ಜೊತೆಗೆ ಹೃದಯದ ಆರೋಗ್ಯವನ್ನು ಕಾಪಾಡುತ್ತದೆ. ಮುಖ್ಯವಾಗಿ ಕ್ಯಾರೆಟ್‌ನಲ್ಲಿ ನಾರು, ಪೊಟ್ಯಾಶಿಯಂ, ಆಂಟಿ ಆಕ್ಸಿಡೆಂಟ್ಗಳ ಜೊತೆಗೆ ವಿಟಮಿನ್ ಕೆ1 ಕೂಡ ಹೆಚ್ಚಾಗಿ ಸಿಗುತ್ತದೆ.

**ಮೆಂತೆ ಬೀಜಗಳು ನೆನೆಸಿಟ್ಟ ನೀರು:** ಮೆಂತೆಬೀಜಗಳು ದೇಹದಲ್ಲಿ ಕೆಟ್ಟ ಕೊಲೆಸ್ಟ್ರಾಲ್ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುವ ಅನೇಕ ಅಂಶಗಳನ್ನು ಒಳಗೊಂಡಿರುತ್ತವೆ. ಪ್ರಮುಖವಾಗಿ ಈ ಪುಟ್ಟ ಬೀಜಗಳಲ್ಲಿ ಅಧಿಕ ಪ್ರಮಾಣದ ನಾರಿನಾಂಶ ಕಂಡುಬರುವುದರಿಂದ ಕರುಳಿನಲ್ಲಿನ ಕೊಲೆಸ್ಟ್ರಾಲ್ ಅನ್ನು ಹೀರಿಕೊಳ್ಳುವುದನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ, ಇದರಿಂದಾಗಿ ದೇಹದಲ್ಲಿ ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡುತ್ತದೆ. ರಾತ್ರಿ ಮಲಗುವ ಮುನ್ನ ಸ್ವಲ್ಪ ಮೆಂತೆ ಬೀಜಗಳನ್ನು ರಾತ್ರಿ ನೀರಿನಲ್ಲಿ ನೆನೆಸಿ, ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಕುಡಿಯಿರಿ.

**ಬೀಟ್‌ರೂಟ್-ಕ್ಯಾರೆಟ್ ಜ್ಯೂಸ್:** ಬೀಟ್‌ರೂಟ್‌ನಲ್ಲಿ ನೈಟ್ರೇಟ್ ಇದ್ದು, ಇದು ರಕ್ತದೊಂದಿಗೆ ಪ್ರತಿಕ್ರಿಯಿಸಿ ನೈಟ್ರಿಕ್ ಆಕ್ಸೈಡ್ ಆಗಿ ಬದಲಾಗುತ್ತದೆ. ಹೀಗಾಗಿ ಅಧಿಕ ಕೊಲೆಸ್ಟ್ರಾಲ್ ನಿಂದ ಬಳಲುತ್ತಿರುವವರು, ಬೀಟ್‌ರೂಟ್, ಕ್ಯಾರೆಟ್ ಜ್ಯೂಸ್ ರೀತಿ ಮಾಡಿ ಕುಡಿಯುವುದರಿಂದ ತ್ವರಿತ ಪರಿಹಾರ ಕಾಣಬಹುದಾಗಿದೆ. ಅಷ್ಟು ಮಾತ್ರವಲ್ಲದೆ, ಈ ಜ್ಯೂಸ್ ರಕ್ತನಾಳಗಳಲ್ಲಿನ ಹೆಪ್ಪು ಗಟ್ಟುವಿಕೆಯನ್ನು ಗುಣಪಡಿಸುತ್ತದೆ, ರಕ್ತ ಪರಿಚಲನೆ ಸುಧಾರಿಸುತ್ತದೆ. ಅಲ್ಲದೆ, ಅಧಿಕ ರಕ್ತದೊತ್ತಡದ ಸಮಸ್ಯೆಯೂ ನಿಯಂತ್ರಣದಲ್ಲಿಡುತ್ತದೆ. ಇನ್ನು ಕ್ಯಾರೆಟ್‌ನಲ್ಲಿ ಬೀಟಾ-ಕ್ಯಾರೋಟಿನ್ ಮತ್ತು ಫೈಬರ್ ಸಮೃದ್ಧವಾಗಿದ್ದು, ಇದು ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

**ಕೊತ್ತಂಬರಿ ಬೀಜದ ನೀರು:** ರಾತ್ರಿ ಮಲಗುವ ಮುನ್ನ ಸ್ವಲ್ಪ ಕೊತ್ತಂಬರಿ ಬೀಜಗಳನ್ನು ನೆನೆಸಿಟ್ಟು, ಮರುದಿನ ಬೆಳಿಗ್ಗೆ, ಇದರ ನೀರನ್ನು ಮಾತ್ರ ಬಳಸುವುದರಿಂದ, ಕೊಲೆಸ್ಟ್ರಾಲ್ ಕಾಯಿಲೆಯನ್ನು ನಿಯಂತ್ರಣದಲ್ಲಿ ಡಬಹುದು ಇದಕ್ಕೆ ಪ್ರಮುಖ ಕಾರಣ ಈ ಪುಟ್ಟ ಬೀಜಗಳಲ್ಲಿ ಕಂಡುಬರುವ ಆಂಟಿ ಆಕ್ಸಿಡೆಂಟ್ ಅಂಶಗಳು, ಲಿಪಿಡ್ ಚಯಾಪಚಯ ಕ್ರಿಯೆಗೆ ಸಹಾಯ ಮಾಡುತ್ತದೆ. ಅವು ಕೊಲೆಸ್ಟ್ರಾಲ್, ಟ್ರೈಗ್ಲಿಸರೈಡ್ ಮಟ್ಟವನ್ನು ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

# ಬೇಸಿಗೆಯಲ್ಲಿ ಎಣ್ಣೆಯುಕ್ತ ಚರ್ಮಕ್ಕೆ ಏನು ಹಚ್ಚಬೇಕು?

ಬೇಸಿಗೆ ಆರಂಭವಾದ ತಕ್ಷಣ, ಅನೇಕ ರೀತಿಯ ಚರ್ಮದ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಎಣ್ಣೆಯುಕ್ತ ಚರ್ಮವು ಇವುಗಳಲ್ಲಿ ಸಾಮಾನ್ಯ ಸಮಸ್ಯೆಯಾಗಿದ್ದು, ಇದರಿಂದಾಗಿ ಅನೇಕ ಜನರು ತೊಂದರೆಗೊಳಗಾಗುತ್ತಾರೆ.ಮುಖದಲ್ಲಿ ಜಿಡ್ಡಿನಂಶವಿರುವುದು ಕಿರಿಕಿರಿಯುಂಟುಮಾಡುತ್ತದೆ. ಎಣ್ಣೆಯುಕ್ತ ಚರ್ಮಕ್ಕೆ ಏನು ಹಚ್ಚಬೇಕು?, ಚರ್ಮಕ್ಕೆ ಹೊಳಪು ನೀಡಲು ಏನು ಮಾಡಬೇಕು ಎಂಬುದನ್ನು ಇಲ್ಲಿ ತಿಳಿಯೋಣ. ಬೇಸಿಗೆಯಲ್ಲಿ ಅತಿಯಾದ ಬೆವರು ಮತ್ತು ಅತಿಯಾದ ಮೇದೋಗ್ರಂಥಿಗಳ ಸ್ರಾವ ಉತ್ಪಾದನೆಯಿಂದಾಗಿ, ಚರ್ಮವು ತುಂಬಾ ಜಿಗುಟು ಮತ್ತು ಎಣ್ಣೆಯುಕ್ತವಾಗುತ್ತದೆ. ಅಲ್ಲದೆ, ಮುಚ್ಚಿಹೋಗಿರುವ ರಂಧ್ರಗಳಿಂದಾಗಿ, ಮೊಡವೆಗಳು ಮತ್ತು ಕಪ್ಪು ಚುಕ್ಕೆಗಳಂತಹ ಅನೇಕ ಚರ್ಮ ಸಂಬಂಧಿತ ಸಮಸ್ಯೆಗಳು ಹೆಚ್ಚಾಗುತ್ತವೆ. ಬೇಸಿಗೆಯಲ್ಲಿ ಎಣ್ಣೆಯುಕ್ತ ಚರ್ಮದಿಂದಾಗಿ ಮುಖದ ಹೊಳಪು ಕೂಡ ಕಡಿಮೆಯಾಗುತ್ತದೆ.

ಅಂತಹ ಪರಿಸ್ಥಿತಿಯಲ್ಲಿ, ಬೇಸಿಗೆಯಲ್ಲಿ ಎಣ್ಣೆಯುಕ್ತ ಚರ್ಮದ ಬಗ್ಗೆ ವಿಶೇಷ ಕಾಳಜಿ ವಹಿಸುವುದು ಬಹಳ ಮುಖ್ಯವಾಗುತ್ತದೆ. ಬೇಸಿಗೆಯಲ್ಲಿ ಎಣ್ಣೆಯುಕ್ತ ಚರ್ಮವನ್ನು ತೊಡೆದುಹಾಕಲು, ನೀವು ಕೆಲವು ಮನೆಮದ್ದುಗಳನ್ನು ಪ್ರಯತ್ನಿಸಬಹುದು. ಇದಕ್ಕಾಗಿ ನೀವು ನಿಮ್ಮ ಮುಖಕ್ಕೆ ಮನೆಯಲ್ಲಿಯೇ ಲಭ್ಯವಿರುವ ಕೆಲವು ವಸ್ತುಗಳನ್ನು ಹಚ್ಚಿಕೊಳ್ಳಬಹುದು. ಇದು ಮುಖದಿಂದ ಹೆಚ್ಚುವರಿ ಎಣ್ಣೆಯನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ಹಾಗಾದರೆ ಬೇಸಿಗೆಯಲ್ಲಿ ಎಣ್ಣೆಯುಕ್ತ ಚರ್ಮಕ್ಕೆ ಏನು ಹಚ್ಚಬೇಕು ಎಂದು ತಿಳಿದುಕೊಳ್ಳೋಣ...

**ಗುಲಾಬಿ ನೀರು:** ನಿಮ್ಮ ಚರ್ಮ ಎಣ್ಣೆಯುಕ್ತವಾಗಿದ್ದರೆ, ಬೇಸಿಗೆಯಲ್ಲಿ ನಿಮ್ಮ ಮುಖಕ್ಕೆ ರೋಸ್ ವಾಟರ್ ಹಚ್ಚಬಹುದು. ಇದು ಚರ್ಮದ ಮಟ್ಟವನ್ನು ಸಮತೋಲನಗೊಳಿಸುತ್ತದೆ, ತೆರೆದ ರಂಧ್ರಗಳನ್ನು ಬಿಗಿಗೊಳಿಸಲು ಸಹಾಯ ಮಾಡುತ್ತದೆ. ಹೆಚ್ಚುವರಿಯಾಗಿ, ಇದು ಚರ್ಮವನ್ನು ಹೈಡ್ರೀಕರಿಸುತ್ತದೆ, ಚರ್ಮದ ಜಿಗುಟುತನವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಬೇಸಿಗೆಯಲ್ಲಿ ನೀವು ರೋಸ್ ವಾಟರ್ ಅನ್ನು ಟೋನರ್ ಆಗಿಯೂ ಹಚ್ಚಬಹುದು.?



**ಕಡಲೆ ಹಿಟ್ಟು:** ಬೇಸಿಗೆಯಲ್ಲಿ ಎಣ್ಣೆಯುಕ್ತ ಚರ್ಮಕ್ಕೆ ಕಡಲೆ ಹಿಟ್ಟು ತುಂಬಾ ಪ್ರಯೋಜನ ಕಾರಿ. ವಾಸ್ತವವಾಗಿ, ಇದು ಚರ್ಮದ ಮೇಲೆ ಸಂಗ್ರಹವಾದ ಕೊಳಕು ಮತ್ತು ಹೆಚ್ಚುವರಿ ಎಣ್ಣೆಯನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ಅಲ್ಲದೆ, ಇದು ಚರ್ಮದ ಜಿಗುಟುತನವನ್ನು ಕಡಿಮೆ ಮಾಡುತ್ತದೆ. ಇದಕ್ಕಾಗಿ ಕಡಲೆ ಹಿಟ್ಟಿನಲ್ಲಿ ಅರಿಶಿನ ಮತ್ತು ರೋಸ್ ವಾಟರ್ ಬೆರೆಸಿ ಮುಖಕ್ಕೆ ಹಚ್ಚಿ. ಸುಮಾರು 15 ನಿಮಿಷಗಳ ನಂತರ, ಮುಖವನ್ನು ನೀರಿನಿಂದ ತೊಳೆಯಿರಿ. ಇದು ನಿಮ್ಮ ಚರ್ಮವನ್ನು ತಾಜಾ ಮತ್ತು ಹೊಳೆಯುವಂತೆ ಮಾಡುತ್ತದೆ.

**ಅಲೋವೆರಾ:** ಬೇಸಿಗೆಯಲ್ಲಿ ಎಣ್ಣೆಯುಕ್ತ ಚರ್ಮ ಹೊಂದಿರುವವರು ಅಲೋವೆರಾವನ್ನು ಮುಖಕ್ಕೆ ಹಚ್ಚಿಕೊಳ್ಳಬಹುದು. ಇದು ಬ್ಯಾಕ್ಟೀರಿಯಾ ವಿರೋಧಿ ಮತ್ತು ಉರಿಯೂತದ ಗುಣಗಳನ್ನು ಹೊಂದಿದ್ದು, ಇದು ಮೊಡವೆಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ಅಲ್ಲದೆ ಚರ್ಮವನ್ನು ತೇವ ಗೊಳಿಸುತ್ತದೆ ಮತ್ತು ಹೆಚ್ಚುವರಿ ಎಣ್ಣೆಯನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಮುಖಕ್ಕೆ ನಿಯಮಿತವಾಗಿ ಅಲೋವೆರಾ ಜೆಲ್ ಹಚ್ಚುವುದರಿಂದ ಚರ್ಮವು ಮೃದು ಮತ್ತು ಹೊಳಪು ಪಡೆದುಕೊಳ್ಳುತ್ತದೆ.



**ಮುಲ್ತಾನಿ ಮಣ್ಣು:** ನೀವು ಎಣ್ಣೆಯುಕ್ತ ಚರ್ಮ ಹೊಂದಿದ್ದರೆ, ಮುಲ್ತಾನಿ ಮಿಟ್ಟಿಯನ್ನು ಮುಖಕ್ಕೆ ಹಚ್ಚಿಕೊಳ್ಳಬಹುದು. ಇದು ಚರ್ಮದಿಂದ ಹೆಚ್ಚುವರಿ ಎಣ್ಣೆ, ಕೊಳೆಯನ್ನು ಹೀರಿಕೊಳ್ಳಲು ಸಹಾಯ ಮಾಡುತ್ತದೆ. ಇದು ಮೊಡವೆಗಳು, ಕಪ್ಪು ಚುಕ್ಕೆಗಳು, ಟ್ಯಾನಿಂಗ್ ಅನ್ನು ತೊಡೆದುಹಾಕಲು ಸಹಾಯ ಮಾಡುತ್ತದೆ. ಬೇಸಿಗೆಯಲ್ಲಿ ಮುಲ್ತಾನಿ ಮಿಟ್ಟಿ ಹಚ್ಚುವುದರಿಂದ ಚರ್ಮಕ್ಕೆ ತಂಪು ಮತ್ತು ತೇವಾಂಶ ದೊರೆಯುತ್ತದೆ. ಇದಕ್ಕಾಗಿ 2 ಚಮಚ ಮುಲ್ತಾನಿ ಮಿಟ್ಟಿಯನ್ನು ತೆಗೆದುಕೊಳ್ಳಿ. ಅದಕ್ಕೆ 2 ಚಮಚ ರೋಸ್ ವಾಟರ್ ಬೆರೆಸಿ ಮುಖಕ್ಕೆ ಹಚ್ಚಿ. ಈ ಪೇಸ್ಟ್ ಒಣಗಿದ ನಂತರ, ಮುಖವನ್ನು ನೀರಿನಿಂದ ತೊಳೆಯಿರಿ.



**ಮಾಯಿಶ್ಚರೈಸರ್:** ಬೇಸಿಗೆಯಲ್ಲಿ ಹೆಚ್ಚು ಮಾಯಿಶ್ಚರೈಸರ್ಗಳನ್ನು ಹಚ್ಚುವುದರಿಂದ ಚರ್ಮವು ಎಣ್ಣೆಯುಕ್ತ ಮತ್ತು ಜಿಗುಟಾಗಿ ಕಾಣುವಂತೆ ಮಾಡುತ್ತದೆ. ನಿಮ್ಮ ಚರ್ಮವು ಎಣ್ಣೆಯುಕ್ತವಾಗಿದ್ದರೆ, ನೀವು ಜೆಲ್ ಆಧಾರಿತ ಅಥವಾ ಎಣ್ಣೆ ಮುಕ್ತ ಮಾಯಿಶ್ಚರೈಸರ್ ಅನ್ನು ಬಳಸಬಹುದು. ಇದು ಚರ್ಮವನ್ನು ತೇವಾಂಶದಿಂದ ಇಡುತ್ತದೆ ಮತ್ತು ಚರ್ಮವು ಜಿಗುಟಾಗಿ ಕಾಣುವುದಿಲ್ಲ.

# ತಡಕಲ್‌ನಲ್ಲಿ 11 ಅಡಿ ಅಶ್ವಾರೂಢ ಬಸವೇಶ್ವರ ಪ್ರತಿಮೆ ಲೋಕಾರ್ಪಣೆ

• ಉದಯವಾಹಿನಿ ಆಳಂದ

ತಾಲ್ಲೂಕಿನ ತಡಕಲ್ ಗ್ರಾಮದಲ್ಲಿ ಬಸವ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾಮದ ರಾಜ್ಯ ಹೆದ್ದಾರಿಯ ಚೌಕದಲ್ಲಿ 11 ಅಡಿ ಎತ್ತರದ ಅಶ್ವಾರೂಢ ಬಸವೇಶ್ವರ ಶಿಲಾ ಪ್ರತಿಮೆಯನ್ನು ಮಾದನಹಿಪ್ಪರಗ ಶಿವಲಿಂಗೇಶ್ವರ ವಿರಕ್ತಮಠದ ಶ್ರೀ ಅಭಿನವ ಶಿವಲಿಂಗ ಮಹಾಸ್ವಾಮಿಗಳು ಪ್ರತಿಮೆಯ ದಾನಿಗಳಾದ ಮಾಜಿ ಶಾಸಕ ಸುಭಾಷ್ ಗುತ್ತೇದಾರ್ ಮತ್ತು ಗ್ರಾಮದಲ್ಲಿನ ಮಠದ ಶ್ರೀ ಸಿದ್ಧಮಲ್ಲ ಶಿವಾಚಾರ್ಯರು ಸೇರಿ ಲೋಕಾರ್ಪಣೆಗೊಳಿಸಿದರು.

ಲೋಕಾರ್ಪಣೆಯ ನಂತರ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಶ್ರೀ ಶಿವಲಿಂಗ ಮಹಾಸ್ವಾಮಿಗಳು, ''ಬಸವಣ್ಣನವರು ಸಮಾಜದ ಎಲ್ಲಾ ಜಾತಿಯ ಶರಣರನ್ನು ಮತ್ತು ಬಾಂಧವರನ್ನು ಮುಖ್ಯವಾಹಿನಿಗೆ ತಂದವರು. ಅಂಬಿಗರ ಚೌಡಯ್ಯ, ಮಾದರ


ಉದಯವಾಹಿನಿ ಚಿತ್ರ

ಚೆನ್ನಯ್ಯ, ಗಾಣದ ಕಣ್ಣಪ್ಪ, ಸಕಲೇಶ ಮಾದರಸ, ಹಡಪದ ಅಪ್ಪಣ್ಣ, ಡೋಹರ ಕಕ್ಕಯ್ಯ, ಆಯ್ದಕ್ಕಿ ಲಕ್ಕಮ್ಮ, ಉರಿಲಿಂಗ ಪೆದ್ದಿ ಮುಂತಾದ ಶರಣರಿಗೆ ವೇದಿಕೆ ಕಲ್ಪಿಸಿದವರು ಬಸವಣ್ಣನವರೇ. ಶಿವಾಜಿ ಮಹಾರಾಜ, ಶ್ರೀರಾಮಚಂದ್ರ ಮತ್ತು ಇತರ ಮಹಾತ್ಮರು ನಮಗೆ ಆದರ್ಶವಾದರೂ, ವಿಶ್ವಗುರು ಬಸವಣ್ಣನವರಿಗೆ ಪ್ರಥಮ ಆದ್ಯತೆ ನೀಡಬೇಕು. ಅವರು ವೀರಶೈವ-ಲಿಂಗಾಯತ ಸಮಾಜಕ್ಕೆ ಸಂಸ್ಕಾರ, ಧರ್ಮ ಮತ್ತು ಸಂಸ್ಕೃತಿಯ ತಳಪಾಯವನ್ನು ಹಾಕಿದವರು,'' ಎಂದು ಹೇಳಿದರು.

**ಬಸವಣ್ಣನವರಿಗೆ ಪ್ರಥಮ ಆದ್ಯತೆ**

12ನೇ ಶತಮಾನದಲ್ಲಿ ಬಸವಣ್ಣನವರು ಕಾಯಕ, ದಾಸೋಹ ಮತ್ತು ಸಮಾನತೆಯ ತತ್ವಗಳನ್ನು ಬೋಧಿಸಿದರು. ಸಂವಿಧಾನಕ್ಕೂ ಮುನ್ನವೇ ಸರ್ವರೂ ಸಮಾನರು ಎಂಬ ದಿವ್ಯ ಸಂದೇಶವನ್ನು ನೀಡಿದವರು ಬಸವಣ್ಣ. ಇತ್ತೀಚೆಗೆ ರಾಜ್ಯ ಸರ್ಕಾರ ಬಿಡುಗಡೆ ಮಾಡಿದ ಜಾತಿ ಜನಗಣತಿಯಲ್ಲಿ ವೀರಶೈವ-ಲಿಂಗಾಯತ ಸಮುದಾಯದ ವೈವಿಧ್ಯತೆ ಗೋಚರಿಸುತ್ತದೆ. ಗಾಣಿಗ, ಪಂಚಮಿ, ಜಂಗಮ, ಕುರುಬ, ನೇಕಾರ ಮುಂತಾದವರನ್ನು ಒಂದುಗೂಡಿಸಿದ ಬಸವಣ್ಣನವರ ಆದರ್ಶಗಳನ್ನು ಎಂದಿಗೂ ಮರೆಯಬಾರದು,'' ಎಂದರು. ಮಾಜಿ ಶಾಸಕ ಸುಭಾಷ್ ಗುತ್ತೇದಾರ್ ಮಾತನಾಡಿ, ''ಬಸವಕಲ್ಯಾಣದಲ್ಲಿ ರಾಜನ ಕೈಯಲ್ಲಿ ಮಂತ್ರಿಯಾಗಿದ್ದ ಬಸವಣ್ಣನವರು, ಸಮಾಜ ಸುಧಾರಣೆಗಾಗಿ ಅಲ್ಲಮ ಪ್ರಭುವನ್ನು ಶೂನ್ಯ ಪೀಠದ ಅಧ್ಯಕ್ಷರನ್ನಾಗಿ ನೇಮಿಸಿದರು.

ಅವರ ವಚನಗಳು ಕರ್ನಾಟಕ, ಮಹಾರಾಷ್ಟ್ರ, ಭಾರತ ಮಾತ್ರವಲ್ಲದೆ, ಇಂಗ್ಲೆಂಡ್ ಸೇರಿದಂತೆ ವಿಶ್ವದಾದ್ಯಂತ ಜಾತ್ಯತೀತ ಸಮಾಜದ ಸಂದೇಶವನ್ನು ಸಾರಿವೆ. ಬಸವಣ್ಣನವರ ಮಹಾನ್ ಕಾರ್ಯವು ಸಮಾಜ ಸುಧಾರಣೆಗೆ ಮಾದರಿಯಾಗಿದೆ,'' ಎಂದು ತಿಳಿಸಿದರು.

# ಗ್ರಾಮೀಣ ಪ್ರದೇಶಗಳಲ್ಲಿ ಮಾದರಿ ರಸ್ತೆ: ಶಾಸಕ ಸಿಮೆಂಟ್ ಮಂಜು


ಉದಯವಾಹಿನಿ ಚಿತ್ರ

• ಉದಯವಾಹಿನಿ ಆಲೂರು

ಗ್ರಾಮೀಣ ಭಾಗಗಳಲ್ಲಿ ಮೂಲ ಸೌಕರ್ಯ ಒದಗಿಸುವ ಉದ್ದೇಶದಿಂದ ರಸ್ತೆಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗುತ್ತಿದೆ ಎಂದು ಶಾಸಕ ಸಿಮೆಂಟ್ ಮಂಜು ತಿಳಿಸಿದರು. ಕಸಬಾ ಬೈರಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಬೈರಾಪುರ-ಮಗ್ಗೆ ಮುಖ್ಯ ರಸ್ತೆಯಿಂದ ಮಂಚೇನಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗೆ ಡಾಂಬರೀಕರಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ತಾಲ್ಲೂಕಿನಲ್ಲಿ ಉತ್ತಮವಾಗಿ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದ್ದು, ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳನ್ನು ಮಾದರಿಯಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ. ರಸ್ತೆಗಳ ಅಭಿವೃದ್ಧಿ ಜೊತೆಗೆ, ಕುಡಿಯುವ ನೀರು, ಚರಂಡಿ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ಶೈಕ್ಷಣಿಕ ಪ್ರಗತಿಗೆ ಅಗತ್ಯವಿರುವ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಶೈಕ್ಷಣಿಕ ವಾತಾವರಣ ನಿರ್ಮಾಣಕ್ಕೆ ಒತ್ತು ನೀಡಲಾಗುತ್ತಿದೆ' ಎಂದರು.

### ವಿಶಿಷ್ಟ ಆರೋಗ್ಯ ಗುರುತಿನ (ಯುಎಚ್‌ಐಡಿ) ಸಂಖ್ಯೆಯನ್ನು ಆನ್‌ಲೈನ್ ತಂತ್ರಾಂಶದಲ್ಲಿ ನಮೂದಿಸಲು ಸರ್ವರ್ ಸಮಸ್ಯೆ

# ಮೆಗ್ಗಾನ್ ಆಸ್ಪತ್ರೆ, ದಿನಗಟ್ಟಲೆ ಕಾದರೂ ಸಿಗದ ಔಷಧಿ: ರೋಗಿಗಳ ಪರದಾಟ

• ಉದಯವಾಹಿನಿ ಶಿವಮೊಗ್ಗ

ವೈದ್ಯರು ರೋಗಿಗಳ ತಪಾಸಣೆ ಮಾಡಿದ ಬಳಿಕ ಕೇಸ್ ಶೀಟ್‌ನಲ್ಲಿನ ವಿಶಿಷ್ಟ ಆರೋಗ್ಯ ಗುರುತಿನ (ಯುಎಚ್‌ಐಡಿ) ಸಂಖ್ಯೆಯನ್ನು ಆನ್‌ಲೈನ್ ತಂತ್ರಾಂಶದಲ್ಲಿ ನಮೂದಿಸಲು ಸರ್ವರ್ ಸಮಸ್ಯೆಯಿಂದ ಸಾಧ್ಯವಾಗುತ್ತಿಲ್ಲ. ಹೀಗಾಗಿ ಇಲ್ಲಿನ ಮೆಗ್ಗಾನ್ ಆಸ್ಪತ್ರೆಯಲ್ಲಿ ದಿನವೆಲ್ಲ ಸರತಿ ಸಾಲಿನಲ್ಲಿ ಕಾದು ನಿಂತರೂ ರೋಗಿಗಳಿಗೆ ಔಷಧಿ ಪಡೆಯಲು ಸಾಧ್ಯವಾಗುತ್ತಿಲ್ಲ.

ಸರ್ಕಾರದ ಹೊಸ ಆದೇಶದನ್ವಯ ಜಿಲ್ಲಾ ಆಸ್ಪತ್ರೆಗಳಲ್ಲಿ ರೋಗಿಗಳನ್ನು ತಪಾಸಣೆ ಮಾಡಿದ ವೈದ್ಯರೇ ಕಾಯಿಲೆಗೆ ಸಂಬಂಧಿಸಿದ ಔಷಧಿಯನ್ನು ಕೇಸ್ ಶೀಟ್‌ನಲ್ಲಿ ಬರೆಯುವ ಜೊತೆಗೆ ಕಂಪ್ಯೂಟರ್‌ನಲ್ಲೂ ದಾಖಲಿಸಬೇಕಿದೆ. ಔಷಧಿ ರಸೀದಿಯ ಯುಎಚ್ ಐಡಿ ಸಂಖ್ಯೆ ಆನ್‌ಲೈನ್‌ನಲ್ಲಿ ನವೀಕೃತಗೊಂಡರೆ ಮಾತ್ರ ಔಷಧಿ ಕೇಂದ್ರದಿಂದ ರೋಗಿಗಳು ಔಷಧಿ ಪಡೆಯಲು ಸಾಧ್ಯ. ಔಷಧಿ ವಿತರಿಸುವ ಸಿಬ್ಬಂದಿ ಯುಎಚ್ ಐಡಿ ಆಧಾರದ ಮೇಲೆ ರೋಗಿಗಳಿಗೆ ಔಷಧಿ ವಿತರಣೆ ಮಾಡುತ್ತಾರೆ.

ಈ ಸಂಖ್ಯೆ ತಂತ್ರಾಂಶದಲ್ಲಿ ದಾಖಲಾಗದಿದ್ದರೆ ಔಷಧಿ ಕೇಂದ್ರದ ಬಳಿ ಸಾರ್ವಜನಿಕರು ಗಂಟೆಗಟ್ಟಲೆ ಕಾದರೂ ಔಷಧಿ ಪಡೆಯಲು ಸಾಧ್ಯವಿಲ್ಲ. ಶಿವಮೊಗ್ಗ

> **ರೋಗಿಗಳಿಗೆ ಔಷಧಿ ವಿತರಿಸುವ ನಿಯಮ ಬದಲಾವಣೆಯಿಂದ ಸಮಸ್ಯೆ ಎದುರಾಗಿದೆ, ಇದನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದು**
> **-ಡಾ.ಟಿ.ಡಿ.ತಿಮ್ಮಪ್ಪ, ಅಧೀಕ್ಷಕ ಮೆಗ್ಗಾನ್ ಆಸ್ಪತ್ರೆ**

ಸೇರಿದಂತೆ ಹೊರ ಜಿಲ್ಲೆಯಿಂದಲೂ ಮೆಗ್ಗಾನ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ನಿತ್ಯ ಸಾವಿರಾರು ರೋಗಿಗಳು ಚಿಕಿತ್ಸೆಗೆ ಬರುತ್ತಾರೆ. ಪ್ರತಿ ನಿತ್ಯ 2000ಕ್ಕೂ ಹೆಚ್ಚು ಒಳ ಹಾಗೂ ಹೊರ ರೋಗಿಗಳು ಇಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆದರೆ, ಯುಎಚ್‌ಐಡಿ ಸಂಖ್ಯೆ ಸರಿಯಾಗಿ ದಾಖಲಾಗದ ಕಾರಣ. ದೂರದೂರಿನಿಂದ ಬಂದ ರೋಗಿಗಳು ಸರತಿಯಲ್ಲಿ ಕಾದು ಸುಸ್ತಾಗಿ, ಔಷಧಿ ಖರೀದಿಗೆ ಖಾಸಗಿ ಮೆಡಿಕಲ್ ಸ್ಟೋರ್‌ಗಳ ಮೊರೆ ಹೋಗುತ್ತಿದ್ದಾರೆ. ಔಷಧಿಗಳ ದಾಸ್ತಾನು ಮಾಹಿತಿ ಹಾಗೂ ಔಷಧಿಗಳ ಅನಗತ್ಯ ವ್ಯರ್ಥ ತಪ್ಪಿಸಲು ಸರ್ಕಾರ ಈ ನಿಯಮ ಜಾರಿಗೊಳಿಸಿದೆ.

ಜಿಲ್ಲಾ ಆಸ್ಪತ್ರೆಯ ಔಷಧಿ ವಿತರಣಾ ಕೇಂದ್ರದಲ್ಲಿ ಸಿಬ್ಬಂದಿ ಕೊರತೆ ಇದೆ. ಆಸ್ಪತ್ರೆಯಲ್ಲಿ 600 ರಿಂದ 700 ಬಗೆಯ ಔಷಧಿಗಳಿವೆ. ಆದ್ದರಿಂದ,


ಉದಯವಾಹಿನಿ ಚಿತ್ರ

## ಸಿಬ್ಬಂದಿ ಗೌರವ ಕೊಡುವುದಿಲ್ಲ: ರೋಗಿಗಳ ಅಳಲು

**ರೋಗಿಗಳ ಚಿಕಿತ್ಸೆಗಾಗಿ ಇರುವ ಆಸ್ಪತ್ರೆಯ ಸ್ಥಿತಿಯೇ ಹದಗೆಟ್ಟಿದೆ. ಮೆಗ್ಗಾನ್ ಆಸ್ಪತ್ರೆಯ ಬಹುತೇಕ ನರ್ಸ್ ಅಟೆಂಡರ್ ವಾರ್ಡ್ ಬಾಯ್ ವರ್ತನೆ ಕೆಟ್ಟದಾಗಿರುತ್ತದೆ. ಬಡ ರೋಗಿಗಳನ್ನು ಕೀಳಾಗಿ ನಡೆಸಿಕೊಳ್ಳಲಾಗುತ್ತದೆ. ರೋಗಿಗಳಿಗೆ ಸಿಬ್ಬಂದಿ ಸರಿಯಾದ ಮಾಹಿತಿಯನ್ನೇ ಕೊಡುವುದಿಲ್ಲ. ಸೌಜನ್ಯದಿಂದಲೂ ನಡೆದುಕೊಳ್ಳುವದಿಲ್ಲ. ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿದ್ದರೂ ರೋಗಿಗಳಿಗೆ ಸೂಕ್ತ ಸೌಲಭ್ಯ ಸಿಗುತ್ತಿಲ್ಲ' ಎಂಬುದು ರೋಗಿಗಳು ಹಾಗೂ ಸಂಬಂಧಿಕರ ದೂರು.**

ತಂತ್ರಾಂಶದಲ್ಲಿ ದಾಖಲಿಸುವಾಗ ವೈದ್ಯರೂ ಸಹ ಗೊಂದಲಕ್ಕೆ ಸಿಲುಕುತ್ತಾರೆ. ಇತ್ತೀಚೆಗೆ ಈ ನಿಯಮ ಜಾರಿಗೊಂಡಿದ್ದರಿಂದ ಇದು ಸರಿಯಾಗಲು ಸಮಯ ಹಿಡಿಯುತ್ತದೆ ಎಂದು ಮೆಗ್ಗಾನ್ ಆಸ್ಪತ್ರೆ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಟಿ.ಡಿ.ತಿಮ್ಮಪ್ಪ 'ಪ್ರತಿಕ್ರಿಯಿಸಿದರು.'ವಾರದ ಹಿಂದೆ ಕರುಳಿನ ಸಮಸ್ಯೆಗೆ ಚಿಕಿತ್ಸೆ ಪಡೆಯಲಾಗಿತ್ತು. ಮತ್ತೊಮ್ಮೆ ಬರಲು ವೈದ್ಯರು ಹೇಳಿದ್ದರು.

ತಪಾಸಣೆ ಬಳಿಕ ಮಾತ್ರೆಗಳನ್ನು ನೀಡಿದ್ದಾರೆ. ಬೆಳಿಗ್ಗೆಯಿಂದ ಮೂರು ಬಾರಿ ಔಷಧಿ ಕೇಂದ್ರ ಬಳಿ ಸರತಿಯಲ್ಲಿ ಕಾದರೂ ನಿಮ್ಮ ವಿವರ ಆನ್‌ಲೈನ್‌ನಲ್ಲಿ ದಾಖಲಾಗಿಲ್ಲ. ಮತ್ತೊಮ್ಮೆ ವೈದ್ಯರನ್ನು ಕಂಡು ಬನ್ನಿ ಎಂದು ಸಿಬ್ಬಂದಿ ಹೇಳುತ್ತಿದ್ದಾರೆ. ಗಂಟೆಗೂ ಹೆಚ್ಚು ಕಾಲ ಸರತಿಯಲ್ಲಿ ನಿಂತಿದ್ದೇನೆ. ಪ್ರತಿ ಬಾರಿ ಹೋದಾಗಲೂ ಇದನ್ನೇ ಹೇಳುತ್ತಿದ್ದಾರೆ. ಇದರಿಂದ ಬೇಸತ್ತು ಹೋಗಿದ್ದೇನೆ' ಎಂದು ಶಿಕಾರಿಪುರದಿಂದ ಬಂದಿದ್ದ ರಮೇಶ್ ಅಳಲು ತೋಡಿಕೊಂಡರು. ವಾರದಲ್ಲಿ ಮೂರು ದಿನ ಮೆಗ್ಗಾನ್ ಆಸ್ಪತ್ರೆಯಲ್ಲಿ ಸಮಸ್ಯೆ ಹೇಳತೀರದು.

ದೂರದೂರಿನಿಂದ ಬಂದ ರೋಗಿಗಳು ತಲೆ ಬುಡವಿಲ್ಲದ ಈ ಹೊಸ ನಿಯಮದಿಂದ ಬೇಸತ್ತು ಹೋಗಿದ್ದಾರೆ. ಪ್ರತಿ ನಿತ್ಯ ಸರತಿಯಲ್ಲಿ ರೋಗಿಗಳು ಹಾಗೂ ಆಸ್ಪತ್ರೆಯ ಸಿಬ್ಬಂದಿಯೊಂದಿಗೆ ವಾಗ್ವಾದ ನಡೆಯುತ್ತಲೇ ಇರುತ್ತದೆ. ಈ ಬಗ್ಗೆ ಮೇಲಧಿಕಾರಿಗಳ ಗಮನಕ್ಕೂ ತರಲಾಗಿದೆ. ಆದರೆ, ಕ್ರಮ ಆಗಿಲ್ಲ' ಎಂದು ಆಸ್ಪತ್ರೆಯ ಸಿಬ್ಬಂದಿ ತಿಳಿಸಿದರು.

ಔಷಧಿ ವಿತರಣಾ ನಿಯಮ ಈ ಹಿಂದಿನ ರೀತಿಯಲ್ಲಿಯೇ ಜಾರಿಯಾಗಬೇಕು. ದೂರದ ಊರಿನಿಂದ ಬಂದು ಆಸ್ಪತ್ರೆ ಬಾಗಿಲು ಕಾಯಲು ಸಾಧ್ಯವಿಲ್ಲ. ಜನಸಾಮಾನ್ಯರಿಗೆ ಹೊರೆಯಾಗುವಂತಹ ಈ ರೀತಿಯ ನಿಯಮಗಳಿಂದ ಆರೋಗ್ಯ ಸ್ಥಿತಿ ಮತ್ತಷ್ಟು ಹದಗೆಡಲಿದೆ ಎಂದು ರೋಗಿಗಳ ಸಂಬಂಧಿಗಳು ಆತಂಕ ವ್ಯಕ್ತಪಡಿಸುತ್ತಾರೆ..

# ಮಳೆಗಾಲದಲ್ಲಿ ಮುಳುಗುವ ಸೇತುವೆ: ಗ್ರಾಮಸ್ಥರ ಪರದಾಟ

• ಉದಯವಾಹಿನಿ ನರಸಿಂಹರಾಜಪುರ

ತಾಲ್ಲೂಕಿನ ಕಡಹಿನಬೈಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಆಲಂದೂರು. ನೆರಲೆಕೊಪ್ಪ, ಹಂಕಲು ಮನೆ. ನರಿಗುಡ್ಡ, ದಿಡಿಗಿ. ಮಾವಿನಕೆರೆ ಗ್ರಾಮಗಳಿಗೆ ಶೆಟ್ಟಿಕೊಪ್ಪದಿಂದ ಸಂಪರ್ಕ ಕಲ್ಪಿಸುವ ಸೇತುವೆ ಮತ್ತು ರಸ್ತೆ ಸಮಸ್ಯೆಯು ದಶಕಗಳಿಂದ ಪರಿಹಾರ ಕಾಣದೆ ಪರದಾಡುವಂತಾಗಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಕಡಹಿನಬೈಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆಳಶೆಟ್ಟಿಕೊಪ್ಪ ವ್ಯಾಪ್ತಿಯಲ್ಲಿ ಹರಿಯುವ ಹಳ್ಳಕ್ಕೆ ಆಲಂದೂರು, ಗಾಂಧಿಗ್ರಾಮ, ನೆರಲೆಕೊಪ್ಪ, ಹಂಕಲು ಮನೆ ಗ್ರಾಮಕ್ಕೆ ಸಂಪರ್ಕ ಕಲ್ಪಿಸಲು ಕಿರು ಸೇತುವೆ ನಿರ್ಮಿಸಲಾಗಿದೆ.

ಈ ಸೇತುವೆಗೆ ತಡೆಗೋಡೆ ನಿರ್ಮಿಸಿಲ್ಲ, ಮಳೆಗಾಲದಲ್ಲಿ ಹಳ್ಳ ಉಕ್ಕಿದಾಗ ಸೇತುವೆಯ ಮೇಲೆ ನೀರು ನಿಲ್ಲುತ್ತದೆ. ನೀರು ಇಳಿಯುವವರೆಗೂ ಸಂಚಾರ ಸ್ಥಗಿತಗೊಳ್ಳುತ್ತದೆ. ಗ್ರಾಮಸ್ಥರು 7ಕಿ.ಮೀ ಸುತ್ತಿಬಳಸಿ ಹಾರೆಕೊಪ್ಪ ಗ್ರಾಮದ ಮೂಲಕ ಶೆಟ್ಟಿಕೊಪ್ಪ ಗ್ರಾಮಕ್ಕೆ ಬರಬೇಕಾಗುತ್ತದೆ. ಮಳೆಗಾಲದಲ್ಲಿ ಮರದ ದಿಮ್ಮಿಗಳು


ಉದಯವಾಹಿನಿ ಚಿತ್ರ

ಸೇತುವೆ ಕೆಳಗೆ ಸಿಕ್ಕಿಕೊಳ್ಳುವುದರಿಂದ ನೀರಿನ ಹರಿವಿಗೆ ಅಡ್ಡಿಯಾಗುತ್ತದೆ. ಮಳೆಗಾಲದ ಬಹುತೇಕ ದಿನಗಳಲ್ಲಿ ಸೇತುವೆ ಮುಳುಗಿದಾಗ ಶಾಲಾ ವಾಹನಗಳು ಗ್ರಾಮಕ್ಕೆ ಬರಲು ಸಾಧ್ಯವಾಗುವುದಿಲ್ಲ. ಆಗ ಮಕ್ಕಳು ಶಾಲೆಗೆ ಹೋಗದೆ ಮನೆಯಲ್ಲೇ ಇರಬೇಕಾಗುತ್ತದೆ. ಈ ಸೇತುವೆಯನ್ನು ಎತ್ತರಿಸಿದರೆ ಸಮಸ್ಯೆಗೆ ಪರಿಹಾರ ಸಿಗುತ್ತದೆ ಎನ್ನುತ್ತಾರೆ ಗ್ರಾಮಸ್ಥರು. ಆದರೆ, ದಶಕಗಳು ಕಳೆದರೂ ಈ ಬೇಡಿಕೆ ಸಾಕಾರಗೊಂಡಿಲ್ಲ. ಶೆಟ್ಟಿಕೊಪ್ಪದಿಂದ ನೆರಲೆ ಕೊಪ್ಪ, ಆಲಂದೂರು, ಗಾಂಧಿ ಗ್ರಾಮ ಮತ್ತು ಹಂಕಲು ಮನೆ ಗ್ರಾಮಕ್ಕೆ

> **ಗ್ರಾಮೀಣ ರಸ್ತೆ ಅಭಿವೃದ್ಧಿಗೆ ಸರ್ಕಾರದಿಂದ 50ಕೋಟಿ ಅನುದಾನ ಬಿಡುಗಡೆ ಮಾಡುವುದಾಗಿ ಸಚಿವರು ಹೇಳಿದ್ದಾರೆ. ಅನುದಾನ ಬಿಡುಗಡೆಯಾದರೆ ರಸ್ತೆ ಸೇತುವೆ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು**
> **-ಟಿ.ಡಿ.ರಾಜೇಗೌಡ, ಶಾಸಕ**

ಸಂಪರ್ಕ ಕಲ್ಪಿಸುವ ಸೇತುವೆಯೂ ಶಿಥಿಲಗೊಂಡಿದೆ. ಈ ಸೇತುವೆಯ ಮೇಲೂ ಮಳೆಗಾಲದಲ್ಲಿ ನೀರು ಹರಿಯುತ್ತದೆ. ಇಲ್ಲಿ ಹೊಸ ಸೇತುವೆ ನಿರ್ಮಿಸಬೇಕು ಎನ್ನುವುದು ಗ್ರಾಮಸ್ಥರು ಆಗ್ರಹ, ಕಡಹಿನಬೈಲು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹರಿಯುವ ಹಳ್ಳಕ್ಕೆ ಗಾಂಧಿಗ್ರಾಮ, ಚನಮಣೆ, ಮಂಜಿನಕೊಪ್ಪ ಗ್ರಾಮದಲ್ಲಿ ನಿರ್ಮಿಸಿರುವ ಸೇತುವೆಗಳ ಎತ್ತರವೂ ಕಡಿಮೆ ಇರುವುದರಿಂದ ಮಳೆಗಾಲದಲ್ಲಿ ನೀರು ಸೇತುವೆಯ ಮೇಲೆ ಹರಿಯುತ್ತದೆ ಇಲ್ಲೂ ಎತ್ತರದ ಸೇತುವೆ ನಿರ್ಮಿಸಬೇಕು ಎನ್ನುವುದು ಗ್ರಾಮಸ್ಥರ ಒತ್ತಾಯ.


# ಅಮಾಯಕರ ಬಂಧಿಸಿದರೆ ಠಾಣೆಗೆ ಮುತ್ತಿಗೆ: ಡಾ.ಭರತ್ ಶೆಟ್ಟಿ

• ಉದಯವಾಹಿನಿ ಮಂಗಳೂರು

ನಗರ ಹೊರವಲಯದ ಕುಡುಪುವಿನಲ್ಲಿ ನಡೆದ ಗುಂಪು ಹಲ್ಲೆ ಮತ್ತು ಹತ್ಯೆಯ ರಾಜಕೀಯ ಲಾಭ ಪಡೆಯಲು ಕಾಂಗ್ರೆಸ್ ಹಾಗೂ ಎಸ್‌ಡಿಪಿಐ ಪ್ರಯತ್ನಿಸುತ್ತಿದ್ದು ತಮಗೆ ಆಗದವರನ್ನು ಬೊಟ್ಟು ಮಾಡಿ ಆರೋಪಿಗಳೆಂದು ಬಿಂಬಿಸುತ್ತಿದ್ದಾರೆ.

ಇದಕ್ಕೆ ಮಣಿದು ಅಮಾಯಕರನ್ನು ಬಂಧಿಸುವುದನ್ನು ನಿಲ್ಲಿಸದಿದ್ದರೆ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಲಾಗುವುದು ಎಂದು ಮಂಗಳೂರು ಉತ್ತರ ಕ್ಷೇತ್ರದ ಶಾಸಕ, ಬಿಜೆಪಿಯ ಡಾ.ವೈ.ಭರತ್ ಶೆಟ್ಟಿ ಎಚ್ಚರಿಕೆ ನೀಡಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಪಹಲ್ಗಾಮ್ ಘಟನೆ ನಡೆದ ನಂತರ ದೇಶದಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿದ್ದು ದೇಶವಿರೋಧಿ ಚಟುವಟಿಕೆ ಕಂಡುಬಂದರೆ ಜನರು ಆಕ್ರೋಶಗೊಳ್ಳುವ ಪರಿಸ್ಥಿತಿ ಇದೆ. ನನ್ನ ಕ್ಷೇತ್ರದಲ್ಲಿ ಆಗಿರುವ ಗುಂಪು ಹಲ್ಲೆ ಮತ್ತು ಕೊಲೆ ಕೂಡ ಇದೇ ರೀತಿ ಉದ್ವೇಗದಿಂದ ಆಗಿರುವ ಸಾಧ್ಯತೆ ಇದೆ. ಅದನ್ನು ಅಪರಾಧ ಪ್ರಕರಣವಾಗಿ ನೋಡಬೇಕೇ ಹೊರತು ಧರ್ಮ ಮತ್ತು ರಾಜಕೀಯ ಬಣ್ಣ ಕೊಡುವುದು ಸರಿಯಲ್ಲ' ಎಂದರು. 'ನಗರಪಾಲಿಕೆಯ ಬಿಜೆಪಿ ಸದಸ್ಯರಾಗಿದ್ದವರೊಬ್ಬರ ಪತಿಯ ಕುಮ್ಮಕ್ಕಿನಿಂದ ಘಟನೆ ನಡೆದಿದೆ ಎಂದು ಕೆಪಿಸಿಸಿ ಜಿಲ್ಲಾ ಘಟಕದ ಅಧ್ಯಕ್ಷ ಹರೀಶ್ ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ. ಹಾಗೆ ಹೇಳಬೇಕಾದರೆ ಅವರು ಅಥವಾ ಅವರ ಕಡೆಯವರು ಘಟನೆ ನಡೆದ ಸ್ಥಳದಲ್ಲಿ ಇದ್ದರೇ' ಎಂದು ಪ್ರಶ್ನಿಸಿದ ಭರತ್ ಶೆಟ್ಟಿ, 'ಪೊಲೀಸರು ಮೇಲಧಿಕಾರಿಗಳನ್ನು ಮೆಚ್ಚಿಸುವುದಕ್ಕಾಗಿ ಆರೋಪಿಗಳ ಸಂಖ್ಯೆ ಹೆಚ್ಚಿಸಲು ಪ್ರಯತ್ನಿಸುತ್ತಿದ್ದಾರೆ. ಗ್ರಾಮಾಂತರ ಠಾಣೆಯ ಅಧಿಕಾರಿಗಳು ಮತ್ತು ಕಾನ್‌ಸ್ಟೇಬಲ್ ಅಮಾನತಿನಲ್ಲೂ ರಾಜಕೀಯ ಕುಮ್ಮಕ್ಕು ನಡೆದಿದೆ.



ಅಮಾನತು ಆದೇಶ ಬರುವ ಮೊದಲೇ ಸರ್ಕಾರ ಕೈಗೊಂಡ ಕ್ರಮಗಳು ಎಂಬ ಸಂದೇಶ ವಾಟ್ಸ್ ಆ್ಯಪ್ ಗ್ರೂಪ್‌ಗಳಲ್ಲಿ ಹರಿದಾಡಿದ್ದು ಹೇಗೆ' ಎಂದು ಕೇಳಿದರು.

ರಾಜೇಶ್ ಕೊಟ್ಟಾರಿ, ಪ್ರೇಮಾನಂದ ಶೆಟ್ಟಿ, ಸಂದೀಪ್ ಪಚ್ಚನಾಡಿ, ಲೋಹಿತ್ ಅಮೀನ್, ಮನೋಹರ ಶೆಟ್ಟಿ ಮತ್ತು ಅಶ್ರಿತ್ ನೋಂಡಾ ಪಾಲ್ಗೊಂಡಿದ್ದರು.

## ಮಾನಸಿಕ ಅಸ್ವಸ್ಥತೆ ನೆಪ

**ಕುಡುಪುವಿನಲ್ಲಿ ಪಾಕಿಸ್ತಾನದ ಪರ ಘೋಷಣೆ ಕೂಗಿದ್ದಕ್ಕೆ ಆಕ್ರೋಶಗೊಂಡ ಗುಂಪು ಯುವಕನನ್ನು ಕೊಂದಿದೆ ಎಂದು ಎಫ್‌ಐಆರ್‌ನಲ್ಲೇ ದಾಖಲಾಗಿದೆ. ಆದರೆ ಘೋಷಣೆ ಕೂಗಿದವ ಮಾನಸಿಕ ಅಸ್ವಸ್ಥ ಎಂದು ಹೇಳುವುದು ನೆಪ. ದೇಶದ್ರೋಹದ ಕೃತ್ಯ ಎಸಗಿದವರನ್ನು ಮತ್ತು ವಿಕೃತಿ ಮೆರೆದವರನ್ನು ಈ ಹಿಂದೆಯೂ ಮಾನಸಿಕ ಅಸ್ವಸ್ಥರು ಎಂದು ಹೇಳಿದ ಉದಾಹರಣೆಗಳು ಇವೆ. ಬೆಂಗಳೂರಿನಲ್ಲಿ ದನದ ಕೆಚ್ಚಲು ಕುಯ್ದವರು. ಮಂಗಳೂರು ಉತ್ತರ ಕ್ಷೇತ್ರದಲ್ಲಿ ಯುವತಿಯರ ಮೇಲೆ ದೌರ್ಜನ್ಯ ಎಸಗಿದವರು ಎಲ್ಲರೂ ಮಾನಸಿಕ ಅಸ್ವಸ್ಥರು ಹೇಗಾಗುತ್ತಾರೆ ಎಂದು ಶಾಸಕರು ಪ್ರಶ್ನಿಸಿದರು.**

## ಕಾರ್ಮಿಕರು ಖಾತ್ರಿ ಲಾಭ ಪಡೆಯಲಿ

• ಉದಯವಾಹಿನಿ ಜನವಾಡ

ಗ್ರಾಮೀಣ ಪ್ರದೇಶದ ಕೂಲಿ ಕಾರ್ಮಿಕರು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಲಾಭ ಪಡೆಯಬೇಕು' ಎಂದು ಪಿಡಿಒ ಉಮೇಶ ಜಾಬಾ ಹೇಳಿದರು.

ಬೀದರ್ ತಾಲ್ಲೂಕಿನ ಮರಕಲ್ ಗ್ರಾಮದಲ್ಲಿ ನಡೆದ ಕಾಯಕ ಮಾಸಾಚರಣೆ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು. ಕಾಯಕ ಮಾಸಾಚರಣೆ ಒಂದು ತಿಂಗಳು ಹೆಚ್ಚಿನ ಕೂಲಿ ಕಾರ್ಮಿಕರಿಗೆ ಕೆಲಸ ಕೊಡುವ ವಿಶೇಷ ಅಭಿಯಾನವಾಗಿದೆ' ಎಂದು ತಿಳಿಸಿದರು.

## ಸರಣಿ ಕಳ್ಳತನ: ತೀವ್ರ ಪರಿಶೀಲನೆ

• ಉದಯವಾಹಿನಿ ಆಲಮೇಲ

ಪಟ್ಟಣದಲ್ಲಿ ಮನೆಗಳ ಸರಣಿ ಕಳ್ಳತನ ಜನರಲ್ಲಿ ಭಯದ ಆತಂಕ ಮನೆ ಮಾಡಿದ್ದು, ಘಟನಾ ಸ್ಥಳಕ್ಕೆ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಾಮನಗೌಡ ಹಟ್ಟಿ ಶ್ವಾನದಳದೊಂದಿಗೆ ಭೇಟಿ ಪರಿಶೀಲಿಸಿದರು. ಮಧ್ಯರಾತ್ರಿ ಪಟ್ಟಣದ ಹಿರೇಮಠ ಹತ್ತಿರದ ಬಡಾವಣೆ ಹಾಗೂ ಕಡಣಿ ಅಗಸಿ ಹಡಪದ ಬಡಾವಣೆಗಳಲ್ಲಿ ಮನೆಗಳ ಬೀಗ ಮುರಿದು ಕಳ್ಳತನ ಮಾಡಲಾಗಿದೆ.

ಮಧ್ಯರಾತ್ರಿ ಸುಮಾರು ನಾಲ್ಕೈದು ಜನ ಮುಸುಕುಧಾರಿಗಳು ಕಲ್ಲುಗಳು ಹಿಡಿದುಕೊಂಡು ಸಂಚರಿಸಿದ್ದ ಶಂಕೆ ವ್ಯಕ್ತಪಡಿಸಲಾಗಿದೆ. ಈ ಬಗ್ಗೆ ಪೊಲೀಸರು ತೀವ್ರ ಪರಿಶೀಲನೆ ಮಾಡುತ್ತಿದ್ದಾರೆ. ಮನೆ ಹೊರಗಡೆ ಕೀ ಹಾಕಿದ್ದನ್ನು ಖಚಿತಪಡಿಸಿಕೊಂಡು ಕಳ್ಳತನ ಮಾಡಲಾಗಿದೆ.

## ಕುಶಲಕರ್ಮಿಗಳಿಗೆ ಸತ್ಕಾರ

• ಉದಯವಾಹಿನಿ ಸೇಡಂ

ತಾಲ್ಲೂಕಿನ ರಾಘಪೂರ್ ಗ್ರಾಮದ ಹಜರತ್ ಮೌಲಾಲಿ ದರ್ಗಾದ ಹತ್ತಿರ ಪರಮಪೂಜ್ಯ ತಿಪ್ಪಯ್ಯ ಮುಖ್ಯ ಅವರ ನೇತೃತ್ವದಲ್ಲಿ ವಿಶ್ವ ಕಾರ್ಮಿಕರ ದಿನಾಚರಣೆ ನಿಮಿತ್ಯ ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕಾ ಘಟಕದ ವತಿಯಿಂದ ಕಾರ್ಮಿಕರ ದಿನಾಚರಣೆ ವಿಶೇಷವಾಗಿ ಆಚರಣೆ ಮಾಡಲಾಯಿತು. ಕುಶಲಕರ್ಮಿಗಳಿಗೆ ಶವಾಸಂಸ್ಕಾರರಿಗೆ ಲೈನ್ ಮ್ಯಾನ್‌ಗಳಿಗೆ ಪೋಲಿಸ್ ಸಿಬ್ಬಂದಿ ವರ್ಗಕ್ಕೆ ವಿಶೇಷ ಸತ್ಕಾರಿ ಗೌರವಿಸಲಾಯಿತು. ಈ ವೇಳೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕಾಧ್ಯಕ್ಷ ಡಾ. ರಾಮಚಂದ್ರ ಗುತ್ತೇದಾರ್ ಶ್ರೀನಿವಾಸ ರೆಡ್ಡಿ ಮದನಾ ಗುಂಡಪ್ಪ ಪೂಜಾರಿ ಮಹೇಶ್ ರೆಡ್ಡಿ ಚಂದ್ರಶೇಖರ್ ಮಡಿವಾಳ ನವೀನ್ ಗುತ್ತೇದಾರ್ ಮುಕುಂದ ಬಂದೆವಪಲ್ಲಿ ಸಿದ್ದಲಿಂಗ ಮದನ ಅನಿಲ್ ಟಿ ನೀಲಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

## ಸರ್ಕಾರದ ಯೋಜನೆಗಳು ಅರ್ಹ ಕಾರ್ಮಿಕರಿಗೆ ಸಿಗಲಿ


• ಉದಯವಾಹಿನಿ ಕಲಬುರಗಿ

ಕಾರ್ಮಿಕರ ಏಳಿಗೆಗಾಗಿ ಸರ್ಕಾರ ಜಾರಿಗೆ ತಂದಿರುವ ಯೋಜನೆಗಳು ನಿಜವಾದ ಅರ್ಹ ಕಾರ್ಮಿಕರಿಗೆ ತಲುಪಬೇಕಿದೆ ಎಂದು ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ಅಧ್ಯಕ್ಷ ಲಕ್ಷ್ಮಣ ದಸ್ತಿ ಹೇಳಿದರು.

ಇಲ್ಲಿನ ಜಗತ್ ವೃತ್ತದ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಆವರಣದಲ್ಲಿ ವಿಶ್ವ ಕಾರ್ಮಿಕರ ದಿನಾಚರಣೆಯ ಅಂಗವಾಗಿ ನವ ಕಲ್ಯಾಣ ಕರ್ನಾಟಕ ಕಟ್ಟಡ ಕಾರ್ಮಿಕರ ಸಂಘ ಆಯೋಜಿಸಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸರ್ಕಾರ ಘೋಷಿಸಿರುವ ಸಾವಿರಾರು ಕೋಟಿ ರೂಪಾಯಿ ಯೋಜನೆಗಳ ನೆರವು ನಿಜವಾದ ಕಾರ್ಮಿಕರಿಗೆ ತಲುಪುತ್ತಿಲ್ಲ.

ನೈಜ ಕಾರ್ಮಿಕರು ಕಾಯಕದಲ್ಲಿ ತೊಡಗಿದ್ದರೆ, ಇತ್ತ ನಕಲಿ ಕಾರ್ಮಿ ಕರು ಸರ್ಕಾರಿ ಕಚೇರಿಗಳಿಗೆ ಹೋಗಿ, ಲಂಚ ಕೊಟ್ಟು ತಮ್ಮ ಕೆಲಸ ಮಾಡಿಸಿಕೊಳ್ಳುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಸಚಿವ ಎಸ್.ಕೆ.ಕಾಂತಾ ಸೇರಿ ಹಲವರು ಕಾರ್ಮಿಕರಾಗಿದ್ದವರು. ಅವರಂತೆ ಕಾರ್ಮಿಕರ ಪರವಾಗಿ ಧ್ವನಿ ಎತ್ತಿದ್ದ


ಉದಯವಾಹಿನಿ ಚಿತ್ರ

ನೂರಾರು ಕಾರ್ಮಿಕ ಹೋರಾಟಗಾರರು ರಾಜಕೀಯದಲ್ಲಿ ಉನ್ನತ ಸ್ಥಾನಕ್ಕೆ ಏರಿದ್ದಾರೆ' ಎಂದರು.

ಕಾಂಗ್ರೆಸ್ ಮುಖಂಡ ಪ್ರವೀಣ್ ಪಾಟೀಲ ಹರವಾಳ ಮಾತನಾಡಿ, ದೇಶವನ್ನು ಕಟ್ಟುವವರು ಕಾರ್ಮಿಕರು, ಕಾರ್ಮಿಕರು ಇಲ್ಲದಿದ್ದರೆ ಜೀವನ ಸಾಗಿಸುವುದು ಕಷ್ಟವಾಗುತ್ತಿತ್ತು ಎಂದು ಅಭಿಪ್ರಾಯಪಟ್ಟರು. ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಆಡಳಿತಾಧಿಕಾರಿ ಅಲ್ಲಮಪ್ರಭು ದೇಶಮುಖ ಮಾತನಾಡಿ, 'ಶರಣರು ನುಡಿದಂತೆ ನಡೆದು ಕಾಯಕ ಮತ್ತು ದಾಸೋಹ ತತ್ವವನ್ನು ತಮ್ಮ ಜೀವನದ ಉದ್ದಕ್ಕೂ ಪಾಲಿಸಿದ್ದರು. ಕಾರ್ಮಿಕರು ಸಹ ಶರಣರಂತೆ ಕಾಯಕ ತತ್ವವನ್ನು ಪಾಲಿಸಿ, ದುಡಿಯುತ್ತಿದ್ದಾರೆ. ಕಾರ್ಮಿಕರ ಬೆವರಿನಲ್ಲಿ ದೇಶದ ಭವಿಷ್ಯ ಅಡಗಿದೆ. ಕಾರ್ಮಿಕರು ಇಲ್ಲದ ದೇಶವನ್ನು ಊಹಿಸುವುದು ಕಷ್ಟವಾಗುತ್ತದೆ' ಎಂದರು.

## ಕಾರ್ಮಿಕ ದಿನಾಚರಣೆ

• ಉದಯವಾಹಿನಿ ಚಿಕ್ಕೋಡಿ

ಮಾಲೀಕರ ವಿರುದ್ಧ ಕಾರ್ಮಿಕರು ಹೋರಾಟ ನಡೆಸಿದ ಪ್ರತೀಕವಾಗಿ ಮೇ 1ರಂದು ಕಾರ್ಮಿಕ ದಿನಾಚರಣೆ ಮಾಡಲಾಗುತ್ತದೆ' ಎಂದು ಚಿಕ್ಕೋಡಿ ತಾಲ್ಲೂಕು ಪಂಚಾಯಿತಿ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎನ್. ವಣ್ಣೂರ ಹೇಳಿದರು.

ತಾಲ್ಲೂಕಿನ ಇಂಗಳಿ ಗ್ರಾಮದಲ್ಲಿ ನರೇಗಾ ಕೂಲಿ ಕಾರ್ಮಿಕರು ಕಾರ್ಯನಿರ್ವಹಿಸುವ ಸ್ಥಳದಲ್ಲಿ ಕಾರ್ಮಿಕ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಮಹಿಳಾ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಇದರಿಂದ ಅವರಿಗೆ ಕುಟುಂಬ ನಿರ್ವಹಣೆಗೆ ಆರ್ಥಿಕ ಬಲ ಬಂದಂತಾಗಿದೆ.

ಮಕ್ಕಳ ಶಿಕ್ಷಣ, ಮನೆ ನಿರ್ವಹಣೆ ಮುಂತಾದ ಕಾರ್ಯನಿರ್ವಹಣೆಗೆ ಅನುಕೂಲವಾಗುತ್ತದೆ' ಎಂದರು. ಶಿವಾನಂದ ಶಿರಗಾಂವಿ, ಸುಮನ ಶೆಳಕೆ, ವಂದನಾ ಕಾಂಬಳೆ, ಪಿಡಿಒ ಸಿದ್ದಪ್ಪ ಹಿರೇಕುರುಬರ, ಇತರರು ಇದ್ದರು.


## ಫಲಾನುಭವಿಗಳಿಗೆ ಮನೆಗಳ ವಿತರಣೆಗೆ ಆಗ್ರಹ

• ಉದಯವಾಹಿನಿ ಶಿಗ್ಗಾವಿ

ಪಟ್ಟಣದಲ್ಲಿ ನಿರ್ಮಾಣವಾದ ಜಿ ಪ್ಲಸ್ 1 ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಬೇಕು ಎಂದು ಆಗ್ರಹಿಸಿ ಜಿ ಪ್ಲಸ್ 1 ಮನೆ ಫಲಾನುಭವಿಗಳ ಹೋರಾಟ ಸಮಿತಿ ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ಪದಾಧಿಕಾರಿಗಳು ಪ್ರತಿಭಟನೆ ನಡೆಸಿ ಶಾಸಕ ಯಾಸಿರ್ ಅಹ್ಮದ ಖಾನ್ ಪಠಾಣ ಅವರಿಗೆ ಮನವಿ ಸಲ್ಲಿಸಿದರು.

ವಸತಿ ಸೌಲಭ್ಯಕ್ಕಾಗಿ ಪುರಸಭೆ ವಂತಿಗೆ ಕಟ್ಟಿರುವ ಬಡ ಫಲಾನುಭವಿಗಳಿಗೆ 12 ವರ್ಷಗಳ ಹಿಂದೆಯೇ ನಿರ್ಮಾಣಗೊಂಡಿರುವ ಜಿ + 1 ಮನೆಗಳನ್ನು ವಿತರಣೆ ಮಾಡಲು ಕೂಡಲೇ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಮನೆಗಳ ಬಾಗಿಲುಗಳ ಬೀಗ ತೆಗೆದುಕೊಂಡು ವಾಸ ಮಾಡಲು ಆರಂಭಿಸುತ್ತೇವೆ. ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಆಕ್ರೋಶ ವ್ಯಕ್ತ ಪಡಿಸಿದರು.

ಮನೆ ಸಿಗುವ ಆಸೆಯಿಂದ ಸಾಲ ಮಾಡಿ ಮನೆ ಕಂತು ತುಂಬಿದ್ದಾರೆ. ಮನೆ ಸಿಗಬಹುದು ಎಂದು 12 ವರ್ಷದವರೆಗೆ ಮನೆ ಬಾಡಿಗೆ ಕಟ್ಟುತ್ತಾ ಬಂದಿದ್ದಾರೆ.


ಉದಯವಾಹಿನಿ ಚಿತ್ರ

ಆದರೆ ಈಗ ಇತ್ತ ಮನೆ ಸಿಗುತ್ತಿಲ್ಲ. ಅತ್ತೆ ಬಾಡಿಗೆ ಕಟ್ಟಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಇಡೀ ಕುಟುಂಬ ಬೀದಿಗೆ ಬೀಳುವಂತಾಗಿದೆ. ಅದರು ಸಹ ಅಧಿಕಾರಿಗಳು ಈಕಡೆ ಗಮನಿಸುತ್ತಿಲ್ಲ ಎಂದು ಅಳಲು ವ್ಯಕ್ತ ಪಡಿಸಿದರು. ಸಂಸದ ಬಸವರಾಜ ಬೊಮ್ಮಾಯಿ ಅವರ ಅವಧಿಯಲ್ಲಿ ನಿರ್ಮಾಣಗೊಂಡಿರುವ ಮನೆಗಳನ್ನು ಉದ್ಘಾಟನೆ ಕೂಡ ಮಾಡಿದ್ದಾರೆ. ಆದರೂ ಮನೆಗಳನ್ನು ವಿತರಿಸದೇ ಬಡವರಿಗೆ ಸಂಕಷ್ಟವನ್ನುಂಟು ಮಾಡುತ್ತಿರುವುದು ನೋವಿನ ಸಂಗತಿ ಎಂದರು. ಮನವಿ ಸ್ವೀಕರಿಸಿದ ಶಾಸಕ ಯಾಸಿರ ಅಹ್ಮದಖಾನ್ ಪಠಾಣ ಮಾತನಾಡಿ, ಈಗಾಗಲೇ ಸುಮಾರು 150 ಅರ್ಹ ಫಲನುಭವಿಗಳ ಪಟ್ಟಿ ಪ್ರಕಟಿಸಲಾಗಿದೆ. ತಕ್ಷಣ ಅಧಿಕಾರಿಗಳ ಸಭೆ ಕರೆದು ಆಯ್ಕೆ ಆಗಿರುವ ಫಲನುಭವಿಗಳಿಗೆ ಮನೆ ಹಂಚಿಕೆ ಮಾಡಲಾಗುವುದು ಎಂದರು.

### • ಬ್ಲಾಕ್‌ಗಳನ್ನು ಗುರುತು ಮಾಡಿರುವ ಬಗ್ಗೆ ಕಳೆದ ಜನವರಿಯಲ್ಲಿ ಗೆಜೆಟ್ ಅಧಿಸೂಚನೆ ಹೊರಡಿಸಲಾಗಿದೆ

# ಮರಳು ಗಣಿಗಾರಿಕೆ: ಬಳ್ಳಾರಿ ಜಿಲ್ಲೆಯಲ್ಲಿ 13 ಬ್ಲಾಕ್ ಗುರುತು

• ಉದಯವಾಹಿನಿ ಬಳ್ಳಾರಿ

ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ ಒಟ್ಟು 13 ಮರಳು ಬ್ಲಾಕ್‌ಗಳನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಗುರುತಿಸಿದೆ. ಈ ಎಲ್ಲಾ ಬ್ಲಾಕ್‌ಗಳಲ್ಲಿ ಒಟ್ಟಾರೆ 24,11.002 ಮೆಟ್ರಿಕ್ ಟನ್ ಮರಳು ದಾಸ್ತಾನು ಇರಬಹುದು ಎಂದು ಅಂದಾಜಿಸಲಾಗಿದ್ದು, ಈ ಕುರಿತು ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಲಾಗಿದೆ.

ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023ರ ನಿಯಮ 31-ಯು ರಂತೆ IV, V ಮತ್ತು ಉನ್ನತ ಶ್ರೇಣಿಯ ಹಳ್ಳ, ನದಿಗಳ ಪಾತ್ರಗಳಲ್ಲಿ ಲಭ್ಯವಿರುವ ಈ ಮರಳು ಬ್ಲಾಕ್‌ಗಳನ್ನು ಇ-ಟೆಂಡರ್ ಮೂಲಕ ವಿಲೇವಾರಿಗೆ ಅವಕಾಶ ಕಲ್ಪಿಸಲಾಗಿದೆ.

ಅದರಂತೆ 2024ರ ಡಿ.3ರಂದು ಮಾರ್ಗಸೂಚಿ ಹೊರಡಿಸಲಾಗಿದೆ. ರಾಜ್ಯದಲ್ಲಿ ಒಟ್ಟು 260 ಮರಳು ಬ್ಲಾಕ್‌ಗಳನ್ನು ಗುರುತಿಸಲಾಗಿದ್ದು, ಅದರಲ್ಲಿ ಬಳ್ಳಾರಿಯ 13 ಬ್ಲಾಕ್‌ಗಳಿವೆ. ವಿಜಯನಗರ ಜಿಲ್ಲೆಯ 16 ಬ್ಲಾಕ್‌ಗಳಿವೆ. ಜಿಲ್ಲಾ ಮರಳು ಸಮಿತಿಯ ಸಭೆಯಲ್ಲಿ ಬ್ಲಾಕ್‌ಗಳ ಕುರಿತು ಚರ್ಚಿಸಿ ನಿರ್ಣಯಿಸಲಾಗಿದೆ. ಬ್ಲಾಕ್‌ಗಳನ್ನು ಗುರುತು ಮಾಡಿರುವ ಬಗ್ಗೆ ಕಳೆದ ಜನವರಿಯಲ್ಲಿ ಗೆಜೆಟ್ ಅಧಿಸೂಚನೆ ಹೊರಡಿಸಲಾಗಿದೆ.

**ರಾಜ್ಯ ಪತ್ರದಲ್ಲಿ ಅಧಿಸೂಚನೆ**

ಜಿಲ್ಲೆಯಲ್ಲಿ ತುಂಗಭದ್ರಾ ನದಿ ಮತ್ತು ವೇದಾವತಿ/ ಹಗರಿ ನದಿಗಳು ಹರಿಯುತ್ತಿವೆ. ಈ ನದಿಗಳ ಪಾತ್ರದಲ್ಲಿ, ಸಂಬಂಧಿತ ತಾಲ್ಲೂಕು ಮರಳು ಸಮಿತಿಯ ಸದಸ್ಯರನ್ನು ಒಳಗೊಂಡ ತಂಡವು ಜಂಟಿಯಾಗಿ ಸಮೀಕ್ಷೆ ನಡೆಸಿ 13 ಮರಳು ಬ್ಲಾಕ್‌ಗಳನ್ನು ಗುರುತು ಮಾಡಿವೆ.

ಬಳ್ಳಾರಿ ತಾಲೂಕಿನಲ್ಲಿ-3, ಸಿರುಗುಪ್ಪ 9, ಕಂಪ್ಲಿಯಲ್ಲಿ 1 ಬ್ಲಾಕ್ ಅನ್ನು ನಿಗದಿ ಮಾಡಲಾಗಿದೆ.

**ಬಳ್ಳಾರಿ ತಾಲ್ಲೂಕು:** ಬೈಲಚಿಂತೆಯ ಹಗರಿ ನದಿ ಪಾತ್ರದ 18 ಎಕರೆ (1.09.847 ಮೆ.ಟನ್), ಬೈಲಚಿಂತೆಯ ಜಿ.ನಾಗೇನಹಳ್ಳಿ ಸಮೀಪ ಹಗರಿ ನದಿ ಪಾತ್ರದ 24 ಎಕರೆ (1.45.280), ಯಾಳಿ ಗ್ರಾಮದ ಹಗರಿ ನದಿ ಪಾತ್ರದ 18 25 (1,05.618).

**ಸಿರುಗುಪ್ಪ ತಾಲ್ಲೂಕು:** ತುಂಗುಭದ್ರಾ ನದಿ ಪಾತ್ರದಲ್ಲಿ ಬರುವ ನಿಟ್ಟೂರು ಗ್ರಾಮದ 39.20 ಎಕರೆ (2,44,190), ಎಂ. 33 25 (2,08,610), 20. (2.29.142), 2 32 25 (2.01,883), 34 25 (2,17,620), 20. ? 31 25 (1.97.238), 2 36 2 29 2 (1.83.281). ಹಚ್ಚಳ್ಳಿಯ 34.80 ಎಕರೆ (2,09,448), ಹಗರಿ ನದಿ ಪಾತ್ರದ ಕೆ. ಬೆಳಗಲ್‌ನ 35 ಎಕರೆ (2.18.335).

**ಕಂಪ್ಲಿ ತಾಲ್ಲೂಕು:** ತುಂಗಭದ್ರಾ ನದಿ ಪಾತ್ರದ ಅರೆಹಳ್ಳಿ, ಸಾಣಾಪುರ 24 ಎಕರೆ (1.40,510) ಗುರುತಿಸಲಾಗಿದೆ.


ಉದಯವಾಹಿನಿ ಚಿತ್ರ

ಎಲ್ಲಾ ಬ್ಲಾಕ್‌ಗಳಲ್ಲಿ ಒಟ್ಟಾರೆ 24,11.002 ಮೆಟ್ರಿಕ್ ಟನ್ ಮರಳು ನಿಕ್ಷೇಪಗೊಂಡಿರುವುದಾಗಿ ಇಲಾಖೆ ಅಂದಾಜು ಮಾಡಿದೆ. 13 ಬ್ಲಾಕ್‌ಗಳ ಪೈಕಿ ಪ್ರತಿ ತಾಲ್ಲೂಕಿನಲ್ಲೂ ಒಂದೊಂದರಂತೆ ಒಟ್ಟು ಮೂರು ಬ್ಲಾಕ್‌ಗಳನ್ನು ಸರ್ಕಾರದ ಕಾಮಗಾರಿಗಳಿಗಾಗಿ ಮೀಸಲಿಡಲಾಗಿದೆ. ಈ ಮೂರು ಬ್ಲಾಕ್‌ಗಳಲ್ಲಿ ಒಟ್ಟು 3,84,700 ಮೆಟ್ರಿಕ್ ಟನ್ ಮರಳು ನಿಕ್ಷೇಪಗೊಂಡಿರುವುದಾಗಿ ಗೆಜೆಟ್ ಅಧಿಸೂಚನೆಯಲ್ಲಿದೆ. ಟೆಂಡರ್ ಮತ್ತು ಹರಾಜಿಗೆ ಒಟ್ಟು 10 ಬ್ಲಾಕ್‌ಗಳನ್ನು ಹರಾಜಿಗೆ ಇಡಲಾಗಿದ್ದು, ಬಳ್ಳಾರಿ ತಾಲ್ಲೂಕು ಮತ್ತು ಸಿರುಗುಪ್ಪದಲ್ಲಿ ಒಟ್ಟು ಮೂರು ಬ್ಲಾಕ್‌ಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮೀಸಲಿರಿಸಲಾಗಿದೆ.

## ಮರಳಿನ ಸರ್ಕಾರಿ ಬೆಲೆ ಏನು?

**ಉನ್ನತ ಶ್ರೇಣಿಗಳ ಹೊಳೆ ನದಿ ಅಣೆಕಟ್ಟು ಜಲಾಶಯ ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರಗಳಲ್ಲಿ ಮರಳು ಗಣಿಗಾರಿಕೆ ನಡೆಸಿ ಸಾರ್ವಜನಿಕರಿಗೆ ಮತ್ತು ಸರ್ಕಾರಿ ಕಾಮಗಾರಿಗಳಿಗೆ ಪೂರೈಸುವ ಮರಳಿಗೆ ಟೆಂಡರ್ ಮೂಲಕ ಗುತ್ತಿಗೆ ಪಡೆದ ಬ್ಲಾಕ್‌ಗಳಿಂದ ಪೂರೈಸಲಾಗುವ ಪ್ರತಿ ಮೆಟ್ರಿಕ್ ಟನ್ ಮರಳಿಗೆ 850 ನಿಗದಿಪಡಿಸಲಾಗಿದೆ ಎಂದು ಸರ್ಕಾರ ಈಚೆಗೆ ವಿಧಾನ ಮಂಡಲ ಅಧಿವೇಶನದಲ್ಲಿ ಸದಸ್ಯರೊಬ್ಬರಿಗೆ ನೀಡಿದ್ದ ಉತ್ತರದಲ್ಲಿ ಉಲ್ಲೇಖಿಸಲಾಗಿದೆ. ಜಿಲ್ಲೆಯಲ್ಲಿ ನಡೆಯುತ್ತಿರುವ ಅಕ್ರಮ ಮರಳುಗಾರಿಕೆ ತಡೆಯಲು ಬ್ಲಾಕ್ ಹರಾಜು ನೆರವಾಗಬಹುದು ಎಂದು ನಿರೀಕ್ಷಿಸಲಾಗಿದೆ. ಮರಳು ಬ್ಲಾಕ್‌ಗಳನ್ನು ಸರ್ಕಾರ ಹರಾಜಿಗಿಟ್ಟಿದೆಯಾದರೂ ಪರಿಸರ ಅನುಮೋದನೆ ದೊರೆಯುವುದು ವಿಳಂಬವಾಗಬಹುದು ಎಂದು ಉನ್ನತ ಮಟ್ಟದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಹೀಗಾಗಿ ಹರಾಜು ಪ್ರಕ್ರಿಯೆಯ ಕಾಲಾವಧಿಯನ್ನು ವಿಸ್ತರಿಸಲಾಗಿದೆ ಎಂದು ಗೊತ್ತಾಗಿದೆ.**

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
| ಗುಳಿಕ ಕಾಲ | ಬೆಳಿಗ್ಗೆ | 07:30 ರಿಂದ 09:00 |
| ಯಮಗಂಡ ಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ** ಆರೋಗ್ಯ ಚೆನ್ನಾಗಿರುತ್ತದೆ. ವಿಳಂಬಿತ ಪಾವತಿಗಳನ್ನು ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ. ನಿಮ್ಮ ಸಂತೋಷವನ್ನು ನಿಮ್ಮ ಪೋಷಕರ ಜೊತೆ ಹಂಚಿಕೊಳ್ಳಿ.

**ವೃಷಭ** ಸಂತಸದ ಪ್ರಯಾಣ ಮತ್ತು ಸಾಮಾಜಿಕ ಕಾರ್ಯಕ್ರಮಗಳು ನಿಮಗೆ ಆರಾಮ ಮತ್ತು ಸಂತೋಷ ತರುತ್ತದೆ. ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ.

**ಮಿಥುನ** ನಿಮ್ಮ ಕೆಲಸದಲ್ಲಿ ಪ್ರಮುಖ ನಿರ್ಧಾರ ತೆಗೆದುಕೊಳ್ಳಬೇಕಾಗಬಹುದು. ಸಕಾಲಿಕ ಮತ್ತು ಶೀಘ್ರ ಕ್ರಮ ನಮ್ಮನ್ನು ಉಳಿದವರಿಗಿಂತ ಮುಂದಿಡುತ್ತದೆ. ಕೆಲವು ಉಪಯುಕ್ತ ಸಲಹೆಗಳಿಗಾಗಿ ನಿಮ್ಮ ಕೈಕೆಳಗಿನವರಿಗೆ ಕಿವಿಗೊಡಬಹುದು.

**ಕರ್ಕಾಟಕ** ರಾತ್ರಿಯ ವೇಳೆಯಲ್ಲಿ ಇಂದು ನೀವು ಮನೆಯ ಸದಸ್ಯರಿಂದ ದೂರ ಹೋಗಿ ನಿಮ್ಮ ಮನೆಯ ಟೆರೇಸ್ ಅಥವಾ ಯಾವುದೇ ಉದ್ಯಾನದಲ್ಲಿ ಸುತ್ತಲೂ ಇಷ್ಟಪಡುತ್ತೀರಿ.

**ಸಿಂಹ** ಧ್ಯಾನ ಪರಿಹಾರ ತರುತ್ತದೆ. ಇಂದು ನಿಮಗೆ ಹಣದ ಲಾಭವಾಗುವ ಪೂರ್ತಿ ಸಾಧ್ಯತೆ ಇದೆ, ಆದರೆ ಇದರೊಂದಿಗೆ ನೀವು ದಾನವನ್ನು ಸಹ ಮಾಡಬೇಕು ಏಕೆಂದರೆ ಇದರಿಂದ ನಿಮಗೆ ಮಾನಸಿಕ ಶಾಂತಿ ಸಿಗುತ್ತದೆ.

**ಕನ್ಯಾ** ಅನುಮಾನದ ಪ್ರಕೃತಿ ನಿಮಗೆ ಸೋಲಿನ ಮುಖ ತೋರಿಸಬಹುದು. ವೆಚ್ಚಗಳನ್ನು ನಿಯಂತ್ರಿಸಲು ಪ್ರಯತ್ನಿಸಿ, ತುಂಬಾ ಖರ್ಚು ಮಾಡಬೇಡಿ. ಮನೆಯಲ್ಲಿನ ಬದಲಾವಣೆಗಳು ನಿಮ್ಮನ್ನು ಭಾವುಕರನ್ನಾಗಿಸಬಹುದು.

**ತುಲಾ** ನೀವು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಿದಲ್ಲಿ ಖಿನ್ನತೆಗೊಳಗಾಗಬೇಡಿ. ಆಹಾರದ ಸ್ವಾದಕ್ಕೆ ಉಪ್ಪು ಬೇಕಾದ ಹಾಗೆ ಅತೃಪ್ತಿಯಿಂದ ಮಾತ್ರ ನೀವು ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ.

**ವೃಶ್ಚಿಕ** ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ನೀವು ಸಾಲ ತೆಗೆದುಕೊಳ್ಳಲು ಹೊರಟಿದ್ದರೆ ಮತ್ತು ಈ ಕೆಲಸದಲ್ಲಿ ದೀರ್ಘಕಾಲ ತೊಡಗಿಸಿಕೊಂಡಿದ್ದರೆ, ಇಂದು ನೀವು ಸಾಲ ಪಡೆಯಬಹುದು.

**ಧನಸ್ಸು** ನಿಮ್ಮ ಚೈತನ್ಯವನ್ನು ಪುನಃ ಸಂಪಾದಿಸಲು ವಿಶ್ರಾಂತಿ ತೆಗೆದುಕೊಳ್ಳಿ. ನೀವು ಜೀವನದಲ್ಲಿ ಹಣದ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದಿಲ್ಲ ಆದರೆ ಇಂದು ನೀವು ಹಣದ ಮೌಲ್ಯವನ್ನು ಅರ್ಥಮಾಡಿಕೊಳ್ಳಬಹುದು.

**ಮಕರ** ನಿಮ್ಮ ಪ್ರೀತಿಪಾತ್ರರ ಅತೃಪ್ತಿಗೆ ನಿಮ್ಮ ನಗು ನಿಮ್ಮ ಅತ್ಯುತ್ತಮ ಔಷಧವಾಗಿದೆ. ಇಂದು ನಿಮಗೆ ನಿಮ್ಮ ಕುಟುಂಬದ ಬೆಂಬಲದಿಂದ ನೀವು ಚೆನ್ನಾಗಿ ಕೆಲಸ ಮಾಡುತ್ತಿದ್ದೀರಿ ಎಂದು ಅರಿವಾಗುತ್ತದೆ.

**ಕುಂಭ** ದೂರದ ಸಂಬಂಧಿಗಳಿಂದ ಅನಿರೀಕ್ಷಿತವಾದ ಒಳ್ಳೆಯ ಸುದ್ದಿ ಇಡೀ ಕುಟುಂಬಕ್ಕೆ ಸಂತೋಷದ ಕ್ಷಣಗಳನ್ನು ತರುವುದು. ಪ್ರೇಮ ಧನಾತ್ಮಕ ಕಂಪನಗಳನ್ನು ತೋರಿಸುತ್ತದೆ.

**ಮೀನ** ಪಾಲುದಾರರು ನಿಮ್ಮ ಯೋಜನೆಗಳಿಗೆ ಅಂಟಿಕೊಂಡಿರುವಂತೆ ಮಾಡುವಲ್ಲಿ ನೀವು ಸಮಸ್ಯೆಗಳನ್ನು ಹೊಂದಿರುತ್ತೀರಿ. ಹೆಚ್ಚಿನ ವಿಷಯಗಳು ನೀವು ಬಯಸಿದಂತೆ ಅಗುವ ?ಒಂದು ಉಜ್ವಲವಾದ ಹಾಸ್ಯದಿಂದ ತುಂಬಿದ ದಿನ.

## ಜಮ್ಮು ಕಾಶ್ಮೀರ ಭಾರತದ ಅವಿಭಾಜ್ಯ; ಎ.ಎಸ್ ಪಾಟೀಲ್ ನಡಹಳ್ಳಿ

• ಉದಯವಾಹಿನಿ ಮುದ್ದೇಬಿಹಾಳ

1947ರಿಂದ ಜಮ್ಮು ಕಾಶ್ಮೀರ ಹೊತ್ತಿ ಉರಿಯುತ್ತಿತ್ತು. ಮೋದಿಯವರು ಪ್ರಧಾನಿಯಾದ 10 ವರ್ಷಗಳಲ್ಲಿ ಅಲ್ಲಿ ಶಾಂತಿ ನೆಲೆಸಿದೆ. ಅಲ್ಲಿನ ಸ್ಥಳೀಯರು ಉಗ್ರರಿಗೆ, ಪ್ರತ್ಯೇಕವಾದಿಗಳಿಗೆ ಬೆಂಬಲಿಸುವುದನ್ನು ಕಡಿಮೆ ಮಾಡಿದ್ದಾರೆ. ಪೆಹಲ್ಗಾಮ್ ಘಟನೆ ಕುರಿತು ಅಲ್ಲಿನ ಸಿಎಂ ಓಮರ್ ಅಬ್ದುಲ್ಲಾ ವಿಧಾನಸಭೆಯಲ್ಲಿ ಆಡಿರುವ ಹೃದಯಾಂತರಾಳದ ಮಾತುಗಳು ಮನ ಕಲಕುವಂತಿದ್ದು ಭಾರತೀಯರು ಮೆಚ್ಚುವ ರೀತಿಯಲ್ಲಿವೆ. ಶೇ.95 ಪ್ರಮಾಣದಲ್ಲಿರುವ ಮುಸಲ್ಮಾನರು ಬೀದಿಗಿಳಿದು ಘಟನೆ ಖಂಡಿಸಿದ್ದಾರೆ. ಉಗ್ರರಿಂದ ಹತ್ಯೆಗೀಡಾದ 26 ಹಿಂದುಗಳಿಗೆ ಶ್ರೀನಗರದ ಜಾಮಿಯಾ ಮಸೀದಿಯಲ್ಲಿ ಶ್ರದ್ಧಾಂಜಲಿ ಸಲ್ಲಿಸಿ ಮೌನಾಚರಿಸಿದ್ದಾರೆ.

ಮೋದಿಜಿ ಭಯೋತ್ಪಾದಕತೆ ಮಟ್ಟಹಾಕಿ ಪಾಕಿಸ್ತಾನ ಉಗ್ರರ ಸದೆಬಡಿಯಿರಿ ನಿಮ್ಮ ಜೊತೆ ನಾವಿದ್ದೇವೆ ಎಂದು ಬೆಂಬಲಿಸಿದ್ದಾರೆ. ಇದು ಮೋದಿ ನಾಯಕತ್ವದಲ್ಲಿ ಆಗಿರುವ ಬದಲಾವಣೆ.


ಉದಯವಾಹಿನಿ ಚಿತ್ರ

ಅಲ್ಲಿನ ಮುಸ್ಲೀಮರಲ್ಲಿ ಮೋದಿ ಬಗ್ಗೆ ಇರುವ ನಂಬಿಕೆ, ವಿಶ್ವಾಸ ತೋರಿಸುತ್ತದೆ. ಜಮ್ಮು ಕಾಶ್ಮೀರ ಭಾರತದ ಅವಿಭಾಜ್ಯ ಅಂಗವಾಗಿರುವುದನ್ನು ಈ ದೇಶದ ಮುಸ್ಲೀಮರು ಅರಿತುಕೊಳ್ಳಬೇಕು. ಪಾಕಿಸ್ತಾನದ ಭಯೋತ್ಪಾದಕ ಘಟನೆ ಖಂಡಿಸಬೇಕು. ಮೋದಿ ಪರ ನಿಲ್ಲುವ ಅಭಿಪ್ರಾಯಗಳು ಬೀದಿಯಲ್ಲಿ ವ್ಯಕ್ತವಾಗಬೇಕು. ಇದು ಹಿಂದು, ಮುಸ್ಲೀಮರ ಒಗ್ಗಟ್ಟು ತೋರಿಸಲು ಇರುವ ಸದವಕಾಶ. ಸಿದರಾಮಯ್ಯ, ಸಂತೋಷ ಲಾಡ್, ಬಿ.ಕೆ.ಹರಿಪ್ರಸಾದ, ಪ್ರಿಯಾಂಕ ಗಾಂಧಿ ಅವರ ಪತಿ ರಾಬರ್ಟ್ ವಾದ್ರಾ ಅವರಂಥವರ ಮಾತು ಕೇಳಲು ಹೋಗಬೇಡಿ. ಭಾರತದ ಕಾಂಗ್ರೆಸ್ಸು ಈಗ ಪಾಕಿಸ್ತಾನಿಯರ ಕಾಂಗ್ರೆಸ್ಸಾಗಿ ಬದಲಾಗುತ್ತಿದೆ. ಸಿದರಾಮಯ್ಯನವರಂತಹ ಹಿರಿಯ ರಾಜಕಾರಣಿಯ ಹೇಳಿಕೆಗಳು ದೇಶದ್ರೋಹಕ್ಕೆ ಸಮನಾದದ್ದಾಗಿದೆ.

**ಹಿರಿಯ ರಾಜಕಾರಣಿಯ ಹೇಳಿಕೆಗಳು ದೇಶದ್ರೋಹಕ್ಕೆ ಸಮ**

ಶಾಸಕರಾಗುವಾಗ ತೆಗೆದುಕೊಳ್ಳುವ ಪ್ರತಿಜ್ಞೆ ನೆನಪಲ್ಲಿಟ್ಟುಕೊಂಡು ಸಚಿವ, ಶಾಸಕರು ಮಾತನಾಡಬೇಕು ಎಂದು ಎ.ಎಸ್ ಪಾಟೀಲ್ ನಡಹಳ್ಳಿ ಹೇಳಿದರು.

• ಜಿಲ್ಲೆಯಲ್ಲಿ ಗೃಹಲಕ್ಷ್ಮೀ ಯೋಜನೆಯ 7151 ಫಲಾನುಭಿವಿಗಳ ಅರ್ಜಿಗಳು ಬಾಕಿ: ಅಶೋಕ್ ಕೊಡವೂರು

# ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಪ್ರಗತಿ ಪರಿಶೀಲನಾ ಸಭೆ

• ಉದಯವಾಹಿನಿ ಉಡುಪಿ

ಸರಕಾರದ ಮಹತ್ವಾಕಾಂಕ್ಷಿ ಯೋಜನೆಗಳಾದ ಪಂಚ ಗ್ಯಾರಂಟಿಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ, ಜಿಲ್ಲೆಯ ಪ್ರತಿಯೊಬ್ಬ ಅರ್ಹರಿಗೂ ಇದರ ಲಾಭ ಪಡೆಯುವಂತೆ ನೋಡಿಕೊಳ್ಳಬೇಕು ಎಂದು ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷ ಅಶೋಕ್ ಕೊಡವೂರು ಹೇಳಿದರು.

ಅವರು ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾ ಪಂಚಾಯತ್ ಡಾ. ವಿ.ಎಸ್ ಆಚಾರ್ಯ ಸಭಾಂಗಣದಲ್ಲಿ ನಡೆದ ಉಡುಪಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಪಂಚ ಗ್ಯಾರಂಟಿ ಯೋಜನೆಗಳು ಜಿಲ್ಲೆಯಲ್ಲಿ ಬಹುತೇಕ ಅರ್ಹ ಫಲಾನುಭವಿಗಳು ಲಾಭ ಪಡೆಯುತ್ತಿದ್ದಾರೆ. ಯೋಜನೆಗೆ ಅರ್ಜಿ ಸಲ್ಲಿಸಿದ ಕೆಲವೇ ಜನರಿಗೆ ಕೆಲವು ತಾಂತ್ರಿಕ ಕಾರಣಗಳಿಂದಾಗಿ ಲಾಭ ಪಡೆಯಲು ಸಮಸ್ಯೆಗಳು ಉಂಟಾಗಿವೆ. ಇವುಗಳನ್ನು ಆದ್ಯತೆಯ ಮೇಲೆ ಅರ್ಹರಿದ್ದಲ್ಲಿ ಫಲಾನುಭವಿಗಳನ್ನಾಗಿಸಬೇಕು. ಪ್ರತಿಯೊಂದು ಇಲಾಖೆಗಳಲ್ಲಿಯೂ ಯೋಜನೆಯ ಸಮಸ್ಯೆಗಳು ಬಗೆಹರಿಸಲು ಅಧಿಕಾರಿಗಳನ್ನು ನೇಮಕಮಾಡುವುದು ಸೂಕ್ತ ಎಂದರು. ಗೃಹಲಕ್ಷ್ಮೀ ಯೋಜನೆಯಡಿ ನೋಂದಣಿಯಾದವರಲ್ಲಿ ಐ.ಟಿ ಮತ್ತು ಜಿ.ಎಸ್.ಟಿ ಪಾವತಿದಾರರು ಎಂಬ ಕಾರಣಕ್ಕಾಗಿ ಫಲಾನುಭವಿಗಳು ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ. ಜಿಲ್ಲೆಯಲ್ಲಿ ಐ.ಟಿ, ಜಿ.ಎಸ್.ಟಿ, ಇ-ಕೆವೈಸಿ ಮ್ಯಾಪಿಂಗ್ ಸೇರಿದಂತೆ ಒಟ್ಟು 7151 ಫಲಾನುಭವಿಗಳ ಅರ್ಜಿಗಳು ಬಾಕಿ ಇವೆ.


ಉದಯವಾಹಿನಿ ಚಿತ್ರ

> ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಯಾದ ಕುಟುಂಬದ ಯಜಮಾನಿ ಮರಣ ಹೊಂದಿದ್ದಲ್ಲಿ ಯಜಮಾನಿ ಬದಲಾವಣೆಗೆ, ಹೊಸ ಮನೆ ನಿರ್ಮಾಣವಾದಾಗ ಹೊಸ ಅರ್ಜಿಯ ಸೇರ್ಪಡೆಗೆ, ರೇಷನ್ ಕಾರ್ಡ್ ಇಲ್ಲದವರಿಗೆ ಹೊಸದಾಗಿ ರೇಷನ್ ಕಾರ್ಡ್ ಪಡೆದು ಗೃಹಲಕ್ಷ್ಮೀ ಯೋಜನೆಗೆ ಹೊಸದಾಗಿ ಅರ್ಜಿ ಸಲ್ಲಿಸಲು ತಂತ್ರಾಂಶದಲ್ಲಿ ಅವಕಾಶವಿರುವುದಿಲ್ಲ. ಈ ಎಲ್ಲಾ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವುದರೊಂದಿಗೆ ಅರ್ಹರಿಗೆ ಯೋಜನೆಯ ಸೌಲಭ್ಯ ದೊರಕುವಂತೆ ಮಾಡಲಾಗುವುದು **-ಅಶೋಕ್ ಕೊಡವೂರು, ಜಿಲ್ಲಾ ಅಧ್ಯಕ್ಷ**

ಈ ಬಗ್ಗೆ ಪರಿಶೀಲಿಸಿ ಅರ್ಹರಿದ್ದಲ್ಲಿ ಅವರಿಗೂ ಗ್ಯಾರಂಟಿ ಯೋಜನೆ ತಲುಪಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಗೃಹಜ್ಯೋತಿ ಯೋಜನೆಯಡಿ ವಿದ್ಯುತ್ ಗ್ರಾಹಕ ಒಂದು ಆರ್ಥಿಕ ವರ್ಷದಲ್ಲಿ ಬಳಸಿದ ಸರಾಸರಿ ವಿದ್ಯುತ್ ಯೂನಿಟ್‌ಗೆ ಶೇ. 10 ಯೂನಿಟ್ ಸೇರಿಸಿ, ಗರಿಷ್ಠ 200 ಯೂನಿಟ್ ವರೆಗೆ ನಿಗಧಿತ ಉಚಿತ ಯೂನಿಟ್‌ಗಳ ವಿದ್ಯುತ್ ಬಳಕೆಗೆ ಅವಕಾಶವಿದೆ. ಕೆಲವು ಗ್ರಾಹಕರು ಬೇಸಿಗೆ ಕಾಲದ ಹಿನ್ನೆಲೆ, ನಿಗಧಿಪಡಿಸಿದ ಯೂನಿಟ್‌ಗಿಂತ ಹೆಚ್ಚು ವಿದ್ಯುತ್ ಬಿಲ್ ಬಂದಿದ್ದು, ಪಾವತಿಗೆ ಸ್ವಲ್ಪ ವಿಳಂಬವಾದ ಹಿನ್ನೆಲೆ, ಕರೆಂಟ್ ಸಂಪರ್ಕವನ್ನು ಫ್ಯೂಸ್ ತೆಗೆಯುವ ಮೂಲಕ ಕಡಿತಗೊಳಿಸುತ್ತಿದ್ದಾರೆ. ಇದರಿಂದಾಗಿ ಗೃಹಜ್ಯೋತಿ ಯೋಜನೆಯಿಂದ ರದ್ದುಪಡಿಸಿದ್ದಾರೆ ಎಂದು ತಿಳಿದುಕೊಳ್ಳುತ್ತಿದ್ದಾರೆ. ಈ ಬಗ್ಗೆ ಫಲಾನುಭವಿಗಳಿಗೆ ಸರಿಯಾದ ಮಾಹಿತಿ ನೀಡಬೇಕು. ಹೆಚ್ಚುವರಿ ಬಳಕೆಯ ಹಣ ತುಂಬಲು ಸಮಯಾವಕಾಶ ಮಾಡಿಕೊಡಬೇಕು ಎಂದು ಮೆಸ್ಕಾಂ ಇಲಾಖೆಯ ಅಭಿಯಂತರರಿಗೆ ತಿಳಿಸಿದರು.

> ಜನಸಾಮಾನ್ಯರಿಗೆ ಪಂಚ ಗ್ಯಾರಂಟಿ ಯೋಜನೆಗಳ ಕುರಿತಂತೆ ಯಾವುದೇ ಸಮಸ್ಯೆಗಳನ್ನು ಹೊತ್ತು ತಂದಲ್ಲಿ ಅದನ್ನು ಸಮಾಧಾನಯುತವಾಗಿ ಬಗೆಹರಿಸಲು ಅಧಿಕಾರಿಗಳು ಸೂಕ್ತ ಕ್ರಮ ವಹಿಸಬೇಕು. ನ್ಯಾಯಬೆಲೆ ಅಂಗಡಿಗಳಲ್ಲಿ ಬಯೋಮೆಟ್ರಿಕ್ ನೀಡಿ, ಪಡಿತರವನ್ನು ಪಡೆಯಬೇಕಾಗಿದ್ದು, ಇದಕ್ಕೆ ಪದೇ ಪದೇ ಸರ್ವರ್ ಸಮಸ್ಯೆ ಉಂಟಾಗುತ್ತಿದ್ದು, ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಸರಿಪಡಿಸಲು ಕ್ರಮವಹಿಸಬೇಕು **-ಪ್ರತೀಕ್ ಬಾಯಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ**

ಸರಕಾರ ಮಂಗಳೂರು ವಿಭಾಗಕ್ಕೆ ನೂರು ಹೊಸದಾಗಿ ಬಸ್‌ಗಳನ್ನು ಶೀಘ್ರದಲ್ಲಿಯೇ ನೀಡಲಿದ್ದು, ಅವುಗಳಲ್ಲಿ 40 ಬಸ್‌ಗಳು ಜಿಲ್ಲೆಗೆ ಆಗಮಿಸಲಿದೆ. ಅಗತ್ಯವಿರುವ ಕಡೆ ಇವುಗಳ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದ ಅವರು, ಉಡುಪಿ ನಗರದ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣವನ್ನು ಆಧುನಿಕ ಉಪಕರಣಗಳನ್ನು ಬಳಸಿ ನಿರ್ಮಾಣ ಮಾಡಲಾಗಿದೆ. ಬಸ್ ನಿಲ್ದಾಣದಲ್ಲಿ ಎಸ್ಕಲೇಟರ್ ನಿರ್ವಹಣೆ ಕಳಪೆಯಾಗಿದ್ದು, ವ್ಯವಸ್ಥಿತ ರೀತಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು ಹಾಗೂ ಶೌಚಾಲಯದ ಶುಚಿತ್ವವನ್ನು ಕಾಪಾಡಿಕೊಳ್ಳಲು ಸೂಕ್ತ ಕ್ರಮ ವಹಿಸಬೇಕು ಎಂದರು.


### ತಾಂತ್ರಿಕ ತೊಡಕು

ಗೃಹಲಕ್ಷ್ಮೀ ಯೋಜನೆಯ ಹಣವು ಪ್ರಾರಂಭದ ಮೂರು, ನಾಲ್ಕು ಕಂತುಗಳು ಪಾವತಿ ನಂತರ ಬಾಕಿ ಕಂತುಗಳ ಹಣ ಪಾವತಿಯಾಗುತ್ತಿಲ್ಲ ಎಂಬ ದೂರುಗಳನ್ನು ತಳಮಟ್ಟದ ಕೆಲವು ಫಲಾನುಭವಿಗಳು ತಾಲ್ಲೂಕು ಮಟ್ಟದ ಗ್ಯಾರಂಟಿ ಸಮಿತಿ ಸಭೆಯ ಮುಂದಿಡುತ್ತಿದ್ದಾರೆ ಯಾವ ಕಾರಣದಿಂದ ಹಣ ಜಮೆಯಾಗುತ್ತಿಲ್ಲ ಎಂಬ ಬಗ್ಗೆ ಫಲಾನುಭವಿಗಳಿಗೆ ಮಾಹಿತಿ ನೀಡುವುದರೊಂದಿಗೆ ಯೋಜನೆಗಳು ತಲುಪಲು ಇರುವ ತಾಂತ್ರಿಕ ತೊಡಕುಗಳನ್ನು ನಿವಾರಿಸುವುದರೊಂದಿಗೆ ಯೋಜನೆಯು ಅರ್ಹ ಫಲಾನುಭವಿಗಳಿಗೆ ತಲುಪುವಂತಾಗಬೇಕು ಎಂದರು.

## ಜವನಗೊಂಡನಹಳ್ಳಿ: ಪಿಂಚಣಿ ಅದಾಲತ್ ಕಾರ್ಯಕ್ರಮ

• ಉದಯವಾಹಿನಿ ಚಿತ್ರದುರ್ಗ

ಹಿರಿಯೂರು ತಾಲ್ಲೂಕಿನ ಜವನಗೊಂಡನಹಳ್ಳಿ ಹೋಬಳಿಯ ನಾಡಕಚೇರಿ ಕಾರ್ಯಾಲಯದಲ್ಲಿ ಪಿಂಚಣಿ ಅದಾಲತ್ ಕಾರ್ಯಕ್ರಮ ನಡೆಯಿತು. ಕಂದಾಯ ಇಲಾಖೆ ವತಿಯಿಂದ ಚಿತ್ರದುರ್ಗ ಉಪವಿಭಾಗಾಧಿಕಾರಿ ಮಹೆಬೂಬ್ ಜಿಲಾನಿ ಖುರೇಷಿ ಅವರ ಅಧ್ಯಕ್ಷತೆಯಲ್ಲಿ ನಡೆದ ಪಿಂಚಣಿ ಅದಾಲತ್‌ನಲ್ಲಿ ಸಾಮಾಜಿಕ ಭದ್ರತಾ ಯೋಜನೆಯ ಫಲಾನುಭವಿಗಳ ಕುಂದು ಕೊರತೆ ಆಲಿಸಿ, ಹೊಸದಾಗಿ ಪಿಂಚಣಿ ಮಂಜೂರಾತಿ ಆದೇಶಪ್ರತಿಗಳನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ ಹಿರಿಯೂರು ತಹಶೀಲ್ದಾರ್ ರಾಜೇಶ್, ಪ್ರಭಾರಿ ನಾಡಕಚೇರಿ ತಹಶೀಲ್ದಾರ್ ಶಿವಕುಮಾರ್,



ಉದಯವಾಹಿನಿ ಚಿತ್ರ

ಕರ್ನಾಟಕ ಗ್ರಾಮೀಣ ಬ್ಯಾಂಕಿನ ವ್ಯವಸ್ಥಾಪಕರು ಹಾಗೂ ಹೋಬಳಿಯ ಎಲ್ಲಾ ಗ್ರಾಮಾಡಳಿತ ಅಧಿಕಾರಿಗಳು ಮತ್ತು ನಾಡಕಚೇರಿ ಸಿಬ್ಬಂದಿಗಳು, ಸಾಮಾಜಿಕ ಭದ್ರತಾ ಯೋಜನೆಯ ಫಲಾನುಭವಿಗಳು ಇದ್ದರು.

## ಚೆನ್ನೈ - ಸೂರತ್ ರಸ್ತೆಗೆ ಸಂಪರ್ಕ ಕಲ್ಪಿಸಲು ಒತ್ತಾಯ

• ಉದಯವಾಹಿನಿ ವಡಗೇರಾ



ಸೂರತ್ ಚೆನ್ನೈ ಭಾರತ್ ಮಾಲ್ ರಸ್ತೆ ನಿರ್ಮಾಣ ಹಂತದಲ್ಲಿದ್ದು ತಾಲ್ಲೂಕು ಕೇಂದ್ರದಲ್ಲಿ ಹೆದ್ದಾರಿ ರಸ್ತೆ ನಿರ್ಮಿಸುವಂತೆ ರಾಜ್ಯ ರೈತ ಸಂಘ ಹಸಿರು ಸೇನೆ ತಾಲ್ಲೂಕು ಗೌರವಾಧ್ಯಕ್ಷ ಶರಣು ಜಡಿ ವಡಗೇರಾ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಖಾನಾಪುರ ಹಾಗೂ ಬೆಂಡೆಬೆಂಬಳಿ ಗ್ರಾಮಗಳಲ್ಲಿ ಭಾರತ್ ಮಾಲ ರಸ್ತೆಯ ಸಂಪರ್ಕ ಕಲ್ಪಿಸಿದ್ದಾರೆ ಆದರೆ ನೂತನ ತಾಲ್ಲೂಕು ಕೇಂದ್ರ ವಡಗೇರಾ ಪಟ್ಟಣದಲ್ಲಿ ರಸ್ತೆ ಸಂಪರ್ಕ ನೀಡದೆ ಕೇಂದ್ರ ಸರಕಾರ ಮಲತಾಯಿ ಧೋರಣೆ ತೋರಿದೆ ಈ ತಾಲ್ಲೂಕು ಕೇಂದ್ರಕ್ಕೆ ಸುಮಾರು 60 ಕ್ಕೂ ಹೆಚ್ಚು ಹಳ್ಳಿಗಳು ಒಳಪಡುತ್ತಿದ್ದು ಈ ಭಾಗದ ಜನರು ರಸ್ತೆಗಾಗಿ ಜಮೀನು ಕಳೆದುಕೊಂಡಿದ್ದಾರೆ ಆದರೆ ಅವರೇ ಓಡಾಡಲು ಬಾರದಂತ ಪರಿಸ್ಥಿತಿ ನಿರ್ಮಾಣವಾಗಿದೆ ತಾಲ್ಲೂಕು ಕೇಂದ್ರದಿಂದ ರಸ್ತೆ ಸಂಪರ್ಕ ಕಲ್ಪಿಸಿದ್ದೆ ಆದಲ್ಲಿ ಈ ಭಾಗದ ಜನರಿಗೆ ತುಂಬಾ ಅನುಕೂಲವಾಗಲಿದೆ ಈ ಕುರಿತು ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಪುನರ್ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ರಾಜ್ಯ ರೈತ ಸಂಘ ಹಸಿರು ಸೇನೆ ತಾಲ್ಲೂಕು ಗೌರವಾಧ್ಯಕ್ಷ ಶರಣು ಜಡಿ ವಡಗೇರಾ ಒತ್ತಾಯಿಸಿದ್ದಾರೆ.

## ಬಸ್‌ನಲ್ಲಿ ನಮಾಜ್: ಚಾಲಕ ಅಮಾನತು

• ಉದಯವಾಹಿನಿ ಹಾವೇರಿ

ಹಾನಗಲ್‌ನಿಂದ ವಿಶಾಲಗಡಕ್ಕೆ ಹೊರಟಿದ್ದ ಬಸ್ಸನ್ನು ಮಾರ್ಗ ಮಧ್ಯೆಯೇ ನಿಲ್ಲಿಸಿ ಪ್ರಯಾಣಿಕರ ಆಸನದಲ್ಲಿ ಕುಳಿತು ನಮಾಜ್ ಮಾಡಿ ಕರ್ತವ್ಯಲೋಪ ಎಸಗಿದ್ದ ಆರೋಪದಡಿ ಚಾಲಕ ಎ.ಆರ್. ಮುಲ್ಲಾ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಹಾನಗಲ್ ಡಿಪೊದ ಚಾಲಕ ಮುಲ್ಲಾ ಅವರು ಬಸ್‌ನಲ್ಲಿ ನಮಾಜ್ ಮಾಡಿದ್ದ ದೃಶ್ಯದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಅದನ್ನು ಗಂಭೀರವಾಗಿ ಪರಿಗಣಿಸಿದ್ದ ಜಿಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿ ವಿಜಯಕುಮಾರ್ ಅವರು ತನಿಖೆಗೆ ಸೂಚನೆ ನೀಡಿದ್ದರು. ತನಿಖೆ ನಡೆಸಿದ್ದ ಭದ್ರತಾ ವಿಭಾಗದ ಅಧಿಕಾರಿಗಳು, ಪ್ರಾಥಮಿಕ ವರದಿ ನೀಡಿದ್ದಾರೆ. ಅದನ್ನು ಆಧರಿಸಿ ಚಾಲಕ ಮುಲ್ಲಾ ಅವರನ್ನು ಸೇವೆಯಿಂದ ಅಮಾನತು ಮಾಡಿ ನಿಯಂತ್ರಣಾಧಿಕಾರಿ ಅವರು ಆದೇಶ ಹೊರಡಿಸಿದ್ದಾರೆ.

## ಹೊಸ ಬಡಾವಣೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಒತ್ತಾಯ

• ಉದಯವಾಹಿನಿ ವಡಗೇರಾ

ತಾಲ್ಲೂಕಿನ ಹೊರಟೂರು ಗ್ರಾಮದ ಹೊಸ ಬಡಾವಣೆಯಲ್ಲಿ ವಿದ್ಯುತ್ ಕಂಬ ಟಿಸಿ ಅಳವಡಿಸುವಂತೆ ಸಾಮಾಜಿಕ ಹೋರಾಟಗಾರ ಹಣಮಂತರಾಯಗೌಡ ಮಾಲಿ ಪಾಟೀಲ ತೇಕರಾಳ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಹೊರಟೂರು ಗ್ರಾಮದ ಹೊಸ ಬಡಾವಣೆಯಲ್ಲಿ ಸುಮಾರು 30 ಕ್ಕೂ ಮನೆಗಳಿದ್ದು ಅಲ್ಲಿನ ನಿವಾಸಿಗಳಿಗೆ ಸಮರ್ಪಕ ವಿದ್ಯುತ್ ಸಂಪರ್ಕವಿಲ್ಲ ದೂರದ ವಿದ್ಯುತ್ ಕಂಬಗಳಿಂದ ಕಟ್ಟಿಗೆಗಳನ್ನು ನೆಟ್ಟು ಅಲ್ಲಿಂದಲೇ ಬಹಳಷ್ಟು ಜನ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದಾರೆ ಇನ್ನು ಕೆಲವರು ಕತ್ತಲಲ್ಲಿಯೆ ಜೀವನ ನಡೆಸುವಂತಾಗಿದೆ ಎಂದು ಅಲ್ಲಿನ ನಿವಾಸಿಗಳು ದೂರಿದ್ದಾರೆ .

ಹಲವು ಬಾರಿ ಜಸ್ಕಾಂ ಅಧಿಕಾರಿಗಳ ಗಮನಕ್ಕೆ ತಂದರು ಕೂಡ ಯಾವುದೇ ಪ್ರಯೋಜನವಾಗಿಲ್ಲ ಎನ್ನುತ್ತಾರೆ ಸ್ಥಳೀಯ ನಿವಾಸಿ ಭೀಮಮ್ಮ ಈ ಮೊದಲು ನಾವುಗಳು ಪ್ರತಿ ತಿಂಗಳು


ಉದಯವಾಹಿನಿ ಚಿತ್ರ

ವಿದ್ಯುತ್ ಬಿಲ್ ಪಾವತಿಸುತ್ತಾ ಬಂದಿದ್ದೇವೆ ಸಮರ್ಪಕ ವಿದ್ಯುತ್ ಇಲ್ಲದ ಕಾರಣ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡಲು ತೀವ್ರ ತೊಂದರೆಯಾಗುತ್ತಿದೆ ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಎಚ್ಚೆತ್ತುಕೊಂಡು ತಕ್ಷಣವೇ ಈ ಬಡಾವಣೆಗೆ ಹೊಸ ಕಂಬ ಹಾಗೂ ಟಿಸಿ ಅಳವಡಿಸುವಂತೆ ಸಾಮಾಜಿಕ ಹೋರಾಟಗಾರ ಹಣಮಂತರಾಯಗೌಡ ಮಾಲಿ ಪಾಟೀಲ್ ತೇಕರಾಳ, ರವಿಗೌಡ ಲಿಂಗೇರಿ, ಹಾಗೂ ಸ್ಥಳೀಯ ನಿವಾಸಿಗಳು ಒತ್ತಾಯಿಸಿದ್ದಾರೆ.

## ಸಾಮೂಹಿಕ ವಿವಾಹದಿಂದ ದುಂದು ವೆಚ್ಚಕ್ಕೆ ಕಡಿವಾಣ: ಶಾಸಕ

• ಉದಯವಾಹಿನಿ ದಾವಣಗೆರೆ

ವೈಭವದ ಮದುವೆಗಳಿಗೆ ಪ್ರೋತ್ಸಾಹ ನೀಡದೆ ಸಾಮೂಹಿಕ ವಿವಾಹಕ್ಕೆ ಹೆಚ್ಚಿನ ಒತ್ತು ನೀಡಿದಾಗ ಮಾತ್ರ ದುಂದುವೆಚ್ಚಗಳಿಗೆ ಕಡಿವಾಣ ಬೀಳಲಿದೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ಹೇಳಿದರು.

ತಾಲ್ಲೂಕಿನ ಹೆಬ್ಬಾಳು ವಿರಕ್ತ ಮಠದಲ್ಲಿ ಬಸವ ಜಯಂತಿ ಅಂಗವಾಗಿ ಆಯೋಜಿಸಿದ್ದ ಸಾಮೂಹಿಕ ವಿವಾಹ ಮಹೋತ್ಸವದಲ್ಲಿ ಮಾತನಾಡಿದರು. ವಿವಾಹದ ಹೆಸರಿನಲ್ಲಿ ಸಾಲ ಮಾಡಿ ಮದುವೆ ಮಾಡುವುದನ್ನು ತಪ್ಪಿಸಲು ಸಾಮೂಹಿಕ ವಿವಾಹ ಉತ್ತಮ ನಡೆ. ಸಾಮೂಹಿಕ ವಿವಾಹ ಏರ್ಪಡಿಸುವುದರಿಂದ ಬಡವ-ಬಲ್ಲಿದ, ಜಾತಿ, ಧರ್ಮದ ಸಂಕೋಲೆಯಿಂದ ಹೊರ


ಉದಯವಾಹಿನಿ ಚಿತ್ರ

ಬರಲು ಸಹಾಯವಾಗುತ್ತದೆ. ಭಾವೈಕ್ಯ ಬಿಂಬಿಸುವ ಇಂತಹ ಕಾರ್ಯಕ್ರಮಗಳು ಪ್ರತಿಯೊಂದು ಗ್ರಾಮಗಳಲ್ಲಿ ನಡೆಯಬೇಕು ಎಂದು ಆಶಿಸಿದರು. ಹೆಬ್ಬಾಳು ಮಠದ ಮಹಾಂತ ಶ್ರೀಗಳು ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸಮಾಜದಲ್ಲಿ ಬದಲಾವಣೆ ತರಲು ಶ್ರಮಿಸುತ್ತಿದ್ದಾರೆ. ಅವರ ಕೆಲಸಗಳಿಗೆ ಎಲ್ಲರೂ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಸಾನ್ನಿಧ್ಯ ವಹಿಸಿದ್ದ ಹೆಬ್ಬಾಳು ವಿರಕ್ತ ಮಠದ ಮಹಾಂತ ರುದ್ರೇಶ್ವರ ಸ್ವಾಮೀಜಿ, 'ಭಾರತೀಯ ಸಂಸ್ಕೃತಿಯಲ್ಲಿ ವಿವಾಹಕ್ಕೆ ಹೆಚ್ಚಿನ ಮಹತ್ವವಿದೆ. ಇಲ್ಲಿನ ಧಾರ್ಮಿಕ ಸಂಸ್ಕಾರಗಳು ವಿಶ್ವಕ್ಕೆ ಮಾದರಿಯಾಗಿವೆ. ನವಜೋಡಿಗಳು ಮುಂದಿನ ಬದುಕಿನಲ್ಲಿ ಪರಸ್ಪರ ಅರಿತು ಬಾಳುವ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು' ಎಂದು ಸಲಹೆ ನೀಡಿದರು. ಎಪಿಎಂಸಿ ಮಾಜಿ ಅಧ್ಯಕ್ಷ ಅಣಜಿ ಎಸ್.ಕೆ. ಚಂದ್ರಣ್ಣ, ಹೆಬ್ಬಾಳು ರುದ್ರಮುನಿ, ಬಾಬಣ್ಣ, ಶೇಖರಪ್ಪ, ಶಿವಪ್ಪ, ಪ್ರಶಾಂತ್ ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

### ಮಹಾಪುರುಷರ ದಾರ್ಶನಿಕ ಪೋಟೊ ತಲೆ ಮೇಲೆ ಇಟ್ಟುಕೊಳ್ಳದೆ

## ಅವರ ಆಚಾರ ವಿಚಾರಗಳು ಜೀವನದಲ್ಲಿ ಅಳವಡಿಸಿಕೊಳ್ಳಿ

• ಉದಯವಾಹಿನಿ, ಚಿಂಚೋಳಿ

ಮಹಾಪುರುಷರ ಪೋಟೋಗಳು ತಲೆ ಮೇಲೆ ಇಟ್ಟುಕೊಳ್ಳುವ ಕಾಲ ಮುಗಿದಿದೆ ಈಗ ಮಹಾಪುರುಷರ ಆಚಾರ ವಿಚಾರಗಳು ತಿಳಿಕೊಂಡು ನಾವೆಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳುವ ಕಾಲ ಬಂದಿದೆ ಎಂದು ಸೇಡಂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಪಂಡಿತ ಬಿ.ಕೆ ಹೇಳಿದರು.

ಪಟ್ಟಣದಲ್ಲಿ ತಾಲ್ಲೂಕಾಡಳಿತ ವತಿಯಿಂದ ಬುಧವಾರ ಬಸವೇಶ್ವರ ವೃತ್ತದಲ್ಲಿ ಹಮ್ಮಿಕೊಂಡಿದ್ದ ಜಗಜ್ಯೋತಿ ಬಸವೇಶ್ವರವರ 892ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ವಿಶೇಷ ಉಪಾನ್ಯಾಸ ನೀಡಿದ ಅವರು, ಬಸವಣ್ಣನವರು ವಚನ ಸಾಹಿತ್ಯ ಮೂಲಕ ಚಳುವಳಿ ಪ್ರಾರಂಭಿಸಿ ದೊಡ್ಡ ಕ್ರಾಂತಿ ಮಾಡಿದ್ದಾರೆ.

ಆಗಿನ ಬಸವೇಶ್ವರ ಅನುಭವ ಮಂಟಪದಲ್ಲಿ 770ಶರಣರು ಇದ್ದರು,ವಚನವೆಂದರೆ ದೊಡ್ಡ ಶಕ್ತಿಯಿದ್ದಂತೆ ವೈಜ್ಞಾನಿಕ ವಿಚಾರಧಾರೆಗಳ ಚಿಂತನೆ ಮಾಡಿ ವಚನಗಳು ಬಸವೇಶ್ವರ ಬರೆದರು,ಶರಣರುವೆಂದರೆ ಜಾತಿ ಬಿಟ್ಟಿದವರು,ಶಾಂತಿ ನೆಮ್ಮದಿ ಸೌಹಾರ್ದತೆ ಬಾಳುವುದು ತೋರಿಸುವವರೆ ನಿಜವಾದ ಶರಣರು,ಮಹಾಪುರುಷರ ಪೋಟೋಗಳು ಮನೆಗಳಲ್ಲಿ ಹಾಕಿ ನೋಡಿದರೆ ಸಿಗಲ್ಲ ಪುಸ್ತಕಗಳನ್ನು ಅಧ್ಯಾಯನ


ಉದಯವಾಹಿನಿ ಚಿತ್ರ

> ಬಸವಣ್ಣನವರು ನಾಡಿನಲ್ಲಿ ಸಮಾನತೆ ಪ್ರತಿಪಾದಿಸಿದವರು ಮತ್ತು ಯಾವುದೇ ಜಾತಿಧರ್ಮ ಅನ್ನದೆ ಸರ್ವರೂ ನಾವೆಲ್ಲರೂ ಒಂದೇ ಎಂಬ ಭಾವನೆ ಜನರಲ್ಲಿ ಮೂಡಿಸಿದರು **-ಸುಬ್ಬಣ್ಣ ಜಮಖಂಡಿ, ತಹಶೀಲ್ದಾರ್**

ಮಾಡಿದಾಗ ಮಾತ್ರ ಶರಣರು ಮಹಾಪುರುಷರು ಸಿಗುತ್ತಾರೆ ಎಂದರು. ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಶರಣು ಪಾಟೀಲ ಮೋತಕಪಳ್ಳಿ,ಪುರಸಭೆ ಅಧ್ಯಕ್ಷ ಆನಂದಕುಮಾರ ಟೈಗರ್ ಮಾತನಾಡಿದರು. ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಜಯಪ್ಪ ಚಾಪಲ್ ಸ್ವಾಗತಿಸಿದರು,ಪ್ರಾಂಶುಪಾಲ ಮಲ್ಲಿಕಾರ್ಜುನ ಪಾಲಾಮೋರ್ ನಿರೂಪಿಸಿದರು,ಪುರಸಭೆ ಮುಖ್ಯಾಧಿಕಾರಿ ಕಾಶಿನಾಥ ಧನ್ನಿ ವಂದಿಸಿದರು. ತಾಪಂ.ಇಓ ಶಂಕರ ರಾಠೋಡ್,ಗ್ರೇಡ್2 ತಹಶೀಲ್ದಾರ್ ವೆಂಕಟೇಶ ದುಗ್ಗನ್,ಆರ್.ಐ ಕೇಶವ ಕುಲಕರ್ಣಿ,ಮಲ್ಲಿಕಾರ್ಜುನ ಬುಶೆಟ್ಟಿ,ಶಂಕರ ಶಿವಪೂರಿ,ನಾಗಶೆಟ್ಟಿ ಭದ್ರಶೆಟ್ಟಿ,ಡಾ.ಮಹ್ಮದ್ ಗಫಾರ್,ವೀರಶೆಟ್ಟಿ ರಾಠೋಡ್,ಚಂದುಲಾಲ್ ರಾಠೋಡ್,ಬಸವರಾಜ ಬೆನೂರ,ಗಿರಿರಾಜ ಸಜ್ಜನ,ಸೇರಿದಂತೆ ಸಮಾಜದ ಮುಖಂಡರು ತಾಲ್ಲೂಕಾ ಮಟ್ಟದ ಅಧಿಕಾರಿಗಳು ಇದ್ದರು. ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ತಾಲ್ಲೂಕಾಡಳಿತ ವತಿಯಿಂದ ಸನ್ಮಾನಿಸಿ ಗೌರವಿಸಿ ಪ್ರಮಾಣಪತ್ರ ವಿತರಿಸಿದರು.

• ಸದ್ಯ ಗ್ರಾಮಸ್ಥರಿಗೆ ಕುಡಿಯುವ ನೀರು ಪೂರೈಸಲು ಒಂದು ಕೈ ಪಂಪ್ ಮಾತ್ರ ಆಧಾರ

# ಬತ್ತಿದ ಜಲಮೂಲ, ಟ್ಯಾಂಕರ್ ನೀರೇ ಗತಿ: ಜನರಿಗೆ ಸಾಕಷ್ಟು ಸಮಸ್ಯೆ

• ಉದಯವಾಹಿನಿ, ಭಾಲ್ಕಿ

ತಾಲ್ಲೂಕಿನಲ್ಲಿ ಸೂರ್ಯನ ಪ್ರಖರಿತ ದಿನದಿಂದ ದಿನಕ್ಕೆ ಹೆಚ್ಚುತ್ತಿರುವಂತ ಜಲಮೂಲಗಳು ನಿಧಾನವಾಗಿವೆ. ಸಾರ್ವಜನಿಕರಿಗೆ, ಜಾನುವಾರುಗಳಿಗೆ ನೀರಿನ ಸಮಸ್ಯೆಯ ಸೂರ್ಯನ ಶಾಖದಂತೆ ಹೆಚ್ಚುತ್ತಿದೆ.

ಮೇ ತಿಂಗಳ ಎರಡು ಮತ್ತು ಮೂರನೇ ವಾರದಲ್ಲಿ ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ನೀರಿನ ಸೆಲೆ ಬತ್ತಿ ಹೋಗಿ ನೀರಿನ ಸಮಸ್ಯೆ ಮತ್ತಷ್ಟು ಉಲ್ಬಣವಾಗುವ ಸಾಧ್ಯತೆ ಇದೆ. ಸದ್ಯ ನೀರಿನ ಸಮಸ್ಯೆ ಇರುವ ತಾಲ್ಲೂಕಿನ ಗುಂಜರ್ಗಾ, ಲಾಧಾ, ಕಾಕನಾಳ, ಸಿದ್ದೇಶ್ವರ ವಾಡಿ, ನೇಳಗಿ, ಮಾವಿನಹಳ್ಳಿ ಸೇರಿದಂತೆ 9 ಗ್ರಾಮಗಳಲ್ಲಿನ ನೀರಿನ ಸಮಸ್ಯೆ ಪರಿಹಾರಕ್ಕೆ ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆಗೆ ಪಡೆಯಲಾಗಿದೆ. ಇನ್ನು ಹರಿವಾಡಿ ಗರ್ಮಾ ತಾಂಡಾ, ಕೆರೂರ, ಅಹಮದಾಬಾದ್ ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.

ನಮ್ಮ ಗ್ರಾಮದಲ್ಲಿ ಈಚೆಗೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಕೊಳವೆ ಬಾವಿ ಕೊರೆಯಿಸಲಾಗಿತ್ತು. ಆದರೆ, ಅದರಲ್ಲಿ ನೀರು ದೊರೆಯಲಿಲ್ಲ. ಸದ್ಯ ಗ್ರಾಮಸ್ಥರಿಗೆ ಕುಡಿಯುವ ನೀರು



ಉದಯವಾಹಿನಿ ಚಿತ್ರ

ಪೂರೈಸಲು ಒಂದು ಕೈ ಪಂಪ್ ಮಾತ್ರ ಆಧಾರವಾಗಿದೆ.

ತುಂಬಾ ಹೊತ್ತು ಪ್ರಯತ್ನಿಸಿದ ನಂತರ ಈ ಕೈಪಂಪಿನಲ್ಲಿ ನೀರು ಮೇಲಕ್ಕೆ ಬರುತ್ತದೆ. ಹಾಗಾಗಿ ಜನರಿಗೆ ಸಾಕಷ್ಟು ಸಮಸ್ಯೆ ಆಗುತ್ತಿದೆ' ಎಂದು ಜೈನಾಪುರ ಗ್ರಾಮಸ್ಥರು ಅಳಲು ತೋಡಿಕೊಂಡರು.

**ಜೈನಾಪುರ ಗ್ರಾಮಸ್ಥರು ಅಳಲು**

ನೀರಿನ ಸಮಸ್ಯೆ ಪರಿಹಾರಕ್ಕೆ ಈಚೆಗೆ ಕೆಲ ದಿನಗಳವರೆಗೆ ಟ್ಯಾಂಕರ್ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗಿತ್ತು. ಆದರೆ, ನೀರು ಕುಡಿಯಲು ಯೋಗ್ಯವಾಗಿರಲಿಲ್ಲ ಎಂದು ಗ್ರಾಮಸ್ಥರು ತೆಗೆದುಕೊಳ್ಳಲಿಲ್ಲ ಎಂದು ಸ್ಥಳೀಯರಾದ ಸಂಗಮೇಶ್ವರ ಬ್ಯಾಂತೆ ತಿಳಿಸಿದರು. ದಿನಬಳಕೆಗೆ ಹಾಲಹಿಪ್ಪರ್ಗಾ ಕೆರೆಯಿಂದ ನೀರು ಬರುತ್ತದೆ. ಆ ನೀರಿನ ಬಳಕೆಯಿಂದ ಚರ್ಮರೋಗ ಉಂಟಾಗುತ್ತಿದೆ. ಈ ಕೆರೆಯ ನೀರನ್ನು ಶುದ್ದೀಕರಣಗೊಳಿಸಿ ಸರಬರಾಜು ಮಾಡಬೇಕು.

ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಇನ್ನೊಂದು ಕೊಳವೆಬಾವಿ ಕೊರೆಸಬೇಕು ಎಂಬುದು ಜೈನಾಪುರ ಗ್ರಾಮಸ್ಥರ ಒತ್ತಾಯವಾಗಿದೆ. ಗ್ರಾಮದ ನೀರಿನ ಸಮಸ್ಯೆ ಪರಿಹಾರಕ್ಕೆ 2 ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆಗೆ ಪಡೆಯಲಾಗಿದೆ.

> ತಾಲ್ಲೂಕಿನಲ್ಲಿ ನೀರಿನ ಸಮಸ್ಯೆಯಿಂದ ಜನರಿಗೆ ತೊಂದರೆ ಆಗದಂತೆ ಕ್ರಮ ಕೈಗೊಂಡಿದ್ದೇವೆ. 15ನೇ ಹಣಕಾಸು ಯೋಜನೆ ಅಡಿ ಮೀಸಲಾದ ಹಣವನ್ನು ಬಳಸಿಕೊಂಡು ತುರ್ತು ಸಮಸ್ಯೆ ಪರಿಹಾರಕ್ಕೆ ಟಾಸ್ಕ್‌ಫೋರ್ಸ್ ಅಧಿಕಾರಿಗಳಿಗೆ ಸೂಚಿಸಲಾಗಿದೆ **-ಮಲ್ಲಿಕಾರ್ಜುನ್ ವಡ್ಡನಕೇರಿ, ತಹಶೀಲ್ದಾರ್**

ಈಗ ಒಂದರಲ್ಲಿ ನೀರಿನ ಲಭ್ಯತೆ ತುಂಬಾ ಕಡಿಮೆಯಾಗಿದೆ. ಹಾಗಾಗಿ. ಕೆಲವೊಮ್ಮೆ ಸ್ವಲ್ಪ ಸಮಯವೇ ನೀರು ಹರಿಸಲಾಗುತ್ತಿದೆ.

ಇದರಿಂದ ಜನರಿಗೆ ತೊಂದರೆ ಉಂಟಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ಸಮಸ್ಯೆ ಇನ್ನಷ್ಟು ಹೆಚ್ಚಾಗುವ ಭೀತಿ ನಮಗೆ ಕಾಡುತ್ತಿದೆ ಎನ್ನುತ್ತಾರೆ ಗುಂಜರ್ಗಾದ ಹಿತೇಂದ್ರ ಪಾಟೀಲ ಸೇರಿದಂತೆ ಗ್ರಾಮಸ್ಥರು. ನೀರಿನ ಸಮಸ್ಯೆ ಪರಿಹಾರಕ್ಕೆ ಸರ್ಕಾರಿ ಶಾಲೆಯಲ್ಲಿರುವ ಕೊಳವೆ ಬಾವಿಯ ಆಳವನ್ನು ಹೆಚ್ಚಿಸಲು ಮೇಲಧಿಕಾರಿಗಳಿಗೆ ಮನವಿ ಮಾಡಲಾಗಿದೆ.

# ನೇತ್ರಾವತಿ ಒಡಲಿಗೆ ಕಲುಷಿತ ನೀರು

• ಉದಯವಾಹಿನಿ ಮಂಗಳೂರು

ನೇತ್ರಾವತಿ ನದಿಗೆ ಕಲುಷಿತ ನೀರು ಸೇರುವ ವಿಚಾರಕ್ಕೆ ಸಂಬಂಧಿಸಿ ಮಾಧ್ಯಮಗಳಲ್ಲಿ ಈ ಕುರಿತು ಬಿತ್ತರವಾದ ವರದಿಗಳನ್ನು ಗಮನಿಸಿ, ಮಂಗಳೂರಿನ ಜಾಗೃತ ಹಿರಿಯ ನಾಗರಿಕರ ತಂಡವೊಂದು ಬಂಟ್ವಾಳದ ಪ್ರದೇಶಗಳಲ್ಲಿ ಸಮೀಕ್ಷೆ ನಡೆಸಿತು. ಪ್ರತ್ಯಕ್ಷ ಭೇಟಿ ಸಂದರ್ಭ ನದಿಯ ಒಡಳಿಗೆ ತ್ಯಾಜ್ಯ ಸೇರುವುದನ್ನು ಗಮನಿಸಿದ ತಂಡ, ಈ ಕುರಿತು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಮನವಿ ಸಲ್ಲಿಸಿ, ಕೂಡಲೇ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದೆ.

**ಮನವಿಯಲ್ಲಿ ಏನು ಹೇಳಿದೆ? :** ಮಂಗಳೂರಿಗರು ಕುಡಿಯುವ ತುಂಬೆ ನೀರಿಗೆ ಕೊಳಚೆ ನೀರು ಸೇರುತ್ತಿದೆ ಎಂದು ತಿಳಿದು ಬರುತ್ತದೆ ಬಂಟ್ವಾಳದ ಬಡ್ಡೆಕಟ್ಟೆ ಕೆಳಗಿನಪೇಟೆ, ಕಂಚಿ ಗಾರಪೇಟೆ, ಗೂಡಿನ ಬಳ್ಳಿ ಕೈಕುಂಜೆ ಪಾಣೆಮಂಗಳೂರು ಬರಲಿಯ ತಲಪಾಡಿ ಮುಂತಾದ ಸುಮಾರು 20ಕ್ಕೂ ಅಧಿಕ ಕಡೆಗಳಲ್ಲಿ ಮೋರಿ ಮತ್ತು ಕಾಲುವೆಗಳ ಮೂಲಕ ಕುಡಿಯುವ ನೀರಿಗೆ ಕೊಳಚೆ ನೀರು ಸೇರುತಿದೆ ಜೊತೆಗೆ ವಸತಿ ಸಮುಚ್ಚಯಗಳ ಶೌಚಾಲಯಗಳ ನೀರು ಹೋಟೆಲ್ ತ್ಯಾಜ್ಯಗಳು ಕೋಳಿ ಸಹಿತ ಮಾಂಸದ ಅಂಗಡಿಗಳ ಕೊಳಚೆ ನೀರು ನದಿ ಸೇರುತಿದೆ ಎಂದು ಪತ್ರಿಕೆಗಳ ಮೂಲಕ ತಿಳಿದ ನಾವೆಲ್ಲರೂ ಬಹಳ ಆತಂಕಕ್ಕೆ ಒಳಗಾಗಿದ್ದೆವು. ಇದನ್ನು ಪ್ರತ್ಯಕ್ಷವಾಗಿ ಪರಾಂಬರಿಸಿ ನೋಡಲು ನಾವು ಕೆಲವರು ಬಂಟ್ವಾಳದ ಎರಡು ಮೂರು ಕಡೆಗಳಲ್ಲಿ ಹೋಗಿ ನೋಡಲು ಕೊಳಚೆ ನೀರು ನೇತ್ರಾವತಿ ನದಿ ಸೇರುವುದನ್ನು

**ಕೂಡಲೇ ಕ್ರಮ ಕೈಗೊಳ್ಳುವಂತೆ ಒತ್ತಾಯ**


ಉದಯವಾಹಿನಿ ಚಿತ್ರ

ಕಂಡಿರುತ್ತೇವೆ ಇದು ನಿಜವಾಗಿಯೂ ಬಹಳ ಆತಂಕಕಾರಿ ಸಂಗತಿ ಮಂಗಳೂರು ನಗರ ಬೆಳೆಯುತ್ತಿದ್ದು ಸುಮಾರು ಎಂಟು ಲಕ್ಷ ನಾಗರಿಕರಿದ್ದು ಇಂತಹ ಪರಿಸ್ಥಿತಿಯಲ್ಲಿ ಮುಂದಿನ ದಿನಗಳಲ್ಲಿ ಜನರ ಆರೋಗ್ಯದಲ್ಲಿ ನೇರ ಪರಿಣಾಮವಾಗಬಹುದು ನೇತ್ರಾವತಿ ನೀರಿಗೆ ಕೊಳಚೆ ನೀರು ಸೇರುವುದರಿಂದ ಬಹುಶ ನದಿ ನೀರನ್ನು ಎರಡೆರಡು ಸಲ ಶುದ್ಧೀಕರಿಸಬಹುದು ಆದರೆ ಕೊಳೆಕೆ ನೀರು ನೇತ್ರಾವತಿ ನದಿಯ ಮಡಿಲು ಸೇರುವುದರಿಂದ ನಾಗರಿಕರಿಗೆ ತಾವು ಕುಡಿಯುವ ನೀರು ಕೊಳಚೆ ನೀರು ಎಂದು ಮನಪಟಲದಲ್ಲಿ ನಿಲ್ಲುತ್ತದೆ. ಈಗಾಗಲೇ ಸಾಕಷ್ಟು ಚರ್ಚೆಗಳು ಈ ಕುರಿತು ನಡೆದಿದ್ದು, ಕೊಳಚೆ ನೀರು ತ್ಯಾಜ್ಯ ಸೇರುವುದನ್ನು ಇನ್ನು ನಿಂತಿಲ್ಲ. ಜನರ ಹಿತದೃಷ್ಟಿಯಿಂದ ಮತ್ತು ಉತ್ತಮ ಆರೋಗ್ಯದ ದೃಷ್ಟಿಯಿಂದ ಜನನಾಯಕರು ಮತ್ತು ಹಿರಿಯ ಅಧಿಕಾರಿಗಳು ಸೇರಿ ಬಂಟ್ವಾಳ ಮತ್ತು ಆಸುಪಾಸಿನಲ್ಲಿ ನದಿ ಸೇರುವಂತಹ ಕೊಳಚೆ ನೀರು , ತ್ಯಾಜ್ಯವನ್ನು ನಿಲ್ಲಿಸಲು ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದ್ದಾರೆ.

## ಬಾಂಗ್ಲಾ ಗಡಿಯಲ್ಲಿ ಹೈ ಅಲರ್ಟ್



**ನವದೆಹಲಿ:** ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಬಾಂಗ್ಲಾ ಗಡಿಯಲ್ಲೂ ಸೇನೆ ಎಚ್ಚರಿಕೆ ವಹಿಸಿದೆ. ಪಾಕಿಸ್ತಾನದೊಂದಿಗೆ ನಡೆಯುತ್ತಿರುವ ಉದ್ವಿಗ್ನತೆಯ ಮಧ್ಯೆ, ಬಾಂಗ್ಲಾದೇಶ ಮತ್ತು ಮ್ಯಾನ್ಮಾರ್ ಗಡಿಗಳಲ್ಲಿ ಹೆಚ್ಚಿನ ಎಚ್ಚರಿಕೆ ವಹಿಸುವಂತೆ ಗುಪ್ತಚರ ಸಂಸ್ಥೆಗಳು ಮತ್ತು ಭದ್ರತಾ ಪಡೆಗಳಿಗೆ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮುಹಮ್ಮದ್ ಯೂನುಸ್ ನೇತೃತ್ವದ ಸರ್ಕಾರದ ಕ್ರಮಗಳು ಮತ್ತು ಪಾಕಿಸ್ತಾನದ ಐಎಸ್‌ಐ ಮತ್ತು ಪಾಕಿಸ್ತಾನದ ಮಿಲಿಟರಿ ಅಧಿಕಾರಿಗಳ ಹೆಚ್ಚುತ್ತಿರುವ ಉಪಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಬಾಂಗ್ಲಾದೇಶ ಗಡಿಯುದ್ದಕ್ಕೂ ಹೆಚ್ಚು ಜಾಗರೂಕರಾಗಿರಲು ಏಜೆನ್ಸಿಗಳಿಗೆ ತಿಳಿಸಲಾಗಿದೆ.

ಪಾಕಿಸ್ತಾನವು ಅಲ್ಲಿನ ತೀವ್ರಗಾಮಿ ಇಸ್ಲಾಮಿಕ್ ಗುಂಪುಗಳೊಂದಿಗೆ ಬಾಂಗ್ಲಾದೇಶದ ಸಹವರ್ತಿಗಳೊಂದಿಗೆ ಸಂಬಂಧವನ್ನು ಬಲಪಡಿಸಲು ಪ್ರಯತ್ನಿಸುತ್ತಿದೆ. ಬಾಂಗ್ಲಾದೇಶದ ಗಡಿಯಲ್ಲಿರುವ ಭಾರತೀಯ ಪ್ರದೇಶಗಳಲ್ಲಿ ಬೆಂಬಲ ನೆಲೆಯನ್ನು ಹೊಂದಿರುವ ಈ ತೀವ್ರಗಾಮಿ ಅಂಶಗಳನ್ನು ಪಾಕಿಸ್ತಾನವು ಭಾರತಕ್ಕೆ ತೊಂದರೆ ಸೃಷ್ಟಿಸಲು ಬಳಸುವ ಸಾಧ್ಯತೆಯಿರುವ ಹಿನ್ನೆಲೆಯಲ್ಲಿ ಇಂತಹ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

### ಇತಿಹಾಸ ಸೃಷ್ಟಿ, ವಿವಾದ, ಸಮರ; ಅಮೆರಿಕ ಫಸ್ಟ್ ಆಯ್ತಾ? ಈಡೇರಿದ್ವಾ ಭರವಸೆಗಳು?

## ಹೇಗಿತ್ತು ಡೊನಾಲ್ಡ್ ಟ್ರಂಪ್ 2.0ನ ಮೊದಲ 100 ದಿನ

**ವಾಷಿಂಗ್ಟನ್ ಡಿಸಿ :** ಅದು ಜನವರಿ 20, 2025, ಡೊನಾಲ್ಡ್ ಟ್ರಂಪ್ ಎರಡನೇ ಬಾರಿ ಅಮೆರಿಕದ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಟ್ರಂಪ್ ಅಧಿಕಾರ ಸ್ವೀಕರಿಸಿ ಇಲ್ಲಿಗೆ ಸರಿಯಾಗಿ 100 ದಿನ ಆಗಿದ್ದು, ವಿಶ್ವದ ದೊಡ್ಡಣ್ಣ ಹಿಂದೆಂದೂ ಕಂಡಿರದ ರೀತಿಯಲ್ಲಿ ತನ್ನ ನೀತಿಯನ್ನು ಈ ಅವಧಿಯಲ್ಲಿ ಬದಲಾಯಿಸಿಕೊಂಡಿದೆ.

ಟ್ರಂಪ್ ಅವರ ಎರಡನೇ ಅವಧಿಯ ಮೊದಲ ನೂರು ದಿನ ಜಗತ್ತಿಗೆ ಮಾರಿ ಹಬ್ಬವೇ ಆಗಿತ್ತು. ಅದೇ ರೀತಿ ಅಮೆರಿಕಕ್ಕೂ ಟ್ರಂಪ್ ನೀತಿಗಳು ಕಾಟ ಕೊಟ್ಟಿವೆ. ಅಕ್ರಮ ವಲಸಿಗರ ವಿರುದ್ಧ ಕಠಿಣ ಕ್ರಮ, ಹುಟ್ಟಿನಿಂದ ಬರುವ ಪೌರತ್ವ ರದ್ದು ಸೇರಿ, ಈ ನೂರು ದಿನದ ಅವಧಿಯಲ್ಲಿ ಬರೋಬ್ಬರಿ 142 ಕಾರ್ಯನಿರ್ವಾಹಕ ಆದೇಶಗಳಿಗೆ ಟ್ರಂಪ್ ಸಹಿ ಹಾಕಿ ಇತಿಹಾಸ ಸೃಷ್ಟಿಸಿದ್ದಾರೆ. ಅಮೆರಿಕ ಫಸ್ಟ್, ಮೇಕ್ ಅಮೆರಿಕ ಗ್ರೇಟ್ ಅಗೇನ್ ಎಂಬ ನೀತಿಯನ್ನು ಟ್ರಂಪ್ ಜಾರಿಗೆ ತಂದಿದ್ದು, ವಲಸಿಗರ ಸಂಕಷ್ಟ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ.

ಹೌದು, ಡೊನಾಲ್ಡ್ ಟ್ರಂಪ್ ಎರಡನೇ ಅವಧಿಯ ಮೊದಲ ನೂರು ದಿನ ವಿಶ್ವಕ್ಕೆ ಆತಂಕ ಸೃಷ್ಟಿಸಿದ್ದಂತೂ ಸುಳ್ಳಲ್ಲ. ಕಠಿಣ ವಲಸೆ ನೀತಿ, ಸುಂಕ ಸಮರ ಸೇರಿ ಅನೇಕ ವಿಚಾರಗಳು ಜಗತ್ತಿಗೆ ಭಾರೀ ಸಮಸ್ಯೆಯನ್ನು ಸೃಷ್ಟಿಸಿವೆ. ಅಮೆರಿಕನ್ನರ ಮೇಲೂ ಇಂಪ್ಯಾಕ್ಟ್ ಆಗಿದೆ. ಅಮೆರಿಕ ಫಸ್ಟ್, ಮೇಕ್ ಅಮೆರಿಕ ಗ್ರೇಟ್ ಅಗೇನ್ ಎಂಬ ಘೋಷಣೆ ಮಾಡುತ್ತಾ ಡೊನಾಲ್ಡ್ ಟ್ರಂಪ್ ಮೊದಲ ನೂರು ದಿನಗಳಲ್ಲಿ ಬರೋಬ್ಬರಿ 142 ಆದೇಶಗಳಿಗೆ ಸಹಿ ಹಾಕಿದ್ದಾರೆ. ಸಿಎನ್‌ಎನ್ ಪ್ರಕಾರ ಈ ಸಂಖ್ಯೆ 200 ಅನ್ನು ಮೀರಿದೆ. ಇಷ್ಟೊಂದು ಆದೇಶಗಳನ್ನು ಇದುವರೆಗೂ ಹೊರಡಿಸಿಲ್ಲ. ಅಮೆರಿಕದ ಮಾಜಿ ಅಧ್ಯಕ್ಷ ಫ್ರಾಂಕ್ಲಿನ್ ಡಿ ರೂಸ್‌ವೆಲ್ಟ್ ಅವರು ವರ್ಷದಲ್ಲಿ ಹೊರಡಿಸಿದ ಆದೇಶಗಳ ಹತ್ತಿರ ಟ್ರಂಪ್ ಬಂದಿದ್ದಾರೆ. ಅಧಿಕಾರ ವಹಿಸಿಕೊಂಡ ಮೊದಲ ದಿನವೇ 26 ಆದೇಶಗಳಿಗೆ ಸಹಿ ಹಾಕಿದ್ದ ಟ್ರಂಪ್ ಅಮೆರಿಕದಲ್ಲಿ ಸಂಚಲನವನ್ನು ಸೃಷ್ಟಿಸಿದ್ದರು. ಅದರಲ್ಲೂ ಬಿಡೆನ್ ಆಡಳಿತದಲ್ಲಿ ಜಾರಿಯಾಗಿದ್ದ 100ಕ್ಕೂ ಹೆಚ್ಚು ಆದೇಶಗಳನ್ನು ಟ್ರಂಪ್ ರದ್ದುಪಡಿಸಿದ್ದರು.

ವಿಶ್ವ ಆರೋಗ್ಯ ಸಂಸ್ಥೆಯಿಂದ ಹೊರಬರುವ ಆದೇಶಕ್ಕೆ ಫಸ್ಟ್ ದಿನವೇ ಸಹಿ ಹಾಕಿದ್ದು ಜಗತ್ತಿನ ಗಮನ ಸೆಳೆದಿತ್ತು. ಈ ಆದೇಶಗಳಿಗೆ ಅಮೆರಿಕದ ಕಾಂಗ್ರೆಸ್‌ನ ಅನುಮತಿ ಬೇಕಿಲ್ಲದ ಕಾರಣಕ್ಕೆ ಇವೆಲ್ಲಾ ನೇರವಾಗಿ ಕಾನೂನಾಗಿ ಜಾರಿಯಾಗಿದ್ದವು.

**ಗ್ರೀನ್ ಕಾರ್ಡ್ ಇದ್ರೆ, ಶಾಶ್ವತ ಪೌರತ್ವ ಇಲ್ಲ!**

ಇದರ ಜೊತೆ ಅಮೆರಿಕದ ವೀಸಾ ನಿಯಮಗಳಲ್ಲಿ ಹಲವು ಬದಲಾವಣೆಗಳನ್ನು ಟ್ರಂಪ್ ಆಡಳಿತ ತಂದಿದೆ. ಗ್ರೀನ್ ಕಾರ್ಡ್ ಶಾಶ್ವತವಾಗಿ ಅಮೆರಿಕದಲ್ಲಿ ನೆಲೆಸಲು ಅವಕಾಶ ನೀಡಲ್ಲ ಎಂದು ಹೇಳಲಾಗಿದ್ದು, ಸಕ್ರಮವಾಗಿ ನೆಲೆಸಿದವರಿಗೂ ಆತಂಕ ಶುರುವಾಗುವಂತೆ ಮಾಡಿದೆ.

### ವಲಸಿಗರ ಗಡೀಪಾರು, ಜನ್ಮಸಿದ್ಧ ಪೌರತ್ವ ರದ್ದು

**ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮೊದಲ ನೂರು ದಿನ ಕಠಿಣ ವಲಸೆ ನೀತಿಯಿಂದ ಗಮನ ಸೆಳೆದಿದೆ. ಇದಕ್ಕಾಗಿ ಹಲವು ಆದೇಶಗಳಿಗೆ ಸಹಿ ಹಾಕಿದ್ದು, ಕೇಸ್ ಹಾಕಿದ್ದು ಹಾಗೂ ಅಕ್ರಮ ವಲಸಿಗರ ಮೇಲೆ ರೇಡ್ ಮಾಡಿದ್ದು ಪ್ರಮುಖವಾಗಿದೆ. ಲೇಕನ್ ರಿಲೇ ಕಾಯ್ದೆಗೆ ಟ್ರಂಪ್ ಸಹಿ ಹಾಕಿದ್ದು, ಅಸೈಲಮ್ ಪಡೆಯಲು ಅಮೆರಿಕಕ್ಕೆ ಬರುವವರಿಗೆ ನಿರ್ಬಂಧ ಹೇರಿದ್ದು, ಹುಟ್ಟಿನಿಂದ ಪೌರತ್ವ ಹಕ್ಕಿಗೆ ತಡೆ ನೀಡುವ ಹಲವು ಆದೇಶಗಳಿಗೆ ಸಹಿ ಹಾಕಿದ್ದಾರೆ. ಇದರ ಜೊತೆ ಅಕ್ರಮ ವಲಸಿಗರನ್ನು ಪತ್ತೆ ಹಚ್ಚಿ ಲಕ್ಷಾಂತರ ಜನರನ್ನು ಅವರವರ ದೇಶಕ್ಕೆ ಸೇನಾ ವಿಮಾನಗಳಲ್ಲಿ ಗಡೀಪಾರು ಮಾಡಿದ್ದು ಜಗತ್ತಿನ ಗಮನ ಸೆಳೆದಿತ್ತು.**




### 2.8 ಲಕ್ಷ ಉದ್ಯೋಗಿಗಳ ವಜಾ

**ಪ್ರಮುಖವಾಗಿ ಸ್ಪೇಸ್ ಎಕ್ಸ್ ಸಂಸ್ಥಾಪಕ ಎಲಾನ್ ಮಸ್ಕ್ ಅನ್ನು ಡೋಜ್ ಅಂದ್ರೇ ಸರ್ಕಾರಿ ದಕ್ಷತೆ ಇಲಾಖೆಯ ಮುಖ್ಯಸ್ಥರನ್ನಾಗಿ ಮಾಡಿ ಸುಮಾರು 2 ಲಕ್ಷ 80 ಸಾವಿರ ಫೆಡರಲ್ ಉದ್ಯೋಗಿಗಳನ್ನು ಕೆಲಸದಿಂದ ತೆಗೆದುಹಾಕಿದ್ದು ಕೂಡ ಭಾರೀ ವಿವಾದವಾಗಿತ್ತು. ಈ ಬಗ್ಗೆ ಹಲವು ಪ್ರತಿಭಟನೆಗಳು ಕೂಡ ನಡೆದಿವೆ, ನಡೆಯುತ್ತಿವೆ. ಜೊತೆಗೆ ಸ್ವತಂತ್ರ ಫೆಡರಲ್ ಸಂಸ್ಥೆಗಳ ನಿಯಂತ್ರಣಕ್ಕೆ ಟ್ರಂಪ್ ಪ್ರಯತ್ನಿಸಿದ್ದು, ತಮ್ಮ ಅಧ್ಯಕ್ಷೀಯ ಅಧಿಕಾರವನ್ನು ಟ್ರಂಪ್ ಈ ನೂರು ದಿನಗಳಲ್ಲಿ ಆಕ್ರಮಣಕಾರಿಯಾಗಿ ಪ್ರತಿಪಾದಿಸಿರುವುದು ಕ್ಲಿಯರ್ ಕಟ್ ಆಗಿ ಗೊತ್ತಾಗುತ್ತಿದೆ.**

## ಮಿನಿ ನ್ಯೂಸ್

### ಮಣಿಪುರದ ತೆಂಪಾಲ್ ಜಿಲ್ಲೆಯಲ್ಲಿ 3 ಲಕ್ಷ ಯಾಬಾ ಮಾತ್ರೆ ವಶ, ಇಬ್ಬರ ಬಂಧನ

**ಇಂಫಾಲ್:** ಮಣಿಪುರದ ತೆಂಪಾಲ್ ಜಿಲ್ಲೆಯಲ್ಲಿ 35.41 ಕೆಜಿ ಯಾಬಾ ಮಾತ್ರೆಗಳೊಂದಿಗೆ ಇಬ್ಬರು ಶಂಕಿತ ಡ್ರಗ್ ಪೆಕ್ಲರ್‌ಗಳನ್ನು ಬಂಧಿಸಲಾಗಿದೆ. ಟಿಒಬಿ ಯಾಂಗೌಬಂಗ್‌ನಲ್ಲಿ ಎರಡು ವಾಹನಗಳನ್ನು ತಡೆದಿದ್ದು, ಶೋಧ ನಡೆಸಿದಾಗ 2.6 ಲಕ್ಷ ನಗದು ಮತ್ತು ಸುಮಾರು 3 ಲಕ್ಷ ಯಾಬಾ ಮಾತ್ರೆಗಳು ಪತ್ತೆಯಾಗಿವೆ ಎಂದು ಅವರು ಹೇಳಿದರು.

ವಾಹನವು ಭಾರತ-ಮ್ಯಾನ್ಮಾರ್ ಗಡಿಯಲ್ಲಿರುವ ಮೋರೆಹ್‌ನಿಂದ ಚುರಾಚಂದ್ಪುರಕ್ಕೆ ಹೋಗುತ್ತಿತ್ತು ಎಂದು ಶಂಕಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬಂಧಿತರನ್ನು ಪಾವೊಜಥಾಂಗ್ ಕಿಪ್ಗೆನ್ (30) ಮತ್ತು ಕಮ್ಮಿನ್ಸುನ್ ಕಿಪ್ಗೆನ್ (24) ಎಂದು ಗುರುತಿಸಲಾಗಿದೆ.

ಥಾಯ್ ಭಾಷೆಯಲ್ಲಿ ಹುಚ್ಚು ಔಷಧ ಎಂದು ಅರ್ಥೈಸುವ ಯಾಬಾ, ನಿಯಂತ್ರಿತ ಪದಾರ್ಥಗಳ ಕಾಯ್ದೆಯಡಿ ಶೆಡ್ಯೂಲ್ 2 ವಸ್ತುವಾದ ಮೆಥಾಂಫೆಟಮೈನ್ ಅನ್ನು ಹೊಂದಿರುವುದರಿಂದ ದೇಶದಲ್ಲಿ ಕಾನೂನುಬಾಹಿರವಾಗಿದೆ.

### ಶಸ್ತ್ರಾಸ್ತ್ರ, ಮದ್ದು ಗುಂಡುಗಳ ವಶ

**ಅಮೃತಸರ:** ಪಹಲ್ಗಾಮ್ ಉಗ್ರರ ದಾಳಿ ಘಟನೆ ಜನರ ಮನಸ್ಸಿನಿಂದ ಮಾಸುವ ಮುನ್ನವೇ ಮತ್ತೊಂದು ದೊಡ್ಡ ಭಯೋತ್ಪಾದನಾ ಸಂಚನ್ನು ಗಡಿ ಭದ್ರತಾ ಪಡೆ ಅಮೃತಸರ ಗಡಿಯಲ್ಲಿ ವಿಫಲಗೊಳಿಸಿದೆ. ಹೌದು, ಅಮೃತಸರ ಜಿಲ್ಲೆಯ ಭರೋಪಾಲ್ ಗ್ರಾಮದ ಬಳಿ ಪಂಜಾಬ್ ಪೊಲೀಸರ ಸಮನ್ವಯದಲ್ಲಿ ಗಡಿ ಭದ್ರತಾ ಪಡೆ ಭಯೋತ್ಪಾದಕ ಸಂಚನ್ನು ವಿಫಲಗೊಳಿಸಿದ್ದು, ಶಸ್ತ್ರಾಸ್ತ್ರ ಮತ್ತು ಮದ್ದು ಗುಂಡುಗಳ ಸಂಗ್ರಹವನ್ನು ವಶಪಡಿಸಿಕೊಂಡಿದೆ. ಬಿಎಸ್‌ಎಫ್ ಇಂಟಲಿಜೆನ್ಸ್ ವಿಂಗ್ ನೀಡಿದ ನಂಬಲಾರ್ಹ, ಗುಪ್ತಚರ ಮಾಹಿತಿ ಮೇರೆಗೆ ಭದ್ರತಾ ಪಡೆಗಳು ಸಂಜೆ ಜಂಟಿ ಶೋಧ ಕಾರ್ಯಾಚರಣೆ ನಡೆಸಿದ್ದು, ಎರಡು ಹ್ಯಾಂಡ್ ಗ್ರೆನೇಡ್‌ಗಳು, ಮೂರು ಪಿಸ್ತೂಲ್‌ಗಳು, ಆರು ಮ್ಯಾಗಜೀನ್‌ಗಳು ಮತ್ತು 50 ಸುತ್ತಿನ ಮದ್ದುಗುಂಡುಗಳನ್ನು ವಶಪಡಿಸಿಕೊಂಡಿವೆ. ವಶಕ್ಕೆ ಪಡೆದ ಶಸ್ತ್ರಾಸ್ತ್ರಗಳು ಮತ್ತು ಸ್ಫೋಟಕಗಳನ್ನು ಹೆಚ್ಚಿನ ತನಿಖೆಗಾಗಿ ಸ್ಥಳೀಯ ಪೊಲೀಸರಿಗೆ ಹಸ್ತಾಂತರಿಸಲಾಗಿದೆ.

### ಹೋಟೆಲ್‌ನಲ್ಲಿ ಅಗ್ನಿ ಅವಘಡ: ಮಗುವನ್ನು ರಕ್ಷಿಸಲು 3ನೇ ಮಹಡಿಯಿಂದ ಎಸೆದ ತಾಯಿ

**ಜೈಪುರ್:** ಅಜ್ಮೀರ್‌ನ ಹೋಟೆಲ್ ಒಂದರಲ್ಲಿ ಸಂಭವಿಸಿದ ಅಗ್ನಿ ಅವಘಡದ ವೇಳೆ ಮಹಿಳೆಯೊಬ್ಬರು ತಮ್ಮ ಮಗುವನ್ನು ರಕ್ಷಿಸಲು 3ನೇ ಮಹಡಿಯಿಂದ ಎಸೆದಿದ್ದಾರೆ. ಮಗುವಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಅಗ್ನಿ ಅವಘಡ ಸಂಭವಿಸಿದ್ದು, ನಾಲ್ವರು ಸಾವನ್ನಪ್ಪಿದ್ದಾರೆ. ಅವಘಡದಲ್ಲಿ ಹಲವರು ಗಾಯಗೊಂಡಿದ್ದಾರೆ. ಬೆಂಕಿಯಿಂದ ತಪ್ಪಿಸಿಕೊಳ್ಳಲು ಜನ ಒಟ್ಟಾಗಿ ಓಡಿದ್ದರಿಂದ ನೂಕುನುಗ್ಗಲು ಸಂಭವಿಸಿತು. ಹೋಟೆಲ್ ಕಿರಿದಾದ ಓಣಿಯಲ್ಲಿದ್ದು, ಸಿಲುಕಿರುವ ಜನರನ್ನು ರಕ್ಷಿಸಲು ಪ್ರಯತ್ನಿಸುವಾಗ ಅನೇಕ ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಮೂರ್ಛೆ ಹೋಗಿದ್ದರು ಎಂದು ವರದಿಯಾಗಿದೆ. ಅವಘಡದಲ್ಲಿ ಎಂಟು ಜನ ಗಾಯಗೊಂಡಿದ್ದಾರೆ. ಅವರನ್ನು ಜೆಎಲ್‌ಎನ್ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ನೀಡಲಾಗುತ್ತಿದೆ. ಘಟನೆಯ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಪಾಕಿಸ್ತಾನದಲ್ಲಿ ಭೂಕಂಪ- ಭಯಗೊಂಡು ಹೊರಗಡೆ ಓಡೋಡಿ ಬಂದ ಜನ

**ಇಸ್ಲಾಮಾಬಾದ್:** ಪಾಕಿಸ್ತಾನದಲ್ಲಿ ಭೂಕಂಪ ಸಂಭವಿಸಿದೆ. ರಾತ್ರಿ 9 ಗಂಟೆ 58 ನಿಮಿಷಕ್ಕೆ ಭೂಕಂಪ ಸಂಭವಿಸಿದೆ. ರಿಕ್ಟರ್ ಮಾಪಕದಲ್ಲಿ 4.4 ತೀವ್ರತೆ ದಾಖಲಾಗಿದೆ. ಕಂಪನದ ಅನುಭವ ಆಗುತ್ತಿದ್ದಂತೆ ಜನ ಭಯಗೊಂಡು ಹೊರಗಡೆ ಓಡಿ ಬಂದಿದ್ದಾರೆ. ಖೈಬರ್ ಪಖ್ತುನ್ಖ್ವಾದ ಸ್ವಾತ್ ಮತ್ತು ಅದರ ಪಕ್ಕದ ಪ್ರದೇಶಗಳಲ್ಲಿ 4.4 ತೀವ್ರತೆಯ ಭೂಕಂಪ ಸಂಭವಿಸಿ, ಪ್ರದೇಶದಾದ್ಯಂತ ಕಂಪನ ಉಂಟಾದ ಕೇವಲ ಎರಡು ದಿನಗಳ ನಂತರ ಮತ್ತೆ ಭೂಮಿ ಕಂಪಿಸಿದೆ.

### ಒಂದೇ ಕುಟುಂಬದ 6 ಮಂದಿ ಸಾವು

**ಖೇಡಾ:** ಒಂದೇ ಕುಟುಂಬದ 6 ಮಂದಿ ನದಿಯಲ್ಲಿ ಮುಳುಗಿ ಪ್ರಾಣ ಬಿಟ್ಟಿರುವ ಹೃದಯ ವಿದ್ರಾವಕ ಘಟನೆ ಗುಜರಾತ್‌ನ ಖೇಡಾ ಜಿಲ್ಲೆಯ ಮೆಶ್ವೋ ನದಿಯಲ್ಲಿ ನಡೆದಿದೆ. ಘಟನೆಯ ಬಗ್ಗೆ ಮಾಹಿತಿ ಪಡೆದ ನಂತರ, ನಾಡಿಯಾಡ್ ಅಗ್ನಿಶಾಮಕ ದಳದ ತಂಡವು ಕನಿಜ್ ಗ್ರಾಮದ ಬಳಿ ಸ್ಥಳಕ್ಕೆ ತಲುಪಿ, ಆರು ಶವಗಳನ್ನು ನದಿಯಿಂದ ಹೊರತೆಗೆದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕನಿಜ್ ಗ್ರಾಮದ ಬಳಿಯ ನದಿಯಲ್ಲಿ ಸಂಜೆ ಸ್ನಾನ ಮಾಡಲು ಆರು ಮಂದಿ ತೆರಳಿದ್ದರು. ನೀರಿನ ಆಳ ತಿಳಿಯದೇ ಇಳಿದು ಈಜಲಾಗದೆ ಪ್ರಾಣ ಕಳೆದುಕೊಂಡಿದ್ದಾರೆ. ತಂಡವು ಸ್ಥಳಕ್ಕೆ ತಲುಪಿ ಅವರನ್ನು ಹೊರತೆಗೆಯಲು ಕಾರ್ಯಾಚರಣೆ ನಡೆಸಲಾಯಿತು ಎಂದು ಖೇಡಾ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ರಾಜೇಶ್ ಗಾಧಿಯಾ ಮಾಹಿತಿ ನೀಡಿದ್ದಾರೆ. ಎಲ್ಲಾ ಶವಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ.

### ಸೀಮಾ ಈಗ ಮುಸ್ಲಿಂ ಅಲ್ಲ ಹಿಂದೂ, ಪಾಕಿಸ್ತಾನಕ್ಕೆ ಮತ್ತೆ ಹೋಗಲ್ಲ: ವಕೀಲ ಎಪಿ ಸಿಂಗ್

**ಉತ್ತರ ಪ್ರದೇಶ:** ಪ್ರೇಮಿಗಾಗಿ ಪಾಕಿಸ್ತಾನ ತೊರೆದು ಅಕ್ರಮವಾಗಿ ಮೂವರು ಮಕ್ಕಳೊಂದಿಗೆ ಭಾರತ ಪ್ರವೇಶಿಸಿದ್ದ ಸೀಮಾ ಹೈದರ್ ಮತ್ತೆ ಪಾಕಿಸ್ತಾನಕ್ಕೆ ಹೋಗುತ್ತಾರಾ ಎನ್ನುವ ಪ್ರಶ್ನೆಗಳು ಎದ್ದಿದ್ದವು. ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ದಾಳಿ ಬಳಿಕ ಭಾರತವು ಅಕ್ರಮವಾಗಿ ಭಾರತದಲ್ಲಿ ನೆಲೆಸಿರುವ ಹಾಗೂ ಈ ಹಿಂದೆ ವೀಸಾ ಪಡೆದು ಭಾರತಕ್ಕೆ ಬಂದಿರುವವರೆಲ್ಲರೂ ದೇಶವನ್ನು ತೊರೆಯಬೇಕು ಎಂದು ಆದೇಶ ಹೊರಡಿಸಿತ್ತು. ಇದಾದ ಬಳಿಕ ಸೀಮಾ ಹೈದರ್ ಪಾಕಿಸ್ತಾನಕ್ಕೆ ಹೋಗುತ್ತಾರಾ ಎನ್ನುವ ಪ್ರಶ್ನೆಯನ್ನು ಕೆಲವರು ಕೇಳಿದ್ದರು. ಆದರೆ ಸೀಮಾ ಪರ ವಕೀಲ ಎಪಿ ಸಿಂಗ್ ಮಾತನಾಡಿದ್ದು, ಸೀಮಾ ಸನಾತನ ಧರ್ಮವನ್ನು ಅನುಸರಿಸುತ್ತಿದ್ದಾರೆ, ಆಕೆ ಈಗ ಮುಸ್ಲಿಂ ಅಲ್ಲ ಹಿಂದೂವಾಗಿ ಮತಾಂತರಗೊಂಡಿದ್ದಾರೆ. ಆಕೆ ಪಾಕಿಸ್ತಾನಕ್ಕೆ ಹೋಗುವುದಿಲ್ಲ ಎಂದು ಹೇಳಿದ್ದಾರೆ.

ಸೀಮಾ ಹೈದರ್ ಎಂಬಾಕೆ ಆನ್ ಲೈನ್ ಗೇಮಿಂಗ್‌ನಲ್ಲಿ ಪರಿಚಯವಾದ ಸಚಿನ್ ಮೀನಾ ಎಂಬುವವರನ್ನು ಪ್ರೀತಿಸಲು ಆರಂಭಿಸಿದ್ದರು. ಆತನಿಗಾಗಿ ಮೂವರು ಮಕ್ಕಳನ್ನು ಕರೆದುಕೊಂಡು, ಗಂಡನನ್ನು ತೊರೆದು ನೇಪಾಳ ಮೂಲಕ ಭಾರತ ಪ್ರವೇಶಿಸಿದ್ದರು. ಅವರನ್ನು ಜೈಲಿಗೆ ಕೂಡ ಕಳುಹಿಸಲಾಗಿತ್ತು. ಬಳಿಕ ಬಿಡುಗಡೆ ಮಾಡಲಾಗಿತ್ತು.

## ನಿಷೇಧದ ಹೊಡೆತಕ್ಕೆ ಕಂಗೆಟ್ಟ ಪಾಕ್ ಬಣ್ಣದ ಲೋಕ

### ಎದೆ ಚೂರಾಗಿದೆ ಎಂದು ಪ್ರಧಾನಿ ಮೋದಿ ಬಳಿ ಗೋಗರೆದ ಪಾಕ್ ಸೆಲೆಬ್ರಿಟಿ

**ಇಸ್ಲಾಮಾಬಾದ್:** ಕೆಲವು ದಿನಗಳ ಹಿಂದೆ ಪಾಕಿಸ್ತಾನದ ಹಲವು ಯುಟ್ಯೂಬ್ ಚಾನೆಲ್‌ಗಳಿಗೆ ಭಾರತ ಸರ್ಕಾರ ನಿಷೇಧ ಹೇರಿತ್ತು. ಅದರ ಮುಂದುವರಿದ ಭಾಗವಾಗಿ, ಮತ್ತಷ್ಟು ಪಾಕಿಸ್ತಾನದ ಸೆಲೆಬ್ರಿಟಿಗಳ ಸಾಮಾಜಿಕ ಖಾತೆಯನ್ನೂ ಬಂದ್ ಮಾಡಿದೆ. ಇದು, ಪಾಕಿಸ್ತಾನದ ಬಣ್ಣದ ಲೋಕದಲ್ಲಿ ಬಿರುಗಾಳಿ ಎಬ್ಬಿಸಿದೆ.

ಪಹಲ್ಗಾಮ್ ನಲ್ಲಿ ನಡೆದ ಉಗ್ರರ ದಾಳಿಯ ನಂತರ, ಭಾರತ ಸರ್ಕಾರ ಹಲವು ನಿರ್ದಾಕ್ಷಿಣ್ಯ ಕ್ರಮವನ್ನು ತೆಗೆದುಕೊಂಡಿತ್ತು. ಅದರಲ್ಲಿ, ಸಿಂಧೂ ನದಿನೀರು ಹಂಚಿಕೆ ಕೂಡಾ. ಇದಕ್ಕೆ ಕೌಂಟರ್ ಆಗಿ, ಪಾಕಿಸ್ತಾನವು ತಮ್ಮ ವಾಯುನೆಲೆಯನ್ನು ಬಳಸಿಕೊಳ್ಳದಂತೆ ಭಾರತಕ್ಕೆ ಸೂಚಿಸಿತ್ತು. ಶೋಯೆಬ್ ಅಖ್ತರ್, ಶಹೀದ್ ಅಫ್ರಿದಿ ಸೇರಿದಂತೆ ಹಲವು ಪಾಕಿಸ್ತಾನ ಮೂಲದ ಚಾಲೆನ್‌ಗಳಿಗೆ ನಿಷೇಧವನ್ನು ಹೇರಿತ್ತು. ಅಫ್ರಿದಿ, ಭಾರತ ಮಿಲಿಟರಿ ಪಡೆಗಳನ್ನು ನಾಲಾಯಕ್ ಎಂದು ಜರಿದಿದ್ದರು. ಇದು, ಭಾರತದಲ್ಲಿ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿತ್ತು. ನಿನ್ನೆ ಮತ್ತಷ್ಟು ಚಾನೆಲ್‌ಗಳಿಗೆ ಭಾರತ ನಿಷೇಧ ಹೇರಿದೆ. ಇದರಿಂದ ಆಘಾತಗೊಂಡಿರುವ ಪಾಕಿಸ್ತಾನದ ನಟಿ ಹನಿಯಾ ಆಮಿರ್, ಭಾರತದ ಪ್ರಧಾನಿ ನರೇಂದ್ರ ಮೋದಿಯವರ ಬಳಿ ಮನವಿ ಮಾಡಿದ್ದಾರೆ.

ಮಾಡಬಾರದ ಕೆಲಸವನ್ನು ಮಾಡಿರುವವರು ಉಗ್ರರು ಅವರನ್ನು ಸದೆಬಡಿಯಿರಿ, ನಮ್ಮಂತಹ ಅಮಾಯಕರ ವಿರುದ್ಧ ಅಲ್ಲ ಎಂದು ಹೇಳಿದ್ದಾರೆ.

ಕೋಮು ಭಾವನೆ, ಸುಳ್ಳುಸುದ್ದಿ, ಭಾರತದ ವಿರುದ್ಧ ಕಪೋಕಲ್ಪಿತ ಸುದ್ದಿಯನ್ನು ಪ್ರಕಟಿಸುತ್ತಿದ್ದ ಪಾಕಿಸ್ತಾನದ 16 ಚಾನೆಲ್‌ಗಳನ್ನು ಭಾರತ ಬ್ಯಾನ್ ಮಾಡಿತ್ತು. ಈಗ, ಪಾಕಿಸ್ತಾನದ ಹಲವು ಸೆಲೆಬ್ರಿಟಿಗಳ ಅಕೌಂಟ್ ಅನ್ನು ಭಾರತದಲ್ಲಿ ಸಸ್ಪೆಂಡ್ ಮಾಡಿದೆ. ಅದರಲ್ಲಿ, ಹನಿಯಾ ಆಮಿರ್, ಮಹೀರಾ ಖಾನ್, ಆಲಿ ಜಫರ್ ಅವರ ಖಾತೆಯೂ ಕೂಡಾ. ಕಾಶ್ಮೀರದಲ್ಲಿ ಜನರಲ್ ಆಸಿಮ್ ಮುನೀರ್ ಅವರ ಬೇಜವಾಬ್ದಾರಿ ಕ್ರಮಗಳಿಂದಾಗಿ, ಭಾರತ ಸರ್ಕಾರವು ಇಡೀ ಪಾಕಿಸ್ತಾನದ ಮನೋರಂಜನಾ ಉದ್ಯಮವನ್ನು ನಿಷೇಧಿಸಿದೆ.



- **ಪಾಕಿಸ್ತಾನದ ನಟಿ ಹನಿಯಾ ಆಮಿರ್, ಭಾರತದ ಪ್ರಧಾನಿ ನರೇಂದ್ರ ಮೋದಿಯವರ ಬಳಿ ಮನವಿ ಮಾಡಿದ್ದಾರೆ**
- **ಭಾರತದ ವಿರುದ್ಧ ಕಪೋಕಲ್ಪಿತ ಸುದ್ದಿಯನ್ನು ಪ್ರಕಟಿಸುತ್ತಿದ್ದ ಪಾಕಿಸ್ತಾನದ 16 ಚಾನೆಲ್**
- **ನನ್ನ ಮತ್ತು ಇತರ ಕೆಲವು ಪಾಕ್ ಸೆಲೆಬ್ರಿಟಿಗಳ ಖಾತೆಯನ್ನು ಭಾರತ ನಿಷೇಧಿಸಿದೆ**

## ಭೂ ಖನಿಜ ಒಪ್ಪಂದ: ಅಮೆರಿಕ-ಉಕ್ರೇನ್ ಸಹಿ

**ವಾಷಿಂಗ್ಟನ್:** ಅಮೆರಿಕ ಮತ್ತು ಉಕ್ರೇನ್ ಆರ್ಥಿಕ ಪಾಲುದಾರಿಕೆ ಒಪ್ಪಂದಕ್ಕೆ ಸಹಿ ಹಾಕಿದ್ದು, ಉಕ್ರೇನ್‌ನ ಅಪರೂಪದ ಭೂ ಖನಿಜಗಳನ್ನು ಪಡೆಯಲು ಅಮೆರಿಕಕ್ಕೆ ಅವಕಾಶ ನೀಡಿದೆ. ಇದಕ್ಕೆ ಪ್ರತಿಯಾಗಿ ದೇಶದಲ್ಲಿ ಹೂಡಿಕೆ ನಿಧಿಯನ್ನು ರಚಿಸುವುದಕ್ಕೆ ಉಕ್ರೇನ್ ಗೆ ಅಮೆರಿಕ ಅವಕಾಶ ನೀಡಿದೆ.

ಜನವರಿಯಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಧಿಕಾರ ವಹಿಸಿಕೊಂಡಾಗಿನಿಂದ, ಅಮೆರಿಕ ಮತ್ತು ಉಕ್ರೇನ್ ನೈಸರ್ಗಿಕ ಸಂಪನ್ಮೂಲಗಳ ಕುರಿತು ಒಪ್ಪಂದಕ್ಕೆ ಸಹಿ ಹಾಕಲು ಪ್ರಯತ್ನಿಸುತ್ತಿವೆ. ಎರಡು ರಾಷ್ಟ್ರಗಳ ನಡುವಿನ ಒಪ್ಪಂದವು ಇತ್ತೀಚೆಗೆ ಉಭಯ ನಾಯಕರ ಮಧ್ಯೆ ನಡೆದ ಚರ್ಚೆಗಳ ನಂತರ ಮಹತ್ವದ ಬೆಳವಣಿಗೆ ನಡೆದಿದೆ. ಆರ್ಥಿಕ ಪಾಲುದಾರಿಕೆ ಒಪ್ಪಂದಗಳಿಗೆ ಎರಡೂ ರಾಷ್ಟ್ರಗಳು ಮೊನ್ನೆ ಬುಧವಾರ ಒಪ್ಪಂದಕ್ಕೆ ಸಹಿ ಹಾಕಿವೆ ಎಂದು ಯುಎಸ್ ವಾಣಿಜ್ಯ ಇಲಾಖೆ ತಿಳಿಸಿದೆ. ಯುಎಸ್ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್, ಅಧ್ಯಕ್ಷರು ಹೇಳಿದಂತೆ, ಅಮೆರಿಕ ಉಕ್ರೇನ್‌ಗೆ ಸಹಾಯ ಮಾಡಲು ಬದ್ಧವಾಗಿದೆ. ಈ ಒಪ್ಪಂದವು ಟ್ರಂಪ್ ಆಡಳಿತವು ದೀರ್ಘಾವಧಿಯಲ್ಲಿ ಮುಕ್ತ, ಸಾರ್ವಭೌಮ ಮತ್ತು ಸಮೃದ್ಧ ಉಕ್ರೇನ್ ನ್ನು ಕೇಂದ್ರೀಕರಿಸಿದ ಶಾಂತಿ ಪ್ರಕ್ರಿಯೆಗೆ ಬದ್ಧವಾಗಿದೆ ಎಂದು ರಷ್ಯಾಕ್ಕೆ ಸ್ಪಷ್ಟವಾಗಿ ಸಂದೇಶ ರವಾನಿಸುತ್ತದೆ ಎಂದು ಸಿಎನ್‌ಎನ್ ವರದಿ ಮಾಡಿದೆ.




ಉಕ್ರೇನ್ ಸರ್ಕಾರದ ಪರವಾಗಿ ಒಪ್ಪಂದಕ್ಕೆ ಸಹಿ ಹಾಕಲು ಉಕ್ರೇನ್‌ನ ಆರ್ಥಿಕ ಸಚಿವೆ ಯೂಲಿಯಾ ಸ್ವೈರಿಡೆಂಕೊ ಅಮೆರಿಕದಲ್ಲಿದ್ದರು. ಈ ಕುರಿತು ಎಕ್ಸ್ ಖಾತೆಯಲ್ಲಿ ಬರೆದುಕೊಂಡಿರುವ ಅವರು, ಉಕ್ರೇನ್ ಸರ್ಕಾರದ ಪರವಾಗಿ, ನಾನು ಯುನೈಟೆಡ್ ಸ್ಟೇಟ್ಸ್-ಉಕ್ರೇನ್ ಪುನರ್ನಿರ್ಮಾಣ ಹೂಡಿಕೆ ನಿಧಿಯ ಸ್ಥಾಪನೆಯ ಒಪ್ಪಂದಕ್ಕೆ ಸಹಿ ಹಾಕಿದ್ದೇನೆ. ಯುನೈಟೆಡ್ ಸ್ಟೇಟ್ಸ್ ಜೊತೆಗೆ, ನಮ್ಮ ದೇಶಕ್ಕೆ ಜಾಗತಿಕ ಹೂಡಿಕೆಯನ್ನು ಆಕರ್ಷಿಸುವ ನಿಧಿಯನ್ನು ನಾವು ರಚಿಸುತ್ತಿದ್ದೇವೆ ಎಂದು ಹೇಳಿದ್ದಾರೆ.

## ಪಾಕ್ ವಿಮಾನಗಳ ಸಿಗ್ನಲ್ ತಡೆಗೆ ಜಾಮಿಂಗ್ ವ್ಯವಸ್ಥೆ

**ನವದೆಹಲಿ:** ಪಾಕಿಸ್ತಾನದ ಮಿಲಿಟರಿ ವಿಮಾನಗಳು ಬಳಸುವ ಗ್ಲೋಬಲ್ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಮ್ (ಜಿಎನ್‌ಎಸ್‌ಎಸ್) ಸಂಕೇತಗಳನ್ನು ಅಡ್ಡಿಪಡಿಸಲು ಭಾರತವು ತನ್ನ ಪಶ್ಚಿಮ ಗಡಿಯುದ್ದಕ್ಕೂ ಸುಧಾರಿತ ಜಾಮಿಂಗ್ ವ್ಯವಸ್ಥೆಗಳನ್ನು ನಿಯೋಜಿಸಿದೆ, ಇದು ಅವುಗಳ ಸಂಚರಣೆ ಮತ್ತು ದಾಳಿ ಸಾಮರ್ಥ್ಯಗಳನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ ಎಂದು ಮೂಲಗಳು ತಿಳಿಸಿವೆ.

ಏಪ್ರಿಲ್ 30 ರಿಂದ ಮೇ 23 ರವರೆಗೆ ಜಾರಿಗೆ ಬರುವಂತೆ ಪಾಕಿಸ್ತಾನ ನಿರ್ವಹಿಸುವ ಎಲ್ಲಾ ವಿಮಾನಗಳಿಗೆ ಭಾರತ ತನ್ನ ವಾಯುಪ್ರದೇಶವನ್ನು ಸ್ಥಗಿತಗೊಳಿಸಿದ ನಂತರ ಈ ಕ್ರಮ ಕೈಗೊಳ್ಳಲಾಗಿದೆ. ಭಾರತೀಯ ಜಾಮಿಂಗ್ ವ್ಯವಸ್ಥೆಗಳು ಜಿಪಿಎಸ್ (ಯುಎಸ್), ಗ್ಲೋನಾಸ್ (ರಷ್ಯಾ) ಮತ್ತು ಬೀಡೌ (ಚೀನಾ) ಸೇರಿದಂತೆ ಅನೇಕ ಉಪಗ್ರಹ ಆಧಾರಿತ ನ್ಯಾವಿಗೇಷನ್ ಪ್ಲಾಟ್‌ಫಾರ್ಮ್‌ಗಳಲ್ಲಿ ಹಸ್ತಕ್ಷೇಪ ಮಾಡುವ ಸಾಮರ್ಥ್ಯವನ್ನು ಹೊಂದಿವೆ ಎಂದು ಮೂಲಗಳು ತಿಳಿಸಿವೆ. ಯಾವುದೇ ಸಂಭಾವ್ಯ ಸಂಘರ್ಷ ಅಥವಾ ಆಕ್ರಮಣದ ಸಮಯದಲ್ಲಿ ಪಾಕಿಸ್ತಾನದ ಪರಿಸ್ಥಿತಿಯ ಅರಿವು, ಗುರಿ ನಿಖರತೆ ಮತ್ತು ನಿಖರ-ಮಾರ್ಗದರ್ಶಿತ ಶಸ್ತ್ರಾಸ್ತ್ರಗಳ ಪರಿಣಾಮಕಾರಿತ್ವವನ್ನು ದುರ್ಬಲಗೊಳಿಸಲು ಈ ನಿಯೋಜನೆಯನ್ನು ವಿನ್ಯಾಸಗೊಳಿಸಲಾಗಿದೆ ಎಂದು ಅವರು ಹೇಳಿದರು. ಭಾರತವು ಏಪ್ರಿಲ್ 30 ರಿಂದ ಮೇ 23 ರವರೆಗೆ ಜಾರಿಗೆ ಬರುವಂತೆ ವಾಣಿಜ್ಯ ವಿಮಾನಯಾನ ಮತ್ತು ಮಿಲಿಟರಿ ವಿಮಾನಗಳು ಸೇರಿದಂತೆ ಪಾಕಿಸ್ತಾನದಿಂದ ನೋಂದಾಯಿಸಿದ, ನಿರ್ವಹಿಸುವ ಅಥವಾ ಗುತ್ತಿಗೆ ಪಡೆದ ಎಲ್ಲಾ ವಿಮಾನಗಳಿಗೆ ತನ್ನ ವಾಯುಪ್ರದೇಶವನ್ನು ನಿರ್ಬಂಧಿಸಿ ನೋಟಾಮ್ ಹೊರಡಿಸಿತು.



## 5 ವರ್ಷಗಳ ನಂತರ ಸೋಂಕಿನ ಮೂಲ ಪತ್ತೆ, ವೈಟ್ ಪೇಪರ್ ಬಿಡುಗಡೆ

**ಬೀಜಿಂಗ್ :** ವಿಶ್ವವನ್ನೇ ತಲ್ಲಣಗೊಳಿಸಿದ್ದ ಕೋವಿಡ್ ಸಾಂಕ್ರಾಮಿಕ ರೋಗದ ಮೂಲವನ್ನು ಚೀನಾ ಪತ್ತೆಹಚ್ಚಿ, ಶ್ವೇತ ಪತ್ರ ಬಿಡುಗಡೆ ಮಾಡಿದೆ. ಈ ವೈರಸ್ ಹರಡಲು ಮೂಲ ಕಾರಣವೇ ಅಮೆರಿಕಾ ಎಂದು ಚೀನಾ ದೂರಿದೆ. ಇನ್ನೊಂದು ಕಡೆ, ಚೀನಾ ಸರ್ಕಾರದ ವುಹಾನ್ ಪ್ರಯೋಗಾಲಯದಲ್ಲಿ ಈ ಸೋಂಕು ಹರಡಿ, ಸಾಂಕ್ರಾಮಿಕ ರೋಗವಾಗಿ ಹರಡಿದೆ ಎಂದು ಅಮೆರಿಕಾ ಆರೋಪಿಸಿದೆ.

ಡೊನಾಲ್ಡ್ ಟ್ರಂಪ್ ಅವರ ಹೊಸ ಆರ್ಥಿಕ ನೀತಿಯಿಂದಾಗಿ ಅಮೆರಿಕಾ ಮತ್ತು ಚೀನಾದ ನಡುವಿನ ಸಂಬಂಧ ಹದೆಗೆಟ್ಟಿದೆ. ಈಗ, ಕೋವಿಡ್ ವಿಚಾರದಲ್ಲಿ ಒಬ್ಬರು ಇನ್ನೊಬ್ಬರ ಮೇಲೆ ಗೂಬೆ ಕೂರಿಸಿ ವಾಗ್ಯುದ್ದಕ್ಕೆ ಇಳಿದಿದ್ದಾರೆ ಕೋವಿಡ್ 19 ಬಗ್ಗೆ ಹೊಸ ಅಂತರ್ಜಾಲದಲ್ಲಿ ಚೀನಾ, ಈ ಆರೋಪವನ್ನು ಮಾಡಿದೆ. ಕಳೆದ ಏಪ್ರಿಲ್ 18ರಂದು ಅಮೆರಿಕಾದ ಶ್ವೇತ ಭವನವು ಹೊಸ ಕೋವಿಡ್ ವೆಬ್ಸೈಟ್ ಅನ್ನು ಆರಂಭಿಸಿತ್ತು. ಇದರಲ್ಲಿ, 'ಚೀನಾದ ವುಹಾನ್ ಪ್ರಯೋಗಾಲಯದಲ್ಲಿ ನಡೆದ ಸಂಶೋಧನೆಯಿಂದಾಗಿ ಈ ಸೋಂಕು ಹುಟ್ಟಿಕೊಂಡಿತು' ಎಂದು ಅದರಲ್ಲಿ ವರದಿ ಮಾಡಿತ್ತು. ಇದು, ಚೀನಾದ ಕೆಂಗಣ್ಣಿಗೆ ಕಾರಣವಾಗಿತ್ತು.

ಈ ಅಂತರ್ಜಾಲದಲ್ಲಿ ಅಮೆರಿಕಾದ ಮಾಜಿ ಅಧ್ಯಕ್ಷ ಜೋ ಬೈಡನ್, ಆರೋಗ್ಯ ಇಲಾಖೆಯ ಸಲಹೆಗಾರ ಆಂಥೋನಿ ಫೌಸಿ ಮತ್ತು ವಿಶ್ವ ಆರೋಗ್ಯ ಸಂಸ್ಥೆಯನ್ನೂ ಟೀಕಿಸಲಾಗಿದೆ. ಈ ಮೂವರು, ಸಾಂಕ್ರಾಮಿಕ ರೋಗದ ಹಾವಳಿಯನ್ನು ಸರಿಯಾಗಿ ನಿಭಾಯಿಸಿಲ್ಲ ಎಂದು ದೂರಲಾಗಿದೆ.



**ಅಮೆರಿಕಾದ ಹೇಳಿಕೆಗೆ ಕೌಂಟರ್ ಕೊಟ್ಟಿರುವ ಚೀನಾ, 'ಕೋವಿಡ್ 19 ವೈರಸ್ ಚೀನಾದಲ್ಲಿ ಪತ್ತೆಯಾಗುವ ಮುನ್ನವೇ ಅಮೆರಿಕಾದಲ್ಲಿ ಕಾಣಿಸಿಕೊಂಡಿತ್ತು' ಎಂದು ಪ್ರತಿಕ್ರಿಯೆ ನೀಡಿದೆ. ಅಮೆರಿಕಾವು, ಜಗತ್ತಿಗೆ ತಪ್ಪು ಮಾಹಿತಿಯನ್ನು ಹರಡುತ್ತಿದೆ ಎಂದು ಚೀನಾದ ಅಧಿಕಾರಿಗಳು, ದೊಡ್ಡಣ್ಣನ ಮೇಲೆ ಕಿಡಿಕಾರಿದ್ದಾರೆ.**


ಅಮೆರಿಕಾದಲ್ಲಿ ಆ ಸೋಂಕು ಹುಟ್ಟಿಕೊಂಡಿತ್ತು ಎನ್ನುವ ವಿಚಾರಕ್ಕೆ ಸಂಬಂಧಿಸಿದಂತೆ ನಮ್ಮಲ್ಲಿ ಸಾಕಷ್ಟು ಪುರಾವೆಗಳಿವೆ. ಈ ವಿಚಾರದಲ್ಲಿ ಅಮೆರಿಕಾ ರಾಜಕೀಯ ಮಾಡುವುದನ್ನು ಬಿಡಲಿ, ಸುಳ್ಳು ಕಥೆ ಕಟ್ಟುವುದನ್ನು ಮೊದಲು ನಿಲ್ಲಿಸಿ ಎಂದು ಚೀನಾ, ಎಚ್ಚರಿಕೆಯನ್ನು ನೀಡಿದೆ.

## ಗಡ್ಡ ತೆಗೆಯದ ಪತಿ, ಬೇಸತ್ತು ಗಂಡನ ತಮ್ಮನ ಜೊತೆಗೆ ಮಹಿಳೆ ಪರಾರಿ

**ಮೀರತ್:** ಇತ್ತೀಚಿನ ದಿನಗಳಲ್ಲಿ ದಾಂಪತ್ಯ ಜೀವನ ಅತ್ಯಂತ ದುರ್ಬಲವಾಗುತ್ತಿದೆ. ಸಣ್ಣ ಪುಟ್ಟ ವಿಷಯಗಳಿಗೆ ವಿಚ್ಛೇದನ ಪಡೆಯುವುದು ಬೇರೆ ಮಾತು ಆದರೆ ಕೊಲೆ, ಮನೆ ಬಿಟ್ಟು ಪರಾರಿಯಾಗುವಂತಹ ಘಟನೆಗಳು ಹೆಚ್ಚುತ್ತಿದ್ದು ಆತಂಕ ಮೂಡಿಸುತ್ತಿದೆ. ಇಂಥಹದ್ದೇ ಘಟನೆ ಮೀರತ್ ನಲ್ಲಿ ನಡೆದಿದೆ.

ಪದೇ ಪದೇ ಗಡ್ಡ ತೆಗೆಯುವಂತೆ ಮನವಿ ಮಾಡಿಕೊಂಡರೂ ತನ್ನ ಮಾತು ಕೇಳದ ಗಂಡನ ವಿರುದ್ಧ ಮುನಿಸಿಕೊಂಡ ಮಹಿಳೆಯೊಬ್ಬರು ಗಂಡನ ತಮ್ಮನ ಜೊತೆಯೇ ಪರಾರಿಯಾಗಿದ್ದಾರೆ. ಉತ್ತರ ಪ್ರದೇಶದ ಮೀರತ್‌ನಲ್ಲಿ ಈ ವಿಚಿತ್ರ ಘಟನೆ ನಡೆದಿದೆ. ಮೀರತ್‌ನ ಉಜ್ವಲ್ ಗಾರ್ಡನ್ ಕಾಲೋನಿಯಲ್ಲಿ ವಾಸಿಸುವ ಮುಸ್ಲಿಂ ಧರ್ಮಗುರು ಶಕೀರ್ ಎಂಬ ವ್ಯಕ್ತಿ ಜೊತೆ, ಏಳು ತಿಂಗಳ ಹಿಂದೆ ಅರ್ಷಿ ಎಂಬ ಯುವತಿಯ ವಿವಾಹವಾಗಿತ್ತು. ಮದುವೆಯಾದ ಕೂಡಲೇ ಕ್ಲೀನ್ ಶೇವ್ ಮಾಡುವಂತೆ ತನಗೆ ಪತ್ನಿಯಿಂದ ಒತ್ತಡ ಎದುರಾಗಿತ್ತು ಎಂದು ಶಕೀರ್ ಹೇಳಿದ್ದಾರೆ.

ಕುಟುಂಬದ ಒತ್ತಡದಿಂದ ತಾನು ಆತನನ್ನು ಮದುವೆಯಾಗಿದ್ದು, ಗಡ್ಡ ತೆಗೆಯಲು ಒಪ್ಪಿದರೆ ಮಾತ್ರ ಆತನೊಂದಿಗೆ ವಾಸಿಸುವುದಾಗಿ ಅರ್ಷಿ ಹೇಳಿದ್ದಾರೆ ಎನ್ನಲಾಗಿದೆ. ಇದೇ ವಿಷಯದ ಬಗ್ಗೆ ದಂಪತಿಗಳು ಆಗಾಗ್ಗೆ ಜಗಳವಾಡುತ್ತಿದ್ದರು. ಶಕೀರ್ ತನ್ನ ಪತ್ನಿ ಗಡ್ಡ ತೆಗೆಯುವಂತೆ ಕಿರಿಕಿರಿ ಮಾಡುತ್ತಿದ್ದಾಳೆ ಎಂದು ಆಕೆಯ ಕುಟುಂಬಕ್ಕೂ ದೂರು ನೀಡಿದ್ದಾರೆ.



ಗಡ್ಡ ತೆಗೆಯುವಂತೆ ತನ್ನ ಗಂಡನಿಗೆ ಎಷ್ಟೇ ಹೇಳಿದರೂ ಆತ ಒಪ್ಪದ ಕಾರಣ ಕ್ಲೀನ್ ಶೇವ್ ಮಾಡುತ್ತಿದ್ದ ಗಂಡನ ತಮ್ಮನತ್ತ ಅರ್ಷಿ ಆಕರ್ಷಿತಳಾಗಿದ್ದು ಇಬ್ಬರೂ ಮನೆಯಿಂದ ಪರಾರಿಯಾಗಿದ್ದಾರೆ ಎಂದು ತಿಳಿದು ಬಂದಿದೆ. ಗಂಡನ ಕಿರಿಯ ಸಹೋದರನ ಜೊತೆ ಮಹಿಳೆ ಅರ್ಷಿ ಓಡಿಹೋದ ಘಟನೆ ಶಕೀರ್ ಮತ್ತು ಅವನ ಕುಟುಂಬಕ್ಕೆ ಆಘಾತ ಉಂಟುಮಾಡಿದೆ.

### ಭಾರತದೊಂದಿಗೆ ಗಟ್ಟಿಯಾಗಿ ನಿಲ್ಲುವಂತೆ ಬ್ರಿಟನ್ ಮೇಲೆ ಒತ್ತಡ ಹೇರಿದ ಸಂಸದೆ ಪ್ರೀತಿ ಪಟೇಲ್

## ಪ್ರೀತಿ ಪಟೇಲ್ ಆಕ್ರೋಶಕ್ಕೆ ಧ್ವನಿಯಾದ ಬ್ರಿಟನ್ ಸಂಸತ್ತು

**ಲಂಡನ್:** ಭಾರತೀಯ ಮೂಲದ ಬ್ರಿಟನ್ ಸಂಸದರಾದ ಪ್ರೀತಿ ಪಟೇಲ್ ಅವರು, ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯಾನಕ ಭಯೋತ್ಪಾದಕ ದಾಳಿಯನ್ನು ಖಂಡಿಸಿದ್ದಾರೆ. ಬ್ರಿಟನ್ ಸರ್ಕಾರವು ಈ ಕಷ್ಟದ ಸಮಯದಲ್ಲಿ ಭಾರತಕ್ಕೆ ಬೆಂಬಲ ನೀಡಬೇಕು. ಭಯೋತ್ಪಾದಕ ಬೆದರಿಕೆಗಳನ್ನು ಎದುರಿಸಲು ಒಟ್ಟಾಗಿ ಕೆಲಸ ಮಾಡಬೇಕು ಎಂದು ಪ್ರೀತಿ ಪಟೇಲ್ ಇದೇ ವೇಳೆ ಕರೆ ನೀಡಿದ್ದಾರೆ.

ಪಹಲ್ಗಾಮ್ ಭಯೋತ್ಪಾದಕ ದಾಳಿ ಖಂಡಿಸಿ ಯುಕೆ ಸಂಸತ್ತಿನಲ್ಲಿ ಸುದೀರ್ಘವಾಗಿ ಮಾತನಾಡಿದ ಪ್ರೀತಿ ಪಟೇಲ್, ದಾಳಿಯಲ್ಲಿ ಮೃತಪಟ್ಟವರಿಗೆ ಸಂತಾಪ ಸೂಚಿಸಿದರು. ದಾಳಿಗೆ ಕಾರಣರಾದವರನ್ನು ಭಾರತ ಅತ್ಯುಗ್ರವಾಗಿ ಶಿಕ್ಷಿಸಲಿದೆ ಎಂದು ಕನ್ಸರ್ವೇಟಿವ್ ಪಕ್ಷದ ಸಂಸದೆ ಇದೇ ವೇಳೆ ಭರವಸೆ ವ್ಯಕ್ತಪಡಿಸಿದರು.

ಭಯೋತ್ಪಾದನೆ ವಿರುದ್ಧದ ಭಾರತ ಮತ್ತು ಬ್ರಿಟನ್ ತಮ್ಮ ಜಂಟಿ ಹೋರಾಟವನ್ನು ಮತ್ತಷ್ಟು ಬಲಪಡಿಸಬೇಕು. ಭಯೋತ್ಪಾದನೆಯನ್ನು ಬೇರುಸಹಿತ ಕಿತ್ತು ಹಾಕುವ ಸಮಯ ಬಂದಿದೆ. ಭಯೋತ್ಪಾದನೆ ವಿರುದ್ಧದ ಜಾಗತಿಕ ಹೋರಾಟಕ್ಕೆ ನಾವು ಮತ್ತಷ್ಟು ಬಲ ತುಂಬಬೇಕಿದೆ ಎಂದು ಪ್ರೀತಿ ಪಟೇಲ್ ತಮ್ಮ ಭಾಷಣದಲ್ಲಿ ಉಲ್ಲೇಖಿಸಿದರು.

- **ಪಹಲ್ಗಾಮ್ ಭಯೋತ್ಪಾದಕ ದಾಳಿ ಖಂಡಿಸಿದ ಭಾರತೀಯ ಮೂಲದ ಬ್ರಿಟನ್ ಸಂಸದೆ ಪ್ರೀತಿ ಪಟೇಲ್**
- **ಭಾರತದೊಂದಿಗೆ ಗಟ್ಟಿಯಾಗಿ ನಿಲ್ಲುವಂತೆ ಬ್ರಿಟನ್ ಮೇಲೆ ಒತ್ತಡ ಹೇರಿದ ಸಂಸದೆ ಪ್ರೀತಿ ಪಟೇಲ್**
- **ಭಯೋತ್ಪಾದನೆ ವಿರುದ್ಧ ಬ್ರಿಟನ್-ಭಾರತ ಜಂಟಿ ಹೋರಾಟಕ್ಕೆ ಕರೆ ನೀಡಿದ ಪ್ರೀತಿ ಪಟೇಲ್**



2002ರ ನವದೆಹಲಿ ಘೋಷಣೆಯಿಂದ ಹಿಡಿದು ಯುಕೆ-ಇಂಡಿಯಾ 2030ರ ವರೆಗೆ, ಭಾರತ ಮತ್ತು ಯುಕೆ ನಡುವಿನ ಕಾರ್ಯತಂತ್ರದ ಸಂಬಂಧವನ್ನು ಸ್ಮರಿಸಿದ ಪ್ರೀತಿ ಪಟೇಲ್, 2002ರಲ್ಲಿ ನವದೆಹಲಿ ಘೋಷಣೆ ಮತ್ತು 2016ರಲ್ಲಿ ಭಾರತ-ಯುಕೆ ಕಾರ್ಯತಂತ್ರದ ಪಾಲುದಾರಿಕೆ, 2022ರಲ್ಲಿ ಘೋಷಿಸಲಾದ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆ ಮತ್ತು ಹಿಂದಿನ ಸರ್ಕಾರದ ಅಡಿಯಲ್ಲಿ ಒಪ್ಪಲಾದ ಯುಕೆ-ಇಂಡಿಯಾ 2030 ರವರೆಗೆ ನಾವು ಭಾರತದೊಂದಿಗೆ ಹೊಂದಿದ್ದೇವೆ. ಆದ್ದರಿಂದ, ಭದ್ರತಾ ವ್ಯವಸ್ಥೆಗಳು ಸಂಪೂರ್ಣವಾಗಿ ಭದ್ರವಾಗಿವೆ.

ಅದಕ್ಕಾಗಿಯೇ ನಾವು ಯಾವಾಗಲೂ ಭಾರತದಲ್ಲಿರುವ ನಮ್ಮ ಸ್ನೇಹಿತರೊಂದಿಗೆ ಹೆಜ್ಜೆ ಹಾಕಬೇಕು ಎಂದು ಹೇಳಿದರು.

**ಪಹಲ್ಗಾಮ್ ಭಯೋತ್ಪಾದಕ ದಾಳಿ ನಡೆಸಿದವರ ಬಗ್ಗೆ ಯುಕೆ ಸರ್ಕಾರಕ್ಕೆ ಏನು ಮಾಹಿತಿ ಇದೆ? ಎಂದು ಪ್ರೀತಿ ಪಟೇಲ್ ಪ್ರಶ್ನಿಸಿದ್ದಾರೆ. ಯುಕೆಯಲ್ಲಿ ನಿಷೇಧಿಸಲ್ಪಟ್ಟಿರುವ ಭಯೋತ್ಪಾದಕ ಗುಂಪಾದ ಲಷ್ಕರ್-ಎ-ತೊಯ್ಬಾ ಇದಕ್ಕೆ ಕಾರಣವೆಂದು ಸರ್ಕಾರ ನಂಬುತ್ತದೆಯೇ? ಅಥವಾ ಈ ಭಯೋತ್ಪಾದಕ ಕೃತ್ಯದ ಅಪರಾಧಿಗಳಿಗೆ ಪಾಕಿಸ್ತಾನದೊಂದಿಗೆ ಯಾವುದೇ ಗಡಿಯಾಚೆಗಿನ ಸಂಬಂಧಗಳ ಬಗ್ಗೆ ಸರ್ಕಾರಕ್ಕೆ ತಿಳಿದಿದೆಯೇ? ಎಂದು ಪ್ರೀತಿ ಪಟೇಲ್ ಪ್ರಶ್ನಿಸಿದ್ದಾರೆ.**

**ಭಾರತದ ಪರ ಗಟ್ಟಿ ವಕಲಾತ್ತು**

ಮುಂದುವರೆದು ಕಳೆದ ವಾರ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೊಂದಿಗೆ ಯುಕೆ ಪ್ರಧಾನಿ ಮಾತನಾಡಿದ್ದಾರೆಂದು ನಮಗೆ ತಿಳಿದಿದೆ. ಆದರೆ ಈ ಭಯೋತ್ಪಾದಕ ದಾಳಿಗೆ ಪ್ರತಿಕ್ರಿಯೆಯಾಗಿ ಯುಕೆ ಯಾವುದೇ ನಿರ್ದಿಷ್ಟ ಬೆಂಬಲವನ್ನು ನೀಡಿದೆಯೇ, ಭಾರತದಲ್ಲಿರುವ ನಮ್ಮ ಸ್ನೇಹಿತರಿಗೆ ಸಹಾಯ ಮಾಡಲು ಯಾವುದೇ ಪ್ರಾಯೋಗಿಕ ಕ್ರಮಗಳನ್ನು ತೆಗೆದುಕೊಂಡಿದೆಯೇ? ಎಂದು ಪ್ರೀತಿ ಪಟೇಲ್ ಪ್ರಶ್ನಿಸಿದ್ದಾರೆ. ಈ ದಾಳಿಯಿಂದ ಯುಕೆ ಮೇಲಾಗುವ ಭದ್ರತಾ ಪರಿಣಾಮಗಳ ಬಗ್ಗೆಯೂ ಪ್ರೀತಿ ಪಟೇಲ್ ಕಳವಳ ವ್ಯಕ್ತಪಡಿಸಿದ್ದಾರೆ. ಭಯೋತ್ಪಾದಕ ಗುಂಪು ಹಮಾಸ್‌ನೊಂದಿಗೆ ತೊಡಗಿಸಿಕೊಂಡಿರಬಹುದು ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ. ಇದೇ ವೇಳೆ ಭಾರತ ಮತ್ತು ಪಾಕಿಸ್ತಾನದ ನಡುವಿನ ಉದ್ವಿಗ್ನತೆಯನ್ನು ಕಡಿಮೆ ಮಾಡಲು, ಯುಕೆ ತನ್ನ ಪ್ರಭಾವವನ್ನು ಬಳಸುತ್ತದೆಯೇ? ಎಂದೂ ಪ್ರೀತಿ ಪಟೇಲ್ ಪ್ರಶ್ನಿಸಿದ್ದಾರೆ. ಒಟ್ಟಿನಲ್ಲಿ ಬ್ರಿಟನ್‌ನ ಭಾರತೀಯ ಮೂಲದ ಸಂಸದೆ ಪ್ರೀತಿ ಪಟೇಲ್ ಅವರು ಪಹಲ್ಗಾಮ್ ದಾಳಿಯನ್ನು ಅಲ್ಲಿನ ಸಂಸತ್ತಿನಲ್ಲಿ ಖಂಡಿಸಿದ್ದು, ಭಯೋತ್ಪಾದನೆ ವಿರುದ್ಧದ ಭಾರತ-ಬ್ರಿಟನ್ ಜಂಟಿ ಹೋರಾಟವನ್ನು ಮತ್ತಷ್ಟು ಬಲಪಡಿಸುವಂತೆ ಕರೆ ನೀಡಿದ್ದಾರೆ.



# ಶೂಟಿಂಗ್ ಆರಂಭಿಸಿದ ರಾಕಿಂಗ್ ಸ್ಟಾರ್ ಯಶ್

ರಾಕಿಂಗ್ ಸ್ಟಾರ್ ಯಶ್ ಅವರು 'ಟಾಕ್ಸಿಕ್' ಚಿತ್ರದ ನಡುವೆ ಇದೀಗ 'ರಾಮಾಯಣ' ಚಿತ್ರ ಕೈಗೆತ್ತಿಕೊಂಡಿದ್ದಾರೆ. 'ರಾಮಾಯಣ' ಚಿತ್ರತಂಡವನ್ನು ಸೇರಿಕೊಂಡಿದ್ದಾರೆ. ರಾವಣ ಪಾತ್ರಧಾರಿಯಾಗಿ ಮೊದಲ ದೃಶ್ಯದಲ್ಲಿ ಯಶ್ ನಟಿಸಿದ್ದಾರೆ. ಏ.30ರಿಂದ ಒಂದು ತಿಂಗಳುಗಳ ಕಾಲ ಯಶ್ 'ರಾಮಾಯಣ ಪಾರ್ಟ್ 1' ಶೂಟಿಂಗ್‌ನಲ್ಲಿ ತೊಡಗಿಸಿಕೊಳ್ಳಲಿದ್ದಾರೆ ಎನ್ನಲಾಗಿದೆ. ಅದಕ್ಕಾಗಿ ಮುಂಬೈನಲ್ಲಿಯೇ ಯಶ್ ಬೀಡು ಬೀಡಲಿದ್ದಾರೆ. ಸದ್ಯದಲ್ಲೇ ಸಾಯಿ ಪಲ್ಲವಿ (ಸೀತಾ), ರಣಬೀರ್ ಕಪೂರ್ (ರಾಮ), ಸನ್ನಿ ಡಿಯೋಲ್ (ಹನುಮಾನ್) ಚಿತ್ರತಂಡವನ್ನು ಸೇರಿಕೊಳ್ಳಲಿದ್ದಾರೆ. ರಾವಣ ಪಾತ್ರಕ್ಕೆ ಜೀವತುಂಬಲು ತೆರೆಮರೆಯಲ್ಲಿ ಭರ್ಜರಿ ತಯಾರಿ ಮಾಡಿಕೊಂಡೇ ಯಶ್ ಅಖಾಡಕ್ಕೆ ಇಳಿದಿದ್ದಾರೆ. ನಟನೆಯ ಜೊತೆ ಸಹ- ನಿರ್ಮಾಪಕನಾಗಿ ಕೂಡ ಅವರು ಕೈಜೋಡಿಸಿದ್ದಾರೆ. ರಾವಣ ಪಾತ್ರಕ್ಕೆ ಬಣ್ಣ ಹಚ್ಚೋದಕ್ಕೂ ಮುನ್ನ ಇತ್ತೀಚೆಗೆ ಉಜ್ಜನಿಯ ಮಹಾಕಾಳೇಶ್ವರ ದೇಗುಲಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ್ದರು.

ಅಂದಹಾಗೆ, ಯಶ್ ನಟನೆಯ 'ಟಾಕ್ಸಿಕ್' ಸಿನಿಮಾ ಕನ್ನಡ, ಇಂಗ್ಲಿಷ್ ಜೊತೆ ಬಹುಭಾಷೆಗಳಲ್ಲಿ ಸಿನಿಮಾ ಮೂಡಿ ಬರಲಿದೆ.



# ಗುಲಾಬಿ ಬಣ್ಣದ ಡ್ರೆಸ್‌ನಲ್ಲಿ ದೀಪಿಕಾ ದಾಸ್ ಮಿಂಚಿಂಗ್

**ದೀಪಿಕಾಗೆ ದೀಪಕ್ ಮತ್ತಷ್ಟು ಪ್ರೋತ್ಸಾಹ**


'ಬಿಗ್ ಬಾಸ್' ಖ್ಯಾತಿಯ ದೀಪಿಕಾ ದಾಸ್ ಹೊಸ ಫೋಟೋಶೂಟ್‌ವೊಂದರಲ್ಲಿ ಮಿಂಚಿದ್ದಾರೆ. ಕೂಲಿಂಗ್ ಗ್ಲಾಸ್ ಹಾಕಿಕೊಂಡು ಸಖತ್ ಸ್ಟೈಲ್ ಆಗಿ ಕಾಣಿಸಿಕೊಂಡಿದ್ದಾರೆ.

'ಬಿಗ್ ಬಾಸ್' ಬೆಡಗಿಯ ಫೋಟೋ ಕಂಡು ಪಡ್ಡೆಹೈಕ್ಳು ಫಿದಾ ಆಗಿದ್ದಾರೆ. ಸದಾ ಒಂದಲ್ಲಾ ಒಂದು ಫೋಟೋಶೂಟ್ ಮೂಲಕ ನಟಿ ದೀಪಿಕಾ ದಾಸ್ ಸದ್ದು ಮಾಡುತ್ತಲೇ ಇರುತ್ತಾರೆ. ಗುಲಾಬಿ ಬಣ್ಣದ ಧಿರಿಸಿನಲ್ಲಿ ನಟಿ ಮಿಂಚಿದ್ದಾರೆ. ಕಣ್ಣಿಗೆ ಕೂಲಿಂಗ್ ಗ್ಲಾಸ್ ಹಾಕಿಕೊಂಡು ಸಖತ್ ಆಗಿ ಪೋಸ್ ಕೊಟ್ಟಿದ್ದಾರೆ. ವಿವಿಧ ಭಂಗಿಯಲ್ಲಿ ನಟಿ ಫೋಟೋಶೂಟ್ ಮಾಡಿಸಿದ್ದಾರೆ. 'ಸೌಂದರ್ಯ ಸಮರ ಸೋತವನೇ ಅಮರ' ಎಂದೆಲ್ಲಾ ನಟಿಗೆ ಬಣ್ಣಿಸಿ ನೆಟ್ಟಿಗರು ಕಾಮೆಂಟ್ ಮಾಡಿದ್ದಾರೆ.

ಕಳೆದ ವರ್ಷ ಮಾರ್ಚ್ 1ರಂದು ಉದ್ಯಮಿ ದೀಪಕ್ ಜೊತೆ ದೀಪಿಕಾ ದಾಸ್ ಮದುವೆಯಾದರು. ಗುರುಹಿರಿಯರ ಒಪ್ಪಿಗೆ ಪಡೆದು ಪ್ರೀತಿಸಿದ ಹುಡುಗನ ಜೊತೆ ಗೋವಾದಲ್ಲಿ ನಟಿ ಹಸೆಮಣೆ ಏರಿದರು. ನಟಿಯ ಸಿನಿಮಾ ಕನಸಿಗೆ ಪತಿ ದೀಪಕ್ ಜೊತೆಯಾಗಿ ನಿಂತಿದ್ದಾರೆ. ನಟನಾ ಕ್ಷೇತ್ರದಲ್ಲಿ ಮುಂದುವರಿಯಲು ದೀಪಿಕಾಗೆ ದೀಪಕ್ ಮತ್ತಷ್ಟು ಪ್ರೋತ್ಸಾಹ ನೀಡುತ್ತಿದ್ದಾರೆ. ಈ ವರ್ಷ 'ಪಾರು ಪಾರ್ವತಿ' ಸಿನಿಮಾ ಮೂಲಕ ಪೂರ್ಣ ಪ್ರಮಾಣದ ನಾಯಕಿಯಾಗಿ ಬೆಳ್ಳಿಪರದೆಯಲ್ಲಿ ಮಿಂಚಿದರು. ಆ ನಂತರ ಒಟಿಟಿಯಲ್ಲೂ ಸಿನಿಮಾ ರಿಲೀಸ್ ಆಯ್ತು. ನಾಗಿಣಿ ಸೀರಿಯಲ್, ಶೈನ್ ಶೆಟ್ಟಿ ಗೆದ್ದಿದ್ದ ಬಿಗ್ ಬಾಸ್ ಕನ್ನಡ ಸೀಸನ್ 7ರಲ್ಲಿ ದೀಪಿಕಾ ಸ್ಪರ್ಧಿಯಾಗಿದ್ದರು. ಬಿಗ್ ಬಾಸ್ 9ರಲ್ಲೂ ಭಾಗವಹಿಸಿದ್ದರು. 2 ಸೀಸನ್‌ನಲ್ಲೂ ಟಾಪ್ ಫೈನಲಿಸ್ಟ್ ಆಗಿದ್ರು. 2 ಬಾರಿಯೂ ಬಿಗ್ ಬಾಸ್ ಗೆಲುವಿನ ಪಟ್ಟ ಮಿಸ್ ಆಗಿತ್ತು.



**ಸಿನಿ ವಾಹಿನಿ**



# ಯುದ್ಧ ಬೇಡ ಯಾರೂ ಉದ್ಧಾರ ಆಗಲ್ಲ

**ಯುದ್ಧನೇ ಪರಿಹಾರ ಅಲ್ಲ**

ಯುದ್ಧ ಬೇಡ...ಯುದ್ಧದಿಂದ ಯಾರೂ ಉದ್ಧಾರ ಆಗಲ್ಲ, ಅದರಿಂದ ನಮ್ಮ ಸೈನಿಕರೇ ಸಾಯೋದು ಎಂದು ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಬಗ್ಗೆ ರಮ್ಯಾ ಮಾತನಾಡಿದ್ದಾರೆ. ಪಹಲ್ಗಾಮ್‌ನಲ್ಲಿ ದಾಳಿ ಆಗಿರೋದು ಗುಪ್ತಚರ ವೈಫಲ್ಯ ಹಾಗೂ ಭದ್ರತಾ ಉಲ್ಲಂಘನೆನೇ ಕಾರಣ. ಹೇಗೆ ಉಗ್ರರು ಒಳಗೆ ಬಂದ್ರು, ಹೀಗೆಲ್ಲಾ ಆಗಲು ಏನು ನ್ಯೂನತೆ ಕಾರಣ ಅನ್ನೋದನ್ನು ತಿಳಿದುಕೊಳ್ಳಬೇಕು. ಈಗ ಸರ್ಕಾರದವರು ಏನು ಆಕ್ಷನ್ ತೆಗೆದುಕೊಳ್ತಾರೆ ಅಂತ ನೋಡಬೇಕು ಎಂದಿದ್ದಾರೆ. ಈ ಹಿಂದೆ ಉಪೇಂದ್ರ ಜೊತೆಗಿನ ಸಿನಿಮಾವೊಂದಕ್ಕೆ ಕಾಶ್ಮೀರಕ್ಕೆ ಹೋಗಿ ಬಂದಿದ್ದೇನೆ. ಆಗ ನಾವು ಕಾಶ್ಮೀರದಲ್ಲಿ ಶೂಟಿಂಗ್ ಮಾಡುವಾಗ ಫುಲ್ ಸೆಕ್ಯೂರಿಟಿ ಕೊಟ್ಟಿದ್ದರು ಎಂದು ತಿಳಿಸಿದರು.

ಯುದ್ಧದ ಬಗ್ಗೆ ಮಾತನಾಡಿ, ವೈಯಕ್ತಿಕವಾಗಿ ಹಿಂಸೆ ಮಾಡೋದನ್ನು ನಾನು ಇಷ್ಟಪಡಲ್ಲ. ಯುದ್ಧ ಮಾಡೋದ್ರಿಂದ ಯಾರು ಉದ್ಧಾರ ಆಗಲ್ಲ. ಎಲ್ಲದ್ದಕ್ಕೂ ಯುದ್ಧನೇ ಉತ್ತರ ಅಲ್ಲ, ಇದ್ದರಿಂದ ನಮ್ಮ ಸೈನಿಕರೇ ಸಾಯೋದು. ನಾವು ನಾಯಕರನ್ನು ಎಲೆಕ್ಟ್ ಮಾಡೋದು ನಮ್ಮ ರಕ್ಷಣೆ ಮಾಡಲಿ ಅಂತ ಅಲ್ವಾ. ಇನ್ನೊಂದು ಬಾರಿ ಈ ತರ ನಡೆಯದೇ ಇರೋ ಹಾಗೇ ನೋಡಿಕೊಳ್ಳಬೇಕು. ಅದು ಬಿಟ್ಟು ಯುದ್ಧನೇ ಪರಿಹಾರ ಅಲ್ಲ ಎಂದಿದ್ದಾರೆ. ನರೇಂದ್ರ ಮೋದಿಯವರ ಮುಂದಿನ ನಿರ್ಧಾರ ಏನಿರಬಹುದು ಎಂದು ನಿಜವಾಗಲೂ ಗೊತ್ತಿಲ್ಲ. ನಾವು ಇಲ್ಲಿ ಇದ್ದೀವಿ, ಇದರ ಬಗ್ಗೆ ಕಾಮೆಂಟ್ ಮಾಡೋದು ಸುಲಭ. ಆದರೆ ಅಲ್ಲಿದ್ದವರಿಗೆ ಒಳಗೆ ಏನೆಲ್ಲಾ ರಾಜಕೀಯ ನಡೆಯುತ್ತಿದೆ ಎಂದು ಗೊತ್ತಿರುತ್ತದೆ.

# ಧರ್ಮ, ರಾಗಿಣಿ ನಟನೆಯ 'ಸಿಂಧೂರಿ' ಚಿತ್ರಕ್ಕೆ ಅದ್ಧೂರಿ ಚಾಲನೆ




'ಬಿಗ್ ಬಾಸ್' ಖ್ಯಾತಿಯ ಧರ್ಮ ಕೀರ್ತಿರಾಜ್ ಅವರು ಬ್ಯಾಕ್ ಟು ಬ್ಯಾಕ್ ಸಿನಿಮಾಗಳಲ್ಲಿ ಬ್ಯುಸಿಯಾಗ್ತಿದ್ದಾರೆ. ನಿನ್ನೆ ಅಕ್ಷಯ ತೃತೀಯ ಹಿನ್ನೆಲೆ 'ಸಿಂಧೂರಿ' ಹೊಸ ಸಿನಿಮಾಗೆ ಅದ್ಧೂರಿಯಾಗಿ ಚಾಲನೆ ನೀಡಲಾಯಿತು. ಟಿತುಪ್ಪದ ಬೆಡಗಿ ರಾಗಿಣಿ ದ್ವಿವೇದಿ ಜೊತೆ ಧರ್ಮ ಕೀರ್ತಿರಾಜ್ 'ಸಿಂಧೂರಿ' ಚಿತ್ರಕ್ಕೆ ಕೈಜೋಡಿಸಿದ್ದಾರೆ. ಏ.30ರಂದು ಬೆಂಗಳೂರಿನ ಬನಶಂಕರಿ ದೇಗುಲದಲ್ಲಿ 'ಸಿಂಧೂರಿ' ಸಿನಿಮಾದ ಮುಹೂರ್ತ ನೆರವೇರಿದೆ. ಮೇ 1ರಿಂದ 45 ದಿನಗಳ ಕಾಲ ಸಕಲೇಶಪುರ ಸೇರಿದಂತೆ ಹಲವೆಡೆ ಚಿತ್ರದ ಶೂಟಿಂಗ್ ನಡೆಯಲಿದೆ. ಡೈರೆಕ್ಟರ್ ಶಂಕರ್ ನಿರ್ದೇಶನದ 'ಸಿಂಧೂರಿ' ಚಿತ್ರ ಕಾಲ್ಪನಿಕ ಕಥೆಯಾಗಿದ್ದು, ಮರ್ಡರ್ ಮಿಸ್ಟಿ ಕಥೆ ಹೇಳಲಿದ್ದಾರೆ. ಇದರಲ್ಲಿ ಧರ್ಮಗೆ ವಿಭಿನ್ನವಾಗಿರೋ ಪಾತ್ರ ಸಿಕ್ಕಿದೆ. ಈ ಚಿತ್ರದಲ್ಲಿ ಧರ್ಮಗೆ ಜೋಡಿಯಾಗಿ ರಾಗಿಣಿ ನಟಿಸುತ್ತಿಲ್ಲ. ಬದಲಾಗಿ ಧರ್ಮಗೆ ಠಕ್ಕರ್ ಕೊಡೋ ಪಾತ್ರದಲ್ಲಿ ನಟಿ ಕಾಣಿಸಿಕೊಳ್ತಿದ್ದಾರೆ. ಚಿತ್ರದಲ್ಲಿ ತಿರುವು ಕೊಡುವ ಪವರ್‌ಫುಲ್ ಪಾತ್ರದಲ್ಲಿ ರಾಗಿಣಿ ನಟಿಸಲಿದ್ದಾರೆ. ಟಕೀಲಾ, ಅಮರಾವತಿ ಪೊಲೀಸ್ ಸ್ಟೇಷನ್, ತೆಲುಗು ಬ್ಲಡ್ ರೋಸಸ್, ನಯನ ಮಧುರ, ವಸುಂಧರ ದೇವಿ ಸೇರಿದಂತೆ ಹಲವು ಸಿನಿಮಾಗಳು ಧರ್ಮ ಕೀರ್ತಿರಾಜ್ ಕೈಯಲ್ಲಿವೆ.

# ಸುದೀಪ್ ಚಿತ್ರಕ್ಕೆ ಟೈಟ್ ಸೆಕ್ಯೂರಿಟಿ

**ಸ್ಪೆಷಲ್ ವಿಡಿಯೋ ಹಂಚಿಕೊಂಡ ಅನೂಪ್**

'ಬಿಲ್ಲರಂಗ ಬಾಷಾ' ಸಿನಿಮಾದ ಚಿತ್ರೀಕರಣದಲ್ಲಿ ಸುದೀಪ್ ಬ್ಯುಸಿಯಾಗಿದ್ದಾರೆ. ಈ ಚಿತ್ರದ ಶೂಟಿಂಗ್ ಟೈಟ್ ಸೆಕ್ಯೂರಿಟಿಯೊಂದಿಗೆ ಸಿನಿಮಾ ಮಾಡ್ತಿದ್ದಾರೆ. ಈ ಬಗ್ಗೆ ಡೈರೆಕ್ಟರ್ ಅನೂಪ್ ಭಂಡಾರಿ ವಿಡಿಯೋವೊಂದನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿದ್ದಾರೆ. ಏ.16ರಿಂದ 'ಬಿಲ್ಲರಂಗ ಬಾಷಾ' ಚಿತ್ರದ ಶೂಟಿಂಗ್ ನಡೆಯುತ್ತಿದೆ. ಈ ಬಗ್ಗೆ ಸುದೀಪ್ ಅವರೇ ಮಾಹಿತಿ ತಿಳಿಸಿದ್ದಾರೆ. ಈ ಚಿತ್ರದ ಶೂಟಿಂಗ್ ಅದೆಷ್ಟು ವ್ಯವಸ್ಥಿತವಾಗಿ ನಡೆಯುತ್ತಿದೆ. ಪ್ರತಿಯೊಬ್ಬ ಸಿಬ್ಬಂದಿಗೂ ಇಲ್ಲಿ ಐಡಿ ಕಾರ್ಡ್ ಇದೆ. ಅದನ್ನ ಚೆಕ್ ಮಾಡೋಕೆ ಸೆಕ್ಯೂರಿಟಿಗಳೂ ಇದ್ದಾರೆ. ಹಾಗೆಲ್ಲಾ ಸುಮ್ಮನೆ ಚಿತ್ರದ ಸೆಟ್ ಒಳಗೆ ಹೋಗೋಕೆ ಆಗಲ್ಲ ಎಂಬುದು ಅನೂಪ್ ಹಂಚಿಕೊಂಡ ವಿಡಿಯೋ ಮೂಲಕ ಸ್ಪಷ್ಟವಾಗಿದೆ. ಚಿತ್ರದಲ್ಲಿ ಸುದೀಪ್ ಲುಕ್ ಹೇಗಿರಲಿದೆ ಎಂಬ ಸುಳಿವು ವಿಡಿಯೋದಲ್ಲಿ ಬಿಟ್ಟು ಕೊಟ್ಟಿಲ್ಲ. ಆದರೆ ಚಿತ್ರದ ಸೆಟ್‌ಗೆ ಕೂಲಿಂಗ್ ಗ್ಲ್ಯಾಸ್ ಧರಿಸಿ ಸುದೀಪ್ ಸ್ಟೈಲೀಶ್ ಎಂಟ್ರಿ ಕೊಟ್ಟಿದ್ದಾರೆ. ಟೈಟ್ ಸೆಕ್ಯೂರಿಟಿಯೊಂದಿಗೆ ಚಿತ್ರದ ಶೂಟಿಂಗ್ ಮಾಡಲಾಗಿದೆ. ಇಡೀ ಶೂಟಿಂಗ್ ಸ್ಪಾಟ್ ಕವರ್ ಮಾಡಲಾಗಿದೆ. ಸದ್ಯ ಈ ಝಲಕ್ ನೋಡಿ ಫ್ಯಾನ್ಸ್ ಖುಷಿಪಟ್ಟಿದ್ದಾರೆ. ಸಿನಿಮಾಗಾಗಿ ಕಿಚ್ಚನ ಫ್ಯಾನ್ಸ್ ಎದುರು ನೋಡ್ತಿದ್ದಾರೆ. 'ವಿಕ್ರಾಂತ್ ರೋಣ' ಚಿತ್ರದ ಬಳಿಕ ಮತ್ತೊಮ್ಮೆ ಅನೂಪ್ ಭಂಡಾರಿ ಜೊತೆ ಸುದೀಪ್ ಕೈಜೋಡಿಸಿದ್ದಾರೆ. 'ಬಿಲ್ಲರಂಗ ಬಾಷಾ' ಸಿನಿಮಾ ಮೂಲಕ ವಿಭಿನ್ನ ಕಥೆ ಹೇಳಲು ಸುದೀಪ್ ಸಜ್ಜಾಗಿದ್ದಾರೆ.



# ಟೆಸ್ಟ್‌ನಲ್ಲಿ ಹೊಸ ಇತಿಹಾಸ ವಿಶ್ವದಾಖಲೆ ಬರೆದ ಮೆಹಿದಿ ಹಸನ್

**ಪಂದ್ಯದಲ್ಲಿ ಆಲ್ ರೌಂಡರ್ ಪ್ರದರ್ಶನ**

ಝಿಂಬಾಬ್ವೆ ವಿರುದ್ಧದ 2ನೇ ಟೆಸ್ಟ್ ಪಂದ್ಯದಲ್ಲಿ ಬಾಂಗ್ಲಾದೇಶ್ ತಂಡ ಜಯ ಸಾಧಿಸಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಝಿಂಬಾಬ್ವೆ ತಂಡವು ಮೊದಲ ಇನಿಂಗ್ಸ್‌ನಲ್ಲಿ 227 ರನ್ ಕಲೆಹಾಕಿದರೆ, ಬಾಂಗ್ಲಾದೇಶ್ ತಂಡ 444 ರನ್ ಕಲೆಹಾಕಿತು. ಇನ್ನು ದ್ವಿತೀಯ ಇನಿಂಗ್ಸ್‌ನಲ್ಲಿ 111 ರನ್‌ಗಳಿಗೆ ಆಲೌಟ್ ಆಗುವ ಮೂಲಕ ಝಿಂಬಾಬ್ವೆ ತಂಡ 106 ರನ್‌ಗಳಿಂದ ಸೋಲೊಪ್ಪಿಕೊಂಡಿದೆ.

ಟೆಸ್ಟ್ ಕ್ರಿಕೆಟ್‌ನಲ್ಲಿ ಹೊಸ ವಿಶ್ವ ದಾಖಲೆ ನಿರ್ಮಾಣವಾಗಿದೆ. ಈ ದಾಖಲೆ ಬರೆದವರು ಬಾಂಗ್ಲಾದೇಶ್ ತಂಡದ ಯುವ ಆಲ್ ರೌಂಡರ್ ಮೆಹಿದಿ ಹಸನ್ ಮಿರಾಝ್. ಚಟ್ಟೋಗ್ರಾಮ್‌ನಲ್ಲಿ ನಡೆಯುತ್ತಿರುವ ಝಿಂಬಾಬ್ವೆ ವಿರುದ್ಧದ 2ನೇ ಟೆಸ್ಟ್ ಪಂದ್ಯದಲ್ಲಿ ಆಲ್‌ರೌಂಡರ್ ಪ್ರದರ್ಶನ ನೀಡುವ ಮೂಲಕ ಮಿರಾಝ್ ಈ ವಿಶೇಷ ದಾಖಲೆ ನಿರ್ಮಿಸಿದ್ದಾರೆ.

ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಝಿಂಬಾಬ್ವೆ ತಂಡವು ಮೊದಲ ಇನಿಂಗ್ಸ್‌ನಲ್ಲಿ 227 ರನ್ ಕಲೆಹಾಕಿತು.

ಇದಕ್ಕುತ್ತರವಾಗಿ ಬ್ಯಾಟ್ ಮಾಡಿದ ಬಾಂಗ್ಲಾದೇಶ್ ಪರ ಮೆಹಿದಿ ಹಸನ್ ಮಿರಾಝ್ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿದ್ದರು. 162 ಎಸೆತಗಳನ್ನು ಎದುರಿಸಿದ ಮೆಹಿದಿ, 1 ಸಿಕ್ಸ್ 11 ಫೋರ್‌ಗಳೊಂದಿಗೆ ಮೂರನೇ ದಿನದಾಟದಲ್ಲಿ ಶತಕ ಪೂರೈಸಿದರು.

ಈ ಮೂಲಕ ಬಾಂಗ್ಲಾದೇಶ್ ತಂಡದ ಸ್ಕೋರ್ ಅನ್ನು 444 ಕ್ಕೆ ತಂದು ನಿಲ್ಲಿಸಿದರು.

ಬಾಂಗ್ಲಾದೇಶ್ ತಂಡವು 444 ರನ್‌ಗಳಿಗೆ ಆಲೌಟ್ ಆದ ಬೆನ್ನಲ್ಲೇ ದ್ವಿತೀಯ ಇನಿಂಗ್ಸ್ ಆರಂಭಿಸಿದ ಝಿಂಬಾಬ್ವೆ ತಂಡವು ಕೇವಲ 111 ರನ್‌ಗಳಿಗೆ ಆಲೌಟ್ ಆಯಿತು. ಬಾಂಗ್ಲಾದೇಶ್ ಪರ ಮೆಹಿದಿ ಹಸನ್ ಮಿರಾಝ್ 5 ವಿಕೆಟ್ ಕಬಳಿಸಿ ಮಿಂಚಿದರು. ಇದರೊಂದಿಗೆ ಟೆಸ್ಟ್ ಕ್ರಿಕೆಟ್‌ನಲ್ಲಿ ಹೊಸ ಇತಿಹಾಸ ಕೂಡ ನಿರ್ಮಾಣವಾಯಿತು.

ಅಂದರೆ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಒಂದೇ ದಿನ ಶತಕ ಪೂರೈಸಿ, 5 ವಿಕೆಟ್ ಕಬಳಿಸಿದ ಏಷ್ಯಾದ ಮೊದಲ ಆಟಗಾರ ಹಾಗೂ ವಿಶ್ವದ 2ನೇ ಆಲ್ ರೌಂಡರ್ ಎಂಬ ಹೆಗ್ಗಳಿಕೆಯನ್ನು ಮೆಹಿದಿ ಹಸನ್ ಮಿರಾಝ್ ತಮ್ಮದಾಗಿಸಿಕೊಂಡರು. ಇದಕ್ಕೂ ಮುನ್ನ ಇಂತಹದೊಂದು ಸಾಧನೆ ಮಾಡಿದ್ದು ಇಂಗ್ಲೆಂಡ್‌ನ ಇಯಾನ್ ಬಾಥಮ್.

1984 ರಲ್ಲಿ ನಡೆದ ನ್ಯೂಝಿಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ ಆಲ್‌ರೌಂಡರ್ ಇಯಾನ್ ಬಾಥಮ್ ಒಂದೇ ದಿನ ಶತಕ ಪೂರೈಸಿ, ಅದೇ ದಿನ 5 ವಿಕೆಟ್ ಕಬಳಿಸಿ ವಿಶ್ವ ದಾಖಲೆ ನಿರ್ಮಿಸಿದ್ದರು. ಇದೀಗ 41 ವರ್ಷಗಳ ಬಳಿಕ ಈ ದಾಖಲೆಯನ್ನು ಸರಿಗಟ್ಟುವಲ್ಲಿ ಮೆಹಿದಿ ಹಸನ್ ಮಿರಾಝ್ ಯಶಸ್ವಿಯಾಗಿದ್ದಾರೆ.

ಝಿಂಬಾಬ್ವೆ ವಿರುದ್ಧದ 2ನೇ ಟೆಸ್ಟ್ ಪಂದ್ಯದ ಮೂರನೇ ದಿನ ಶತಕ ಪೂರೈಸಿದ ಮೆಹಿದಿ ಹಸನ್ (104), ಅದೇ ದಿನ 21 ಓವರ್‌ಗಳಲ್ಲಿ ಕೇವಲ 32 ರನ್ ನೀಡಿ 5 ವಿಕೆಟ್ ಕಬಳಿಸಿದ್ದಾರೆ.

ಈ ಮೂಲಕ ಟೆಸ್ಟ್ ಕ್ರಿಕೆಟ್‌ನಲ್ಲಿ ಮೆಹಿದಿ ಹಸನ್ ಮಿರಾಝ್ ಅಪರೂಪದ ವಿಶ್ವದಾಖಲೆಯನ್ನು ತಮ್ಮದಾಗಿಸಿಕೊಂಡಿದ್ದಾರೆ.



# ಪ್ಲೇಆಫ್ ಆಡಲಿರುವ 4 ತಂಡಗಳನ್ನು ಹೆಸರಿಸಿದ ರಾಯುಡು

ಐಪಿಎಲ್ ಸೀಸನ್-18ರ ಲೀಗ್ ಹಂತದ ಪಂದ್ಯಗಳು ಮುಕ್ತಾಯದ ಹಂತಕ್ಕೆ ಬಂದು ನಿಂತಿದೆ. ಈಗಾಗಲೇ ಬಹುತೇಕ ತಂಡಗಳು 10 ಪಂದ್ಯಗಳನ್ನಾಡಿದ್ದು, ಇನ್ನುಳಿದಿರುವುದು ಕೆಲವೇ ಕೆಲವು ಪಂದ್ಯಗಳು ಮಾತ್ರ. ಇದೀಗ ಸಿಎಸ್‌ಕೆ ತಂಡವನ್ನು ಹೊರತುಪಡಿಸಿ ಉಳಿದೆಲ್ಲಾ ತಂಡಗಳು ಪ್ಲೇಆಫ್ ರೇಸ್‌ನಲ್ಲಿದೆ. ಹೀಗೆ ಪ್ಲೇಆಫ್ ರೇಸ್‌ನಲ್ಲಿರುವ ತಂಡಗಳ ನಡುವೆ ಯಾವ ಟೀಮ್‌ಗಳು ಮುಂದಿನ ಸುತ್ತಿಗೆ ಪ್ರವೇಶಿಸಲಿದೆ ಎಂದು ಭವಿಷ್ಯ ನುಡಿದಿದ್ದಾರೆ ಸಿಎಸ್‌ಕೆ ತಂಡದ ಮಾಜಿ ಆಟಗಾರ ಅಂಬಾಟಿ ರಾಯುಡು.

**ಗುಜರಾತ್ ಟೈಟಾನ್ಸ್:** ಅಂಬಾಟಿ ರಾಯುಡು ಅವರ ಪ್ರಕಾರ, ಈ ಬಾರಿ ಗುಜರಾತ್ ಟೈಟಾನ್ಸ್ ತಂಡವು ಪ್ಲೇಆಫ್‌ಗೆ ಪ್ರವೇಶಿಸುವುದು ಖಚಿತ. ಆಡಿರುವ 9 ಪಂದ್ಯಗಳಲ್ಲಿ 6 ಗೆಲುವು ದಾಖಲಿಸಿರುವ ಶುಭ್‌ಮನ್ ಗಿಲ್ ನೇತೃತ್ವದ ಜಿಟಿ ಪಡೆ ಮುಂದಿನ ಪಂದ್ಯಗಳ ಮೂಲಕ ಪ್ಲೇಆಫ್ ಹಂತಕ್ಕೇರಲಿದೆ ಎಂದು ರಾಯುಡು ಹೇಳಿದ್ದಾರೆ.

**ಪಂಜಾಬ್ ಕಿಂಗ್ಸ್:** ಶ್ರೇಯಸ್ ಅಯ್ಯರ್ ಮುಂದಾಳತ್ವದ ಪಂಜಾಬ್ ಕಿಂಗ್ಸ್ ತಂಡ ಕೂಡ ಮುಂದಿನ ಹಂತಕ್ಕೇರಲಿದೆ. ಪಂಜಾಬ್ ಕಿಂಗ್ಸ್ ತಂಡವು 10 ಪಂದ್ಯಗಳ ಮೂಲಕ 13 ಅಂಕಗಳನ್ನು ಕಲೆಹಾಕಿದ್ದು, ಹೀಗಾಗಿ ಪಂಜಾಬ್ ಪಡೆಯನ್ನು ಸಹ ಪ್ಲೇಆಫ್ ಪೈಪೋಟಿಯಲ್ಲಿ ಎದುರು ನೋಡಬಹುದು ಎಂದು ಅಂಬಾಟಿ ರಾಯುಡು ಹೇಳಿದ್ದಾರೆ.

**ಮುಂಬೈ ಇಂಡಿಯನ್ಸ್:** ಹಾರ್ದಿಕ್ ಪಾಂಡ್ಯ ನಾಯಕತ್ವದ ಮುಂಬೈ ಇಂಡಿಯನ್ಸ್ ತಂಡವು ಆರಂಭದಲ್ಲಿ ವಿಫಲರಾದರೂ, ಆ ಬಳಿಕ ಬ್ಯಾಕ್ ಟು ಬ್ಯಾಕ್ 5 ಪಂದ್ಯಗಳಲ್ಲಿ ಜಯ ಸಾಧಿಸಿದೆ. ಇದೀಗ 10 ಪಂದ್ಯಗಳಿಂದ 12 ಅಂಕ ಪಡೆದಿರುವ ಮುಂಬೈ ಇಂಡಿಯನ್ಸ್ ಕೂಡ ಮುಂದಿನ ಪಂದ್ಯಗಳ ಮೂಲಕ ಪ್ಲೇಆಫ್ ಹಂತಕ್ಕೇರಲಿದೆ ಎಂದು ರಾಯುಡು ಹೇಳಿದ್ದಾರೆ.

**ರಾಯಲ್ ಚಾಲೆಂಜರ್ಸ್ ಬೆಂಗಳೂರು:** ಆರ್‌ಸಿಬಿ ತಂಡವು ಈ ಬಾರಿಯ ಐಪಿಎಲ್‌ನಲ್ಲಿ ಭರ್ಜರಿ ಪ್ರದರ್ಶನ ನೀಡುತ್ತಿದೆ. ಈಗಾಗಲೇ 10 ಪಂದ್ಯಗಳಲ್ಲಿ 7 ಗೆಲುವು ದಾಖಲಿಸಿರುವ ರಾಯಲ್ ಪಡೆ ಅಂಕ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ. ಹೀಗಾಗಿ ಈ ಬಾರಿಯ ಪ್ಲೇಆಫ್‌ನಲ್ಲಿ ಆರ್‌ಸಿಬಿ ತಂಡ ಕೂಡ ಕಾಣಿಸಿಕೊಳ್ಳುವುದು ಖಚಿತ ಎಂದಿದ್ದಾರೆ ಅಂಬಾಟಿ ರಾಯುಡು.

# ತವರಲ್ಲೇ ರಾಜಸ್ಥಾನ್ ರಾಯಲ್ಸ್ ವಿಫಲ

## ಐಪಿಎಲ್‌ನ ದ್ವಿತೀಯಾರ್ಧದಲ್ಲಿ ಮುಂಬೈ ತಂಡ ಭರ್ಜರಿ ಪ್ರದರ್ಶನ



**ಸೆಂಚುರಿ ಬಾಲಕ ವೈಭವ್ ಡಕೌಟ್**

ತವರಿನಲ್ಲಿ ನಡೆದ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ರಾಜಸ್ಥಾನ್ ರಾಯಲ್ಸ್ ಹೀನಾಯವಾಗಿ ಸೋಲು ಕಂಡಿದೆ. 218 ರನ್‌ಗಳ ದೊಡ್ಡ ಸ್ಕೋರ್ ಚೇಸ್ ಮಾಡಲಾಗದೇ ರಾಜಸ್ಥಾನ್ 100 ರನ್‌ಗಳ ಅಂತರದಿಂದ ತಲೆ ಬಾಗಿದೆ. ಇದರಿಂದ ಪ್ಲೇ ಆಫ್‌ನಿಂದಲೂ ರಾಯಲ್ಸ್ ಹೊರ ಬಿದ್ದಂತೆ ಆಯಿತು. ಸವಾಯಿ ಮಾನ್ಸಿಂಗ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ತಂಡದ ನಾಯಕ ರಿಯಾನ್ ಪರಾಗ್ ಟಾಸ್ ಗೆದ್ದು ಎದುರಾಳಿ ಮುಂಬೈ ತಂಡವನ್ನು ಬ್ಯಾಟಿಂಗ್‌ಗೆ ಆಹ್ವಾನ ಮಾಡಿದರು. ಮುಂಬೈ ಪರ ಓಪನರ್‌ಗಳಾಗಿ ರೋಹಿತ್ ಶರ್ಮಾ, ರಯಾನ್ ರಿಕೆಲ್ಟನ್ ಮೈದಾನಕ್ಕೆ ಆಗಮಿಸಿದರು. ಈ ಇಬ್ಬರು ರಾಯಲ್ಸ್ ಬೌಲರ್‌ಗಳ ಮೇಲೆ ಸವಾರಿ ಮಾಡಿದರು. ರಯಾನ್ ರಿಕೆಲ್ಟನ್ ಕೇವಲ 28 ಎಸೆತಗಳಲ್ಲಿ 6 ಬೌಂಡರಿ ಹಾಗೂ 3 ಸಿಕ್ಸರ್‌ಗಳಿಂದ ಅಮೋಘವಾದ ಅರ್ಧಶತಕ ಬಾರಿಸಿದರು.

ರೋಹಿತ್ ಶರ್ಮಾ ಕೂಡ ಪಂದ್ಯದಲ್ಲಿ ತಾಳ್ಮೆಯ ಬ್ಯಾಟಿಂಗ್ ಪ್ರದರ್ಶಿಸಿ 31 ಬಾಲ್‌ಗಳಲ್ಲಿ 9 ಬೌಂಡರಿಗಳಿಂದ 50 ರನ್ ಪೂರೈಸಿದರು. ಕಳೆದ ಪಂದ್ಯದಲ್ಲಿ ವಿಫರಾಗಿದ್ದ ರೋಹಿತ್ ಮತ್ತೆ ಬ್ಯಾಟಿಂಗ್ ಹಳಿಗೆ ಮರಳಿದರು. ಸೂರ್ಯಕುಮಾರ್ ಸಿಡಿಲಬ್ಬರದ ಬ್ಯಾಟಿಂಗ್ ಮೂಲಕ 48 ರನ್‌ಗಳ ಕಾಣಿಕೆ ನೀಡಿದರು. ಕೇವಲ 23 ಎಸೆತ ಎದುರಿಸಿದ ಸೂರ್ಯ, 4 ಬೌಂಡರಿ, 3 ಬಿಗ್ ಸಿಕ್ಸರ್‌ನಿಂದ 48 ರನ್‌ಗಳಿಂದ ಅಜೇಯರಾಗಿ ಉಳಿದರು. ಇನ್ನು ಕ್ಯಾಪ್ಟನ್ ಹಾರ್ದಿಕ್ ಪಾಂಡ್ಯ ಕೂಡ 23 ಬಾಲ್‌ಗಳಲ್ಲಿ 6 ಬೌಂಡರಿ, 1 ಸಿಕ್ಸರ್‌ನಿಂದ 48 ರನ್ ಗಳಿಸಿ ಅಜೇಯರಾದರು. ಹೀಗಾಗಿ ಮುಂಬೈ ಇಂಡಿಯನ್ಸ್ 20 ಓವರ್‌ಗಳಲ್ಲಿ ಕೇವಲ 2 ವಿಕೆಟ್ ನಷ್ಟಕ್ಕೆ 218 ರನ್‌ಗಳ ಬಿಗ್ ಟಾರ್ಗೆಟ್ ನೀಡಿತ್ತು. ಈ ಗುರಿಯ ಬೆನ್ನು ಬಿದ್ದ ರಾಜಸ್ಥಾನ್ ಆರಂಭದಲ್ಲೇ ಆಘಾತಕ್ಕೆ ಒಳಗಾಯಿತು. ಕಳೆದ ಪಂದ್ಯದಲ್ಲಿ ಸೆಂಚುರಿ ಸಿಡಿಸಿದ್ದ ವೈಭವ್ ಸೂರ್ಯವಂಶಿ ಡಕೌಟ್ ಆದ್ರೆ, ಯಶಸ್ವಿ ಜೈಸ್ವಾಲ್ 13 ರನ್‌ಗೆ ಪೆವಿಲಿಯನ್ ಸೇರಿದರು. ನಿತೀಶ್ ರಾಣ 9, ನಾಯಕ ಪರಾಗ್ 16, ಧ್ರುವ್ ಜುರೆಲ್ 11, ಹೆಟ್ಮೆರ್ ಡಕೌಟ್, ಶುಭಂ ದುಬೆ 15, ಹೀಗೆ ರಾಜಸ್ಥಾನ್‌ನ ಯಾವ ಆಟಗಾರನೂ ಉತ್ತಮ ಬ್ಯಾಟಿಂಗ್ ಮಾಡಲೇ ಇಲ್ಲ. ಕೊನೆಯಲ್ಲಿ ರಾಜಸ್ಥಾನ್ ಪರ ಬೌಲರ್ ಜೋಫ್ರಾ ಆರ್ಚರ್ 27 ಬಾಲ್‌ನಲ್ಲಿ 2 ಸಿಕ್ಸರ್, 2 ಫೋರ್‌ನಿಂದ 30 ರನ್ ಗಳಿಸಿದರು. ಆದರೆ ಆಗಾಲೇ ಸೋಲುವ ಹಂತಕ್ಕೆ ಬಂದಿದ್ದರಿಂದ ತಂಡವನ್ನು ಮೇಲೆತ್ತಲು ಆಗಲಿಲ್ಲ. ಹೀಗಾಗಿ ರಾಜಸ್ಥಾನ್ ರಾಯಲ್ಸ್ ಕೊನೆದಾಗಿ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡು 16.1 ಓವರ್‌ನಲ್ಲಿ 117 ರನ್ ಮಾತ್ರ ಗಳಿಸಿ ಸೋಲೋಪ್ಪಿಕೊಂಡಿತು. ಅಲ್ಲದೇ ಈ ಪಂದ್ಯ ಸೋಲುವ ಮೂಲಕ ಆರ್‌ಆರ್ ಪ್ಲೇಆಫ್‌ನಿಂದ ಹೊರ ಬಿದ್ದಂತೆ ಆಗಿದೆ.

# ಗೆಲುವಿನ ಬೆನ್ನಲ್ಲೇ ಶ್ರೇಯಸ್ ಅಯ್ಯರ್‌ಗೆ 12 ಲಕ್ಷ ರೂ. ದಂಡ

ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-18 ರಲ್ಲಿ 6 ತಂಡಗಳ 7 ನಾಯಕರುಗಳು ದಂಡದ ಶಿಕ್ಷೆಗೆ ಗುರಿಯಾಗಿದ್ದಾರೆ. ಹೀಗೆ ದಂಡ ಕಟ್ಟಿಸಿಕೊಳ್ಳಲು ಮುಖ್ಯ ಕಾರಣ ಸ್ಲೋ ಓವರ್ ರೇಟ್ ತಪ್ಪು. ಐಪಿಎಲ್ ನಿಯಮದ ಪ್ರಕಾರ, ಪ್ರತಿ ತಂಡಗಳು 20 ಓವರ್‌ಗಳನ್ನು 1 ಗಂಟೆ 30 ನಿಮಿಷಗಳಲ್ಲಿ ಪೂರ್ಣಗೊಳಿಸಬೇಕು.

ಈ ಸಮಯದೊಳಗೆ 20 ಓವರ್‌ಗಳನ್ನು ಪೂರ್ಣಗೊಳಿಸದಿದ್ದರೆ ಆಯಾ ತಂಡಗಳ ನಾಯಕನಿಗೆ ತಲಾ 12 ಲಕ್ಷ ರೂ. ದಂಡ ವಿಧಿಸಲಾಗುತ್ತದೆ.

ಇಲ್ಲಿ ರಾಜಸ್ಥಾನ್ ರಾಯಲ್ಸ್ ತಂಡವನ್ನು ಈ ಬಾರಿ ರಿಯಾನ್ ಪರಾಗ್ ಹಾಗೂ ಸಂಜು ಸ್ಯಾಮ್ಸನ್ ಮುನ್ನಡೆಸಿದ್ದಾರೆ. ಈ ವೇಳೆ ಇಬ್ಬರು ಕೂಡ ಸ್ಲೋ ಓವರ್ ರೇಟ್ ತಪ್ಪು ಮಾಡಿದ್ದಾರೆ.

ಅದರಂತೆ ಒಟ್ಟು 5 ತಂಡಗಳ 6 ನಾಯಕರುಗಳು ದಂಡದ ಶಿಕ್ಷೆಗೆ ಗುರಿಯಾಗಿದ್ದಾರೆ. ಹೀಗೆ ದಂಡ ಕಟ್ಟಿದ ಕ್ಯಾಪ್ಟನ್‌ಗಳು ಯಾರೆಲ್ಲಾ ಎಂದು ನೋಡುವುದಾದರೆ...

**ಶ್ರೇಯಸ್ ಅಯ್ಯರ್:** ಚೆನ್ನೈನ ಚೆಪಾಕ್ ಸ್ಟೇಡಿಯಂನಲ್ಲಿ ನಡೆದ ಚೆನ್ನೈ ಸೂಪರ್ ಕಿಂಗ್ಸ್ ತಂಡದ ವಿರುದ್ಧದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡದ ನಾಯಕ ಶ್ರೇಯಸ್ ಅಯ್ಯರ್ ನಿಗದಿತ ಸಮಯದೊಳಗೆ 20 ಓವರ್‌ಗಳನ್ನು ಪೂರ್ಣಗೊಳಿಸಿಲ್ಲ. ಹೀಗಾಗಿ ಅಯ್ಯರ್ ಅವರಿಗೆ 12 ಲಕ್ಷ ರೂ. ದಂಡ ವಿಧಿಸಲಾಗಿದೆ.

**ಅಕ್ಷರ್ ಪಟೇಲ್:** ದೆಹಲಿಯ ಅರುಣ್ ಜೇಟ್ಲಿ ಸ್ಟೇಡಿಯಂನಲ್ಲಿ ನಡೆದ ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ಅಕ್ಷರ್ ಪಟೇಲ್ ನಿಗದಿತ ಸಮಯದೊಳಗೆ 20 ಓವರ್‌ಗಳನ್ನು ಪೂರ್ಣಗೊಳಿಸಿರಲಿಲ್ಲ. ಹೀಗಾಗಿ ಅವರಿಗೆ 12 ಲಕ್ಷ ರೂ. ದಂಡ ವಿಧಿಸಲಾಗಿದೆ.

**ಹಾರ್ದಿಕ್ ಪಾಂಡ್ಯ:** ಮಾರ್ಚ್ 30 ರಂದು ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಮುನ್ನಡೆಸಿದ ಹಾರ್ದಿಕ್ ಪಾಂಡ್ಯಗೆ 12 ಲಕ್ಷ ರೂ. ದಂಡ ವಿಧಿಸಲಾಗಿದೆ. ಅಹಮದಾಬಾದ್‌ನಲ್ಲಿ ನಡೆದ ಈ ಪಂದ್ಯದಲ್ಲಿ ಸ್ಲೋ ಓವರ್ ತಪ್ಪು ಮಾಡಿದಕ್ಕಾಗಿ ಪಾಂಡ್ಯಗೆ ಈ ಶಿಕ್ಷೆ ವಿಧಿಸಲಾಗಿದೆ.

**ರಿಷಭ್ ಪಂತ್:** ಲಕ್ನೋ ಸೂಪರ್ ಜೈಂಟ್ಸ್ ತಂಡದ ನಾಯಕ ರಿಷಭ್ ಪಂತ್ ಕೂಡ ದಂಡ ತೆತ್ತಿದ್ದಾರೆ. ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ನಿಗದಿತ ಸಮಯದೊಳಗೆ 20 ಓವರ್‌ಗಳನ್ನು ಪೂರ್ಣಗೊಳಿಸದ ಕಾರಣ ಪಂತ್‌ಗೆ 12 ಲಕ್ಷ ರೂ. ದಂಡ ವಿಧಿಸಲಾಗಿದೆ.

**ರಜತ್ ಪಾಟಿದಾರ್:** ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ನಿಗದಿತ ಸಮಯದೊಳಗೆ 20 ಓವರ್‌ಗಳನ್ನು ಪೂರ್ಣಗೊಳಿಸಿರಲಿಲ್ಲ. ಹೀಗಾಗಿ ಇದೀಗ ಆರ್‌ಸಿಬಿ ತಂಡದ ನಾಯಕ ರಜತ್ ಪಾಟಿದಾರ್‌ಗೆ 12 ಲಕ್ಷ ರೂ. ದಂಡ ವಿಧಿಸಲಾಗಿದೆ.

**ಸಂಜು ಸ್ಯಾಮ್ಸನ್:** ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ನಡೆದ ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯದಲ್ಲಿ ಸಂಜು ಸ್ಯಾಮ್ಸನ್ ಕೂಡ ನಿಗದಿತ ಸಮಯದೊಳಗೆ 20 ಓವರ್‌ಗಳನ್ನು ಮುಗಿಸಿರಲಿಲ್ಲ. ಹೀಗಾಗಿ ರಾಜಸ್ಥಾನ್ ರಾಯಲ್ಸ್ ತಂಡದ ನಾಯಕ ಸಂಜು ಸ್ಯಾಮ್ಸನ್‌ಗೆ 24 ಲಕ್ಷ ರೂ. ದಂಡ ವಿಧಿಸಲಾಗಿದೆ. ರಾಜಸ್ಥಾನ್ ರಾಯಲ್ಸ್ ತಂಡವು ರಿಯಾನ್ ಪರಾಗ್ ನಾಯಕತ್ವದಲ್ಲಿ ಒಮ್ಮೆ ಸ್ಲೋ ಓವರ್ ರೇಟ್ ತಪ್ಪು ಮಾಡಿದ್ದರಿಂದ, 2ನೇ ಬಾರಿ ತಪ್ಪು ಪುನರಾವರ್ತಿಸಿದ ಕಾರಣ ಸ್ಯಾಮ್ಸನ್‌ಗೆ 24 ಲಕ್ಷ ರೂ. ದಂಡ ವಿಧಿಸಲಾಗಿದೆ.





Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966